## ಬುಧವಾರ, ೨೦ನೇ ಆಗಸ್ಟ್, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಮಾನ್ಯ ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ ೧೦ ಗಂಟೆಗೆ ಸಭೆ ಸೇರಿತು.

### ಪರಿಚಯ ಪತ್ರಗಳನ್ನು ಸಲ್ಲಿಸುವುದು ಹಾಗೂ ದಾಖಲೆ ಪುಸ್ತಕದಲ್ಲಿ ಸಹಿ ಮಾಡುವುದು

ಈ ಮುಂದಿನ ಸದಸ್ಯರು ತಮ್ಮ ಪರಿಚಯ ಪತ್ರ ಸಲ್ಲಿಸಿ ದಾಖಲೆ ಪುಸ್ತಕದಲ್ಲಿ ಸಹಿ ಮಾಡಿದರು.

೧) ಗೌರವಾನ್ವಿತ ಶ್ರೀಯುತ ಗೋಪಿನಾಥ್ ಬರ್ಡೋಲೋಯಿ (ಅಸ್ಸಾಮ್ : ಸಾಮಾನ್ಯ)

೨) ಗೌರವಾನ್ವಿತ ರೆವೆರೆಂಡ್ ಜೆ.ಜೆ.ಎಂ. ನಿಕೊಲಸ್ ರಾಯ್ (ಅಸ್ಸಾಮ್ : ಸಾಮಾನ್ಯ)

೩) ಪ್ರೊ. ನಿಭರಣ್ ಚಂದ್ರ ಲಸ್ಕರ್ (ಅಸ್ಸಾಮ್ : ಸಾಮಾನ್ಯ)

೪) ಶ್ರೀ ಎ.ಬಿ. ಶ್ರೀ ಲಠ್ಠೆ (ಕೊಲ್ಹಾಪುರ ರಾಜ್ಯ)

೫) ಚೌಧರಿ ನಿಹಾಲ್ ಸಿಂಗ್ ತಕ್ಷಕ (ಪಂಜಾಬ್ ರಾಜ್ಯಗಳು ಗುಂಪು ೩)

**ಶ್ರೀಯುತ ರೋಹಿಣಿಕುಮಾರ್ ಚೌಧರಿ** (ಅಸ್ಸಾಮ್ : ಸಾಮಾನ್ಯ) : ಈಗ ಇಲ್ಲಿರುವ ಸದಸ್ಯರು ೧೪ರ ರಾತ್ರಿ ಅನುಪಸ್ಥಿತರಿದ್ದ ಕಾರಣ ಆ ದಿನ ಪ್ರತಿಜ್ಞಾ ಸ್ವೀಕಾರ ಮಾಡಲಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಆ ಅಂಶಕ್ಕೆ ಈಗ ಬರೋಣ

ದಿನಾಂಕ ೧೪ರ ರಾತ್ರಿ ಸಭೆಯು ಒಂದು ನಿರ್ಣಯವನ್ನು ಅಂಗೀಕರಿಸಿ ಅದರಲ್ಲಿ ಸಭೆಯ ಸದಸ್ಯರು ನಿಗದಿತ ನಮೂನೆಯಲ್ಲಿ ಪ್ರತಿಜ್ಞೆಯನ್ನು ಸ್ವೀಕರಿಸಬೇಕೆಂದು ತಿಳಿಸಿದ್ದು ಸದಸ್ಯರಿಗೆ ನೆನಪಿರಬಹುದು. ಆ ರಾತ್ರಿ ಉಪಸ್ಥಿತರಿದ್ದ ಸದಸ್ಯರು ಪ್ರತಿಜ್ಞೆ ಸ್ವೀಕರಿಸಿದರು. ಆದರೆ ಆ ರಾತ್ರಿ ಕೆಲವು ಸದಸ್ಯರು ಉಪಸ್ಥಿತರಿರಲಿಲ್ಲ. ಇಂದು ಕೆಲವು ಸದಸ್ಯರು ಬಂದಿದ್ದಾರೆ. ಪ್ರತಿಜ್ಞೆ ಸ್ವೀಕರಿಸಿಲ್ಲದ ಎಲ್ಲ ಅಂಥ ಸದಸ್ಯರು ಈಗ ಪ್ರತಿಜ್ಞೆ ಸ್ವೀಕರಿಸಬಹುದಾಗಿದೆ.

### ಪ್ರತಿಜ್ಞೆ ಸ್ವೀಕರಿಸುವುದು

**ಮಾನ್ಯ ಸಭಾಧ್ಯಕ್ಷರು** : ಪ್ರತಿಜ್ಞೆ ಸ್ವೀಕರಿಸದೇ ಇರುವವರು ದಯವಿಟ್ಟು ನೀವಿರುವ ಜಾಗದಲ್ಲೇ ಎದ್ದುನಿಲ್ಲಿ.

(ಈ ಹಿಂದೆ ಪ್ರತಿಜ್ಞೆ ಸ್ವೀಕರಿಸದಿದ್ದವರು ತಮ್ಮ ಜಾಗದಲ್ಲಿ ಎದ್ದು ನಿಂತರು.)

**ಮಾನ್ಯ ಸಭಾಧ್ಯಕ್ಷರು** : ನಾನು ಪ್ರತಿಜ್ಞೆಯನ್ನು ಓದುತ್ತೇನೆ ಮತ್ತು ನಾನು ಓದಿದಂತೆ ಸದಸ್ಯರು ಅದನ್ನು ಪುನರುಚ್ಚರಿಸಬೇಕು.

(ಅಧ್ಯಕ್ಷರು ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಪ್ರತಿಜ್ಞೆಯನ್ನು ಓದಿದರು ಮತ್ತು ಈವರೆಗೆ ಪ್ರತಿಜ್ಞೆ ಸ್ವೀಕರಿಸದಿದ್ದ ಸದಸ್ಯರು ಮುಂದಿನಂತೆ ಪ್ರತಿಜ್ಞೆ ಸ್ವೀಕರಿಸಿದರು.

ಭಾರತದ ಜನತೆ ಕಷ್ಟ ಹಾಗೂ ತ್ಯಾಗದಿಂದ ಸ್ವಾತಂತ್ರ್ಯ ಗಳಿಸಿದ್ದು ಈಗ ಸಂವಿಧಾನ ರಚನಾ ಸಭೆಯ ಸದಸ್ಯನಾದ........ ಎಂಬ ಹೆಸರಿನವನಾದ ನಾನು ಈ ಪುರಾತನ ನಾಡು ಜಗತ್ತಿನಲ್ಲಿ ತನ್ನ ಹಕ್ಕಿನ ಸ್ಥಾನಗಳಿಸಲು ಮತ್ತು ಜಗತ್ತಿನ ಶಾಂತಿ ಸಂವರ್ಧನೆಗೆ ಹಾಗೂ ಮನುಕುಲದ ಒಳಿತಿಗೆ ಮನಃಪೂರ್ವಕ ಕೊಡುಗೆ ನೀಡಲು

ಸಾಧ್ಯವಾಗುವಂತೆ ಭಾರತ ಹಾಗೂ ಭಾರತೀಯರ ಸೇವೆಗಾಗಿ ಕೊನೆಯವರೆಗೂ ನನ್ನನ್ನು ನಾನು ವಿನಮ್ರವಾಗಿ ಸಮರ್ಪಿಸಿಕೊಳ್ಳುತ್ತೇನೆ.

**ಧ್ವಜಾರೋಹಣ ಸಮಾರಂಭಕ್ಕೆ ಸಂಬಂಧಿಸಿದಂತೆ ಭಾರತದ ಕೆಲವು ಭಾಗಗಳಲ್ಲಿ ನಡೆದ ಘಟನೆಗಳು**

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ನಾವು ಇವತ್ತಿನ ನಡವಳಿಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆ ನಾನು ತುರ್ತು ಸಾರ್ವಜನಿಕ ಮಹತ್ತ್ವದ ಒಂದು ವಿಷಯದ ಬಗ್ಗೆ ನಿಮ್ಮೆಲ್ಲರ ಗಮನ ಸೆಳೆಯಲು ಬಯಸುತ್ತೇನೆ. ಆ ವಿಷಯ ಹೀಗಿದೆ. ಸ್ವಾತಂತ್ರ್ಯೋತ್ಸವ ದಿನದಂದು ಧ್ವಜಾರೋಹಣ ಸಮಾರಂಭವನ್ನು ನೋಡಲು ಲಕ್ಷಾಂತರ ಜನ ಆಗ್ರಾ ಕೋಟೆಯಲ್ಲಿ ಸೇರಿದ್ದರೆಂದು ವರದಿಯಾಗಿದೆ. ಒಂದು ಬ್ರಿಟಿಷ್ ಆಜ್ಞೆಯ ಮೇರೆಗೆ ಒಬ್ಬ ಆಂಗ್ಲ ಅಧಿಕಾರಿಯು ಯೂನಿಯನ್ ಜಾಕ್ ಧ್ವಜವನ್ನು ಕೆಳಗಿಳಿಸಿ ಹೊಸ ಧ್ವಜವನ್ನು ಹಾರಿಸುವುದಾದರೆ ತಾನು ಯಾವ ಸೇನಾದಳಕ್ಕೂ ಸಮಾರಂಭದಲ್ಲಿ ಭಾಗವಹಿಸಲು ಅನುಮತಿಸುವುದಿಲ್ಲವೆಂದು ಹೇಳಿರುವುದಾಗಿ ವರದಿಯಾಗಿದೆ. ಎಲ್ಲ ಜನರು ಬಹಳ ನಿರಾಶರಾದರು. ಆದರೆ ಭಾರತದ ಸೇನಾದಳದ ಸದಸ್ಯರಲ್ಲೊಬ್ಬ ವ್ಯಕ್ತಿ ಭಾರತದ ರಾಷ್ಟ್ರಧ್ವಜವನ್ನು ಹಾರಿಸಿ ವೀಕ್ಷಕರನ್ನು ಸಮಾಧಾನಪಡಿಸಿದರು. ಇದು ಎಷ್ಟರಮಟ್ಟಿಗೆ ಸರಿ ಹಾಗೂ ಸರಿ ಎಂದಾದರೆ ಬ್ರಿಟಿಷ್ ಅಧಿಕಾರಿಯಿಂದ ರಾಷ್ಟ್ರಧ್ವಜಕ್ಕಾದ ಅವಮಾನದಂಥ ಅತ್ಯಂತ ಮಹತ್ತ್ವದ ವಿಷಯವನ್ನು ಕುರಿತು ಯಾವ ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂಬ ಬಗ್ಗೆ ನಾನು ಸದನದ ಸನ್ಮಾನ್ಯ ನಾಯಕರಿಂದ ತಿಳಿಯಲು ಬಯಸುತ್ತೇನೆ. ನಾನು ಇನ್ನೊಂದು ಘಟನೆಯನ್ನು ತಿಳಿಸುತ್ತೇನೆ. ಹೈದರಾಬಾದ್ ರಾಜ್ಯದ ಭಾರತ ಅಂಚೆ ಕಚೇರಿಯಲ್ಲಿ ನಮ್ಮ ರಾಷ್ಟ್ರಧ್ವಜವನ್ನು ಹಾರಿಸಿದಾಗ ಹೈದರಾಬಾದ್ ಅಧಿಕಾರಿಗಳು ಅದನ್ನು ಕಿತ್ತುಹಾಕಿದರೆಂದು ವರದಿಯಾಗಿದೆ. ಇದು ಎಷ್ಟರಮಟ್ಟಿಗೆ ಸರಿ ಹಾಗೂ ಸರಿ ಎಂದಾದರೆ ಭಾರತ ಸರ್ಕಾರದ ಆಸ್ತಿಯ ಮೇಲೆ ಹಾರಿಸಿದ ನಮ್ಮ ರಾಷ್ಟ್ರಧ್ವಜವನ್ನು ಸಂರಕ್ಷಿಸಿ ಕಾಪಾಡಲು ಯಾವ ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂದು ನಾನು ಸದನದ ಸನ್ಮಾನ್ಯ ನಾಯಕರಿಂದ ತಿಳಿಯಲು ಬಯಸುತ್ತೇನೆ. ಸ್ವತಂತ್ರ ನಿಜಾಮ್ ಸರ್ಕಾರದ ಬಲ ಏನೇ ಇದ್ದರೂ ಕೇಂದ್ರ ಸರ್ಕಾರವು ಈ ವಿಷಯದಲ್ಲಿ ಕೈಗೊಳ್ಳುವ ಕ್ರಮಗಳೇನು? ನಮ್ಮ ರಾಷ್ಟ್ರಧ್ವಜಕ್ಕೆ ಯಾರೇ ಯಾವುದೇ ರೀತಿಯಲ್ಲಿ ಅವಮಾನ ಮಾಡಿದರೂ ನಾವು ಸಹಿಸಲಾರೆವು. ಆದ್ದರಿಂದ ಸದನದ ಸನ್ಮಾನ್ಯ ನಾಯಕರು ಈ ಬಗ್ಗೆ ಹೇಳಿಕೆ ನೀಡುವಂತೆ ವಿನಂತಿಸಬೇಕೆಂದು ತಮ್ಮಲ್ಲಿ ಕೇಳುತ್ತೇನೆ.

**ಶ್ರೀ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತಗಳು : ಸಾಮಾನ್ಯ) : ಮಾನ್ಯರೆ, ಕೆಲವು ಅಧಿಕಾರಿಗಳ ನಡತೆಯನ್ನು ಕುರಿತು ವಿವರಣೆ ನೀಡುವಂತೆ ಸದನದ ನಾಯಕರಿಗೆ ನೀವು ತಿಳಿಸುವುದಕ್ಕೆ ಮುಂಚೆ ನಾನು ಇನ್ನೊಂದು ವಿಷಯವನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಈ ಸಮಾರಂಭ ನಡೆಯುವುದಕ್ಕೆ ಮೂರ್‍ನಾಲ್ಕು ದಿನಗಳಿಗೆ ಮುಂಚೆ ಕಾನ್ಪುರದಲ್ಲಿ ಇಬ್ಬರು ಮಿಲಿಟರಿ ಅಧಿಕಾರಿಗಳಿಂದ. ಆದ ಎರಡು ಆದೇಶಗಳ ಬಗ್ಗೆ ಗೌರವಾನ್ವಿತ ಸರ್ದಾರ್ ಬಲದೇವ್‌ಸಿಂಗ್, ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ಹಾಗೂ ಗೌರವಾನ್ವಿತ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಗಮನಕ್ಕೆ ತಂದಿದ್ದೆ. ಆ ಪೈಕಿ ಒಂದೂ ಕಾನ್ಪುರ ಸಿ.ಓ.ಡಿ.ಯ ಪ್ರಭಾರದಲ್ಲಿರುವ ಕರ್ನಲ್ ಹಿಲ್‌ಮನ್ ಅವರದು. ಇನ್ನೊಂದು ತಾಂತ್ರಿಕ ಶಾಖೆಯ ಪ್ರಭಾರದಲ್ಲಿರುವ ಇನ್ನೊಬ್ಬ ಮಿಲಿಟರಿ ಅಧಿಕಾರಿಯಿಂದ ಆದದ್ದು. ಅದರಲ್ಲಿ ಯೂನಿಯನ್ ಜಾಕ್ ಧ್ವಜವನ್ನು ಕೆಳಗಿಳಿಸಿ ಆ ಜಾಗದಲ್ಲಿ ಯಾವುದೇ ಬೇರೆ ಧ್ವಜವನ್ನು ಹಾರಿಸಲು ಆದೇಶಗಳು ಬಂದ ಹೊರತು ಯಾವುದೇ ಸಮಾರಂಭ ನಡೆಯುವಂತಿಲ್ಲವೆಂದು ಖಚಿತವಾಗಿ ತಿಳಿಸಲಾಗಿತ್ತೆಂದು ತಿಳಿದುಬಂದಿದೆ. ಅಲ್ಲದೇ ಅಂಥ ಯಾವುದೇ ಸಮಾರಂಭಗಳಲ್ಲಿ ಭಾಗವಹಿಸುವಂತೆ ಸಿವಿಲ್ ಅಧಿಕಾರಿಗಳು ಮಿಲಿಟರಿ ಅಧಿಕಾರಿಗಳನ್ನು ಆಮಂತ್ರಿಸಿದರೆ ಅವರು ಯಾರೂ ಹಾಗೆ ಹೋಗುವಂತಿಲ್ಲವೆಂದು ಯು.ಪಿ. ಏರಿಯಾ ಕಮಾಂಡ್‌ನಿಂದ ಆಜ್ಞೆಯಾಗಿದೆಯೆಂದೂ ತಿಳಿಸಲಾಗಿದೆ. ಅದರ ಅರ್ಥ ನನಗೆ ಗೊತ್ತಿಲ್ಲ. ಬಹುಶಃ ಸಂಯುಕ್ತ ಪ್ರಾಂತಗಳ ಮಿಲಿಟರಿ ಚಲನವಲನ

ಹಾಗೂ ಮಿಲಿಟರಿ ದಳಗಳ ಆಡಳಿತ ನಡೆಸುವ ಯು.ಪಿ.ಕಮಾಂಡ್ ಇರಬಹುದು. ಆಗ ಸಿ.ಓ.ಡಿ.ಯ ಭಾರತೀಯ ಸಿಬ್ಬಂದಿ ಹಾಗೂ ತಾಂತ್ರಿಕ ಸಿಬ್ಬಂದಿ ನಮ್ಮನ್ನು ಎಂದರೆ ಕಾನ್ಪುರದ ಕಾಂಗ್ರೆಸ್ ಕಮಿಟಿಯನ್ನು ಭೇಟಿಯಾಗಿ ಈ ಆದೇಶಗಳನ್ನು ನಮ್ಮ ಗಮನಕ್ಕೆ ತಂದರು. ನಾನು ಭಾರತದ ಗೌರವಾನ್ವಿತ ಪ್ರಧಾನಿ ಹಾಗೂ ಸಂಯುಕ್ತ ಪ್ರಾಂತ್ಯಗಳ ಗೌರವಾನ್ವಿತ ಪ್ರಧಾನಿಯವರನ್ನು ಈ ಬಗ್ಗೆ ಗಮನಹರಿಸುವಂತೆ ವಿನಂತಿಸಿದೆ. ನನ್ನ ಸ್ನೇಹಿತ ಶ್ರೀಕೃಷ್ಣದತ್ತ ಪಾಲಿವಾಲ್ ಹೇಳಿದ ಮೇರೆಗೆ ಆಗ್ರಾದಲ್ಲೂ ಧ್ವಜ ಹಾರಿಸಲು ಆಗಲಿಲ್ಲ. ಈ ಆದೇಶಗಳಿದ್ದಾಗ್ಯೂ ಭಾರತೀಯ ಸಿಬ್ಬಂದಿ ಧ್ವಜಾರೋಹಣಕ್ಕೆ ಯತ್ನಿಸಿದರು. ಆದರೆ ಅವರು ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾದರೋ ಇಲ್ಲವೋ ಗೊತ್ತಿಲ್ಲ. ಝಾನ್ಸಿ ಕಾನ್ಪುರ ಹಾಗೂ ಆಗ್ರಾಗಳ ಮಿಲಿಟರಿ ಕೇಂದ್ರಗಳಲ್ಲಿ ಕಡೇ ಪಕ್ಷ ನನ್ನ ಪ್ರಾಂತ್ಯದಲ್ಲಂತೂ ಇಂಥ ಆದೇಶಗಳನ್ನು ಹೊರಡಿಸಲಾಗಿತ್ತು. ಇದು ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನೂ ತಿಳಿಯಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಸಂವಿಧಾನ ರಚನೆಯ ನಡವಳಿಯ ಉದ್ದೇಶಕ್ಕಾಗಿ ನಾವು ಇಂದು ಇಲ್ಲಿ ಸಭೆ ಸೇರಿದ್ದೇವೆ ಎಂದು ನಾನು ತಿಳಿಸಬಯಸುತ್ತೇನೆ. ನಾವು ಇನ್ನೂ ಭಾರತದ ಶಾಸನಸಭೆಯಾಗಿ ಸಭೆ ಸೇರಿಲ್ಲ. ಆ ಸ್ವರೂಪದಲ್ಲಿ ಆದಾಗ ಇಂಥ ಪ್ರಶ್ನೆಗಳು ಹಾಗೂ ಇನ್ನೂ ಹಲವಾರು ಮಹತ್ತ್ವದ ಪ್ರಶ್ನೆಗಳನ್ನು ಎತ್ತಬಹುದು. ಆದ್ದರಿಂದ ನಾವು ಶಾಸನಸಭೆಯಾಗಿ ಸಭೆ ಸೇರುವವರೆಗೂ ಸದಸ್ಯರು ತಮ್ಮ ಪ್ರಶ್ನೆಗಳನ್ನು ಮೀಸಲಿರಿಸಬೇಕೆಂದು ಹಾಗೂ ಅವುಗಳನ್ನು ಸಂವಿಧಾನ ರಚನಾಸಭೆಯಲ್ಲಿ ಎತ್ತಬಾರದೆಂದು ಸದಸ್ಯರನ್ನು ಬಿನ್ನವಿಸುತ್ತೇನೆ. ಏಕೆಂದರೆ ನಾವು ಈಗ ಸಂವಿಧಾನ ರಚನೆಯ ಕುರಿತು ಯೋಚಿಸಬೇಕಾಗಿದೆಯೇ ಹೊರತು ದೈನಂದಿನ ಆಡಳಿತದ ಬಗೆಗಲ್ಲ. ಶಾಸನ ಸಭೆ ಹಾಗೂ ಸಂವಿಧಾನ ರಚನಾಸಭೆಯ ನಡುವಣ ವ್ಯತ್ಯಾಸವೇನು ಹಾಗೂ ಅವುಗಳನ್ನು ಪ್ರತ್ಯೇಕಿಸಿ ನೋಡುವ ಗೆರೆ ಎಲ್ಲಿ ಹಾಕಬೇಕು ಎಂಬ ಬಗ್ಗೆ ನನಗೇ ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಇಂದಿನ ಸಭೆಯನ್ನು ಸಂವಿಧಾನ ರಚನೆಯ ಅಂಶವನ್ನು ಕುರಿತು ಚರ್ಚಿಸಲು ಕರೆಯಲಾಗಿದ್ದು ನಾವೀಗ ಆ ಕೆಲಸದಲ್ಲಿ ತೊಡಗಿದ್ದೇವೆ.

**ಶ್ರೀ ಬಾಲಕೃಷ್ಣ ಶರ್ಮ :** ನಿಮ್ಮ ಹೇಳಿಕೆಗೆ ಬದ್ಧನಾಗಿ ನಾನು ಒಂದು ಅಂಶವನ್ನು ತಿಳಿಸುವುದೇನೆಂದರೆ ಭಾರತದ ಸಂವಿಧಾನ ರಚನಾಸಭೆಯು ಭಾರತದ ಆಡಳಿತವನ್ನು ವಹಿಸಿಕೊಂಡಿದೆ. ಸಂವಿಧಾನ ರಚನಾ ಸಭೆಯಾದ ನಾವು ಬ್ರಿಟಿಷ್ ಸರ್ಕಾರದಿಂದ ನಮ್ಮ ದೇಶದ ಆಡಳಿತವನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ನಾವು ಇಂದು ಭಾರತ ಒಕ್ಕೂಟದ ಶಾಸನಸಭೆ ಎಂಬಂತೆ ಸಭೆ ಸೇರಿರದಿದ್ದರೂ ಸಂವಿಧಾನ ರಚನಾ ಸಭೆಯಲ್ಲೂ ಕಾಲಕಾಲಕ್ಕೆ ಇಂಥ ಪ್ರಶ್ನೆಗಳನ್ನೆತ್ತುವ ಹಕ್ಕು ಹೊಂದಿದ್ದೇವೆ ಎಂಬುದು ನನ್ನ ಅಭಿಪ್ರಾಯ.

**ಮಾನ್ಯ ಸಭಾಧ್ಯಕ್ಷರು :** ಈ ಹಂತದಲ್ಲಿ ಇಂಥ ಪ್ರಶ್ನೆಗಳೇಳಬಹುದು ಎಂಬ ಅರಿವು ಸದನದ ನಾಯಕರಿಗೆ ಇರಲಿಲ್ಲವಾದ ಕಾರಣ ಅವರು ಈ ಹೊತ್ತಿನಲ್ಲಿ ಸಭೆಯಲ್ಲಿ ಇಲ್ಲ.

**ಒಬ್ಬ ಗೌರವಾನ್ವಿತ ಸದಸ್ಯ :** ಅವರು ಇಲ್ಲಿ ಇದ್ದಾರೆ.

**ಮಾನ್ಯ ಸಭಾಧ್ಯಕ್ಷರು :** ನಾನು ವಿಷಾದಿಸುತ್ತೇನೆ. ಅವರು ಇಲ್ಲಿ ತಮ್ಮ ಸ್ಥಳದಲ್ಲಿರಲಿಲ್ಲ. ಅವರು ಸದನದ ಇನ್ನೊಂದು ಸ್ಥಳದಲ್ಲಿದ್ದಾರೆ. ಅವರು ಈ ವಿಷಯಗಳನ್ನು ಕುರಿತು ಈ ಹಂತದಲ್ಲಿ ಏನಾದರೂ ಹೇಳಲು ಬಯಸುತ್ತಾರೆಯೇ ನನಗೆ ತಿಳಿಯದು.

**ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಪ್ರಧಾನಿಯವರು ಮಾತನಾಡುವುದಕ್ಕೆ ಮುಂಚೆ ನಾನು ಜಬಲ್‌ಪುರದಲ್ಲಿ ನಡೆದ ಘಟನೆಯನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ.

ಜಬಲ್‌ಪುರ ಒಂದು ಮಹತ್ವದ ಮಿಲಿಟರಿ ಕೇಂದ್ರ. ಅಲ್ಲಿ ಮಿಲಿಟರಿ ಪರೇಡ್ ನಡೆದು ಎಲ್ಲ ಸಾರ್ವಜನಿಕ ಹಾಗೂ ಪ್ರಮುಖ ಖಾಸಗಿ ಕಟ್ಟಡಗಳ ಮೇಲೂ ಧ್ವಜ ಹಾರಿಸಲಾಗಿತ್ತು. ಮಿಲಿಟರಿ ಕಟ್ಟಡಗಳ ಮೇಲೆಯೂ

ಯಾವುದೇ ಆಚರಣೆ ಸಡಗರ ಇಲ್ಲದೇ ಧ್ವಜ ಹಾರಿಸಬೇಕೆಂದೂ ಕೇಂದ್ರ ಸರ್ಕಾರದಿಂದ ಆದೇಶವಾಗಿತ್ತೆಂದು ವರದಿಯಾಗಿದೆ. ಮಿಲಿಟರಿ ಪ್ರದೇಶದಲ್ಲಿದ್ದ ಕೆಲವು ಕಟ್ಟಡಗಳಲ್ಲಿ ಧ್ವಜ ಹಾರಿಸತಕ್ಕದ್ದಲ್ಲವೆಂದು ಉದ್ಯೋಗಿಗಳಿಗೆ ತಿಳಿಸಲಾಗಿತ್ತೆಂದು ತಿಳಿದುಬಂದಿದೆ.

ಈ ಸಂಬಂಧದಲ್ಲಿ ಮಿಲಿಟರಿ ಹಾಗೂ ಮಿಲಿಟರಿಗೆ ಸಂಬಂಧಿಸಿದ ಕಚೇರಿಗಳಿಗೆ ಬೇರೆ ಬೇರೆ ಆದೇಶಗಳಾಗಿದ್ದವೇ ಅಥವಾ ಆದೇಶಗಳು ಒಂದೇ ಇದ್ದು ಮಿಲಿಟರಿ ಅಧಿಕಾರಿಗಳು ಜಬಲ್‌ಪುರದಲ್ಲಿ ತಮ್ಮ ಇಚ್ಛೆಯ ಮೇರೆಗೆ ಮಾಡಿದರೇ ಎಂಬ ಬಗ್ಗೆ ನಾನು ತಿಳಿಯಬಯಸುತ್ತೇನೆ.

**ಹುಸೇನ್ ಇಮಾಮ್** (ಬಿಹಾರ್ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ನಾನು ಮಾತಿಗೆ ಮಧ್ಯಪ್ರವೇಶ ಮಾಡಬಹುದೇ? ಈಗ ಎತ್ತಿರುವ ಪ್ರಶ್ನೆ ಅತ್ಯಂತ ಮಹತ್ತ್ವಪೂರ್ಣವಾದುದು. ಎಂದರೆ ಈ ಸಭೆಯು ಕೇವಲ ಶಾಸನ ರಚನಾಸಭೆಯಾಗಿ ಕೆಲಸ ಮಾಡುತ್ತಿದೆಯೇ ಅಥವಾ ಶಾಸನ ಪ್ರಾಧಿಕಾರವೂ ಆಗಿದೆಯೋ ಎಂಬುದು ಪ್ರಶ್ನೆ. ೧೪ನೇ ದಿನಾಂಕದವರೆಗೆ ನಮಗೆ ವಿಧಾಯಿ ಕಲಾಪಗಳೆಂದು ಕರೆಯಲಾಗುವ ಯಾವುದರ ಕುರಿತು ಚರ್ಚಿಸಲು ಅನುಮತಿ ಇರಲಿಲ್ಲ. ಆದರೆ ಆ ಮಧ್ಯರಾತ್ರಿಯಿಂದ ಭಾರತವು ಆಡಳಿತದ ಪೂರ್ಣ ಅಧಿಕಾರವನ್ನು ವಹಿಸಿಕೊಂಡ ಮೇಲೆ ಈ ಸದನದ ಸದಸ್ಯರಿಗೆ ಪ್ರಸ್ತಾವದ ಮಂಡನೆಗೆ ಹಾಗೂ ತುರ್ತು ಸಾರ್ವಜನಿಕ ಮಹತ್ತ್ವದ ವಿಷಯಗಳ ಚರ್ಚೆಗೆ ಅವಕಾಶ ನೀಡಬೇಕಾದುದು ಸೂಕ್ತ. ಒಂದು ಗಂಟೆ ಸಮಯವನ್ನು ಪ್ರಶ್ನೆಗಳಿಗೆ ಉಳಿದ ಸಮಯವನ್ನು ಶಾಸನ ಪ್ರಕಾರ್ಯಗಳಿಗೆ ಬಳಸಿ ಶಾಸನಸಭೆಗೆ ಪೂರ್ಣ ಅವಕಾಶ ನೀಡಲಾರಂಭಿಸಬೇಕು ಎಂದು ನನ್ನ ಅನಿಸಿಕೆಯಲ್ಲ. ಇದರಿಂದ ಸಂವಿಧಾನ ರಚನೆಯ ಸಮಯವನ್ನು ಪೂರ್ಣವಾಗಿ ಕಿತ್ತುಕೊಂಡಂತಾಗಿ ಕೈಯಲ್ಲಿರುವ ಕೆಲಸಕ್ಕೆ ವಿಳಂಬ ಉಂಟುಮಾಡಿದಂತಾಗುತ್ತದೆ. ಆದರೆ ಪ್ರಜಾಪ್ರಭುತ್ವ ಸಂರಕ್ಷಣೆಯ ಮಹತ್ತ್ವಪೂರ್ಣ ಹಾಗೂ ಮೂಲಭೂತ ಹಕ್ಕಾಗಿರುವ ನಿಲುವಳಿ ಸೂಚನೆಯ ಹಕ್ಕನ್ನು ನಾವು ಕಾಪಾಡಬೇಕು. ಏಕೆಂದರೆ ಈ ದಿನಗಳಲ್ಲಿ ಅದು ತುಂಬ ಮಹತ್ತ್ವದ್ದಾಗುತ್ತದೆ. ಆದ್ದರಿಂದ ಅಧ್ಯಕ್ಷರು ನಿಲುವಳಿ ಸೂಚನೆ ಕುರಿತಂತೆ ಶಾಸನಸಭೆಯ ನಿಯಮಗಳನ್ನು ಅಳವಡಿಸಿಕೊಳ್ಳಬೇಕೆಂದು ನನ್ನ ಸೂಚನೆ. ಇದರಿಂದ ಅಗತ್ಯವಿದ್ದರೆ ಮತ್ತು ಅಗತ್ಯವಿದ್ದಾಗ ತುರ್ತು ಸಾರ್ವಜನಿಕ ಮಹತ್ತ್ವದ ವಿಷಯಗಳನ್ನು ಈ ಸದನದಲ್ಲಿ ವ್ಯಕ್ತಪಡಿಸಬಹುದು.

**ಪಂಡಿತ್ ಲಕ್ಷ್ಮಿಕಾಂತ ಮೈತ್ರ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನನ್ನ ಸ್ನೇಹಿತರಾದ ಶ್ರೀ ಸಿಧ್ವಾ ಹಾಗೂ ಶ್ರೀ ಬಾಲಕೃಷ್ಣ ಶರ್ಮ ಎತ್ತಿದ ಅಂಶಗಳನ್ನು ಲಘುವಾದುದೆಂದು ತಳ್ಳಿಹಾಕುವಂತಿಲ್ಲ. ಅಧ್ಯಕ್ಷ ಸ್ಥಾನದಿಂದ ಬಂದ ಅಭಿಪ್ರಾಯ ನನಗೆ ಮೆಚ್ಚಿಗೆಯಾಗಿದೆ. ನಾವು ಸಂವಿಧಾನ ರಚನಾಸಭೆಯ ಸದಸ್ಯರಾಗಿ ಹಾಗೂ ಡೊಮಿನಿಯನ್ ಭಾರತದ ಸಂಸತ್ ಸದಸ್ಯರಾಗಿ ಎರಡು ಬಗೆಯ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇವೆಯೆ ಎಂಬುದನ್ನು ಹೇಳುವುದು ಕಷ್ಟ. ಅದೇನೇ ಇರಲಿ ವಾಸ್ತವವೆಂದರೆ ಭಾರತ ಸಂವಿಧಾನ ರಚನಾಸಭೆಯ ಸದಸ್ಯರಾಗಿ ಕುಳಿತಿರುವಾಗ ಅತ್ಯಂತ ಮಹತ್ತ್ವಪೂರ್ಣ ಪ್ರಶ್ನೆಗಳನ್ನು ಕಾಲಕಾಲಕ್ಕೆ ಖಂಡಿತವಾಗಿಯೂ ಎತ್ತಲಾಗುತ್ತದೆ. ಆದರೆ ಅಂಥವುಗಳನ್ನು ನಾವು ಭಾರತದ ಸಂಸತ್ತಿನ ಕಾರ್ಯನಿರ್ವಹಣೆಯ ಅಧಿಕಾರ ಸ್ವೀಕರಿಸುವವರೆಗೆ ಪರಿಗಣನೆಗೆ ಎತ್ತಿಕೊಳ್ಳದೆ ಮುಂದೂಡಲು ಸಾಧ್ಯವಾಗದು. ನಾವು ಸಂವಿಧಾನ ರಚನಾ ಸಮಿತಿಯಾಗಿ ಉಳಿಯದೇ ಡೊಮಿನಿಯನ್ ಭಾರತ ಸಂಸತ್ತಾಗಿ ಕಾರ್ಯನಿರ್ವಹಿಸುವ ಕಾಲ ಯಾವಾಗ ಬರುವುದೆಂಬುದು ನಮಗೆ ಗೊತ್ತಿಲ್ಲ. ಸಂವಿಧಾನ ರಚನೆಯನ್ನು ಮುಕ್ತಾಯಗೊಳಿಸುವುದಕ್ಕೆ ಮುಂಚೆ ನಾವು ಶಾಸನಸಭೆಯಾಗಿ ಅಥವಾ ಡೊಮಿನಿಯನ್ ಸಂಸತ್ತಾಗಿ ಕಾರ್ಯನಿರ್ವಹಿಸುತ್ತೇವೆಯೇ ಎಂಬ ಬಗ್ಗೆ ಯಾವುದೇ ನಿಯಮಗಳನ್ನೂ ಮಾಡಿಲ್ಲ ಮತ್ತು ಯಾವುದೇ ಸೂಚನೆಯನ್ನೂ ನೀಡಲಾಗಿಲ್ಲ. ಆದ್ದರಿಂದ ನಾವು ಶಾಸನ ನಿಕಾಯವಾಗಿ ಯಾವಾಗ ಕೆಲಸಕ್ಕೆ ತೊಡಗುತ್ತೇವೆಂಬ ಬಗ್ಗೆ ನಮಗೆ ಗೊತ್ತಿಲ್ಲದಿರುವಾಗ ಇಂಥ ಮಹತ್ತ್ವದ ವಿಷಯಗಳನ್ನು ಸದನಕ್ಕೆ ತಿಳಿಸಲು ಅವಕಾಶ ನೀಡಬೇಕು.

ವಿಷಯದ ಮಹತ್ತ್ವವನ್ನು ಪರಿಗಣಿಸಿದರೆ ಅದು ಕಾರ್ಯಾಂಗದ ವ್ಯಾಪ್ತಿಗೆ ಸಂಬಂಧಪಟ್ಟಿರುವುದಾದರೂ ಧ್ವಜಾರೋಹಣ ಸಮಾರಂಭ ಹಾಗೂ ಭಾರತದ ರಾಷ್ಟ್ರಧ್ವಜದ ಅಂಗೀಕಾರ ಇವುಗಳನ್ನು ಸದನದ ಒಮ್ಮತದ ಅನುಮೋದನೆಯಿಂದಲೇ ನಿರ್ಧರಿಸಲಾಗಿತ್ತೆಂಬುದನ್ನು ಹಾಗೂ ಧ್ವಜಾರೋಹಣ ಸಮಾರಂಭವು ಡೊಮಿನಿಯಮ್ ಭಾರತ ಸರ್ಕಾರದ ಅಡಿಯಲ್ಲಿನ ಸಾರ್ವಜನಿಕ ಸಮಾರಂಭವೆಂಬುದನ್ನು ಸದನ ನೆನಪಿಲ್ಲಿಡಬೇಕು. ಆದ್ದರಿಂದ ನನ್ನ ಸ್ನೇಹಿತರಾದ ಶ್ರೀ ಸಿಧ್ವಾ ಹಾಗೂ ಶ್ರೀ ಬಾಲಕೃಷ್ಣಶರ್ಮ ತಿಳಿಸಿದಂತೆ ಹಾಗೂ ಪತ್ರಿಕೆಯಲ್ಲಿ ವರದಿಯಾದಂತೆ ಭಾರತ ಸರ್ಕಾರದ ಆದೇಶದ ಉಲ್ಲಂಘನೆಯ ಪ್ರಶ್ನೆ ಖಂಡಿತವಾಗಿಯೂ ಬಹಿರಂಗಪಡಿಸಬೇಕಾದಂಥದೇ ಆಗಿದೆ. ಸಂವಿಧಾನ ರಚನಾಸಭೆಯ ನಿಯಮಗಳು ಹಾಗೂ ಕಾರ್ಯವಿಧಾನದ ಮೇರೆಗೆ ನಿರ್ಬಂಧಿಸಲಾಗಿರುವುದರಿಂದ ನಿಲುವಳಿ ಈಗ ಸಾಧ್ಯವಿಲ್ಲವಾದರೂ ನಾವು ಶಾಸನ ನಿಕಾಯವಾಗಿ ಕೆಲಸ ಪ್ರಾರಂಭಿಸುವವರೆಗೆ ಸದನದ ಮುಂದೆ ಬಂದ ಇಂಥ ವಿಷಯಗಳ ಅಭಿವ್ಯಕ್ತಿ ಹಾಗೂ ಚರ್ಚೆಗೆ ಕೆಲವು ನಿಯಮಗಳನ್ನು ಮಾಡಬಹುದು ಹಾಗೂ ಪದ್ಧತಿಗಳನ್ನು ರೂಢಿಸಬಹುದು. ಸಂವಿಧಾನ ರಚನಾ ಸಭೆಯ ಸದಸ್ಯರಾಗಿ ಹಾಗೂ ಡೊಮಿನಿಯನ್ ಭಾರತದ ಸಂಸತ್ತಿನ ಸದಸ್ಯರಾಗಿ ನಮ್ಮ ಪಾತ್ರಕ್ಕಿರುವ ವ್ಯತ್ಯಾಸದ ನಡುವೆ ಗೆರೆ ಎಳೆಯಬೇಕಾದ ಬಗ್ಗೆ ನಮಗಿರುವ ಗೊಂದಲವನ್ನು ಕುರಿತ ನಿಮ್ಮ ಭಾವನೆ ನನಗೆ ಅರ್ಥವಾಗುತ್ತದೆ. ಆದರೆ ಅಲ್ಲಿಯವರೆಗೆ ಮತ್ತು ಆ ಬಗ್ಗೆ ನಿಯಮಗಳನ್ನು ರಚಿಸುವವರೆಗೆ ಈ ಅವಧಿಯಲ್ಲಿ ಕಡೇಪಕ್ಷ ಒಂದು ಪದ್ಧತಿಯನ್ನು ರೂಢಿಸಬೇಕಾದುದು ಅಗತ್ಯವಾಗುತ್ತದೆ.

ಆದ್ದರಿಂದ ಒಂದು ಹೇಳಿಕೆ ನೀಡಿ ವಾಸ್ತವಾಂಶಗಳನ್ನು ಹಾಗೂ ಅವರು ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮದ ಸ್ವರೂಪವನ್ನು ವಿವರಿಸಿ ಭಾರತದ ಪ್ರಧಾನಿಯವರನ್ನು ವಿನಂತಿಸಬಹುದು. ಈಗ ಸದ್ಯಕ್ಕೆ ಅವರು ಒಂದು ಹೇಳಿಕೆ ನೀಡಿದರೆ ನಮಗೆ ಸಮಾಧಾನವಾಗುತ್ತದೆ. ಪೂರ್ಣಪ್ರಮಾಣದ ನಿಲುವಳಿ ಮಂಡನೆ ಹಾಗೂ ಚರ್ಚೆ ಅಗತ್ಯವಿಲ್ಲವೆಂದು ತೋರುತ್ತದೆ. ಆದರೆ ಇಂಥ ಮಹತ್ತ್ವದ ವಿಷಯದ ಬಗ್ಗೆ ಭಾರತದ ಪ್ರಧಾನಿ ನಮಗೆ ಸಮಾಧಾನವೆನಿಸುವಂತೆ ಒಂದು ಹೇಳಿಕೆ ನೀಡಬೇಕೆಂಬುದು ನಮ್ಮ ಸ್ಪಷ್ಟ ಅಭಿಪ್ರಾಯ. ಈ ಮಹತ್ತ್ವದ ಅಂಶವನ್ನು ಕುರಿತು ನಾನು ಇಷ್ಟು ಹೇಳಲು ಬಯಸುತ್ತೇನೆ.

**ಶ್ರೀ ಮಹಾವೀರ ತ್ಯಾಗಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ ಒಂದು ಕ್ರಿಯಾಲೋಪವನ್ನು ಕುರಿತು.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ನಾವು ಸ್ವತಂತ್ರ ಡೊಮಿನಿಯನ್ ಶಾಸನಸಭೆಯಾಗಿ ಯಾವಾಗ ಇಲ್ಲಿ ಸೇರುತ್ತೇವೆ ಎಂಬುದನ್ನು ದಯವಿಟ್ಟು ತಿಳಿಸಿ.

**ಶ್ರೀ ಮಹಾವೀರ ತ್ಯಾಗಿ :** ಮಾನ್ಯರೇ, ನಾನು ಎತ್ತುತ್ತಿರುವ ಕ್ರಿಯಾಲೋಪದ ಅಂಶವೇನೆಂದರೆ ನಾವು ಸಂವಿಧಾನ ರಚನಾಸಭೆಯಾಗಿ ಹಾಗೂ ದೇಶದ ಶಾಸನಸಭೆಯಾಗಿ ಒಟ್ಟೊಟ್ಟಿಗೆ ಕೆಲಸ ಮಾಡಲಾಗದು. ಇದು ಲೋಪವಾಗುತ್ತದೆ. ಏಕೆಂದರೆ ಸಂಸದೀಯ ಸ್ವರೂಪದ ಎಲ್ಲ ವಿಷಯಗಳಲ್ಲಿ ನಾವು ಸರ್ಕಾರದ ಕಾರ್ಯನೀತಿಯನ್ನು ಚರ್ಚಿಸಬೇಕಾಗುತ್ತದೆ. ಹಾಗೆ ಚರ್ಚಿಸುವಾಗ ಸರ್ಕಾರದ ಸದಸ್ಯರಾಗಿರದ ತಟಸ್ಥರಾಗಿರುವ ಸಭಾಧ್ಯಕ್ಷರು ಇರಬೇಕಾಗುತ್ತದೆ. ಸಂವಿಧಾನ ರಚನಾಸಭೆಯಲ್ಲಿ ನಾವು ಸರ್ಕಾರವಾಗಿ ಅಥವಾ ಉದ್ಯೋಗಿಗಳಾಗಿ ಅಥವಾ ಉದ್ಯೋಗಿಯೇತರರಾಗಿ ಕುಳಿತಿರುವುದಿಲ್ಲ. ಸಂವಿಧಾನ ರಚನೆಯಲ್ಲಿ ಅತ್ಯುತ್ತಮ ಕೊಡುಗೆ ಸಲ್ಲಿಸುವ ವ್ಯಕ್ತಿಗಳಾಗಿ ಇರುತ್ತೇವೆ. ನಮ್ಮ ಚರ್ಚೆಗಳಿಗೆ ನೀವು ಅಧ್ಯಕ್ಷತೆ ವಹಿಸಿರುತ್ತೀರಿ. ಇನ್ನೊಂದು ಬದಿಯಲ್ಲಿರುವ ನಮ್ಮ ಸ್ನೇಹಿತರು ಸೂಚಿಸಿದಂತೆ ನಾವು ಖಂಡನಾ ಗೊತ್ತುವಳಿ, ನಿಲುವಳಿ ಸೂಚನೆಗಳ ಬಗ್ಗೆ ಚರ್ಚಿಸಲಾರಂಭಿಸಿದರೆ ನಾವು ಪ್ರತ್ಯೇಕವಾಗಿ ಬ್ಲಾಕ್‌ಗಳಾಗಿ ಅಥವಾ ಪಕ್ಷಗಳಾಗಿ ಕುಳಿತುಕೊಳ್ಳಬೇಕಾಗುತ್ತದೆ. ಹಲವಾರು ಸಮಸ್ಯೆಗಳು ಉದ್ಭವಿಸುತ್ತವೆ. ನಾವು ನಮ್ಮ ಪಕ್ಷಗಳೊಂದಿಗೆ ಮತ ಹಾಕಬೇಕಾಗುತ್ತದೆ. ನಾವು ಬೇರೆ ಬೇರೆ ಪಕ್ಷಗಳಾಗಿ ವಿಭಜನೆಗೊಳ್ಳಬೇಕಾಗುತ್ತದೆ. ಈಗಿನ ನಿಯತ ಪದ್ಧತಿ ಅಸ್ತವ್ಯಸ್ತವಾಗುತ್ತದೆ. ಆದ್ದರಿಂದ

ನನ್ನ ಸಲಹೆ ಏನೆಂದರೆ ನಾವು ಏಕಕಾಲಕ್ಕೆ ಎರಡೂ ಕಾರ್ಯಗಳನ್ನು ನಿರ್ವಹಿಸುವುದಾದರೆ ಅದನ್ನು ಒಂದೇ ನಿಗದಿತ ದಿನ ಸ್ಥಳದಲ್ಲಿ ಮಾಡಲಾಗುವುದಿಲ್ಲ. ನಾವು ಸಮಯವನ್ನು ವಿಭಾಗಿಸಿ, ವೇಳಾಪಟ್ಟಿ ತಯಾರಿಸಬೇಕಾಗುತ್ತದೆ. ಇಂಥ ದಿನ ನಾವು ಸಂವಿಧಾನ ರಚನಾಸಭೆಯಾಗಿ ಸಭೆ ಸೇರುತ್ತೇವೆ ಎಂದು ಮೊದಲೇ ಪ್ರಕಟಪಡಿಸಿದರೆ ನಾವು ನಿಮ್ಮ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈಗಿನಂತೆ ಕಲಾಪ ನಡೆಸಬಹುದು. ಅಂತೆಯೇ ಡೊಮಿನಿಯನ್ ಸಂಸತ್ತಾಗಿ ಸೇರಿದರೆ ನಾವು ನಮ್ಮ ಆಶಯವನ್ನು ವ್ಯಕ್ತಪಡಿಸಬೇಕು, ಪಕ್ಷಗಳಾಗಿ ಕುಳಿತುಕೊಳ್ಳಬೇಕು. ನಮ್ಮ ಪಕ್ಷಕ್ಕೆ ನಿಷ್ಠರಾಗಿದ್ದು, ಪಕ್ಷದ ಗೊತ್ತುವಳಿಗಳನ್ನು ಬೆಂಬಲಿಸಿ ವಿರೋಧಿಗಳನ್ನು ವಿರೋಧಿಸಬೇಕು. ಇಂಥ ಸಂದರ್ಭಗಳಲ್ಲಿ ಸಚಿವರು ಅಥವಾ ಇತರರು ಪ್ರಸ್ತಾವಿಸಿದ ಪ್ರಸ್ತಾವಗಳನ್ನು ಬೆಂಬಲಿಸುವ ಅಗತ್ಯವಿಲ್ಲ. ಆದ್ದರಿಂದ ನನ್ನ ವಿನಂತಿ ಏನೆಂದರೆ ನಾವು ಒಂದೇ ಸದನದಲ್ಲಿ ಒಬ್ಬರದೇ ಅಧ್ಯಕ್ಷತೆಯಲ್ಲಿ ಸಂವಿಧಾನ ರಚನಾಸಭೆಯಾಗಿ ಮತ್ತು ದೇಶದ ಸಂಸತ್ತಾಗಿ ಎರಡು ಬಗೆಯ ಕೆಲಸ ನಿರ್ವಹಿಸಲಾಗದು.

**ಸಭಾಧ್ಯಕ್ಷರು** : ಶ್ರೀ ಸಂತಾನಮ್ ಅವರೇ,

**ಪಂಡಿತ್ ಹೃದಯನಾಥ ಕುಂಜ್ರು** (ಸಂಯುಕ್ತ ಪ್ರಾಂತ್ಯ : ಸಾಮಾನ್ಯ) : ಮಾನ್ಯ ಅಧ್ಯಕ್ಷರೇ, ಈ ಸದನದ ಒಬ್ಬ ಗೌರವಾನ್ವಿತ ಸದಸ್ಯರು ಕ್ರಿಯಾಲೋಪವನ್ನೆತ್ತಿದ್ದಾರೆ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ನಾನು ಕ್ರಿಯಾಲೋಪದ ಬಗ್ಗೆ ಮಾತನಾಡುತ್ತೇನೆ.

**ಪಂಡಿತ್ ಹೃದಯನಾಥ ಕುಂಜ್ರು** : ಇನ್ನಾರೇ ಸದಸ್ಯರಿಗೆ ಮಾತನಾಡಲು ಅನುಮತಿಸುವುದಕ್ಕೆ ಮುಂಚೆ ಆ ಅಂಶದ ಬಗ್ಗೆ ನಿರ್ಧರಿಸಬೇಕು .

**ಶ್ರೀ ಕೆ. ಸಂತಾನಮ್** : ನಾನು ಕ್ರಿಯಾಲೋಪದ ಬಗ್ಗೆ ಮಾತನಾಡುತ್ತೇನೆ. ಈ ವಿಷಯದಲ್ಲಿ ಎರಡು ಅಂಶಗಳಿವೆ. ಈ ಸಭೆಯ ಸ್ಥಾನಮಾನವೇನು? ಸ್ಥಾನಮಾನವನ್ನು ಪರಿಭಾಷಿಸಿದ ಅನಂತರ ಅದರ ಕಾರ್ಯನಿರ್ವಹಣೆಯನ್ನು ಕುರಿತು ನಿರ್ಧರಿಸಬೇಕಾಗುತ್ತದೆ. ಅದಕ್ಕೆ ಎರಡು ಸ್ಥಾನಮಾನಗಳಿವೆಯೆಂದು ಆ ಪೈಕಿ ಒಂದು ಸಂವಿಧಾನ ರಚನಾಸಭೆ ಇನ್ನೊಂದು ಶಾಸನಸಭೆ ಎಂದು ವಾದಿಸಲಾಗಿದೆ. ನನ್ನ ಅಭಿಪ್ರಾಯವೇನೆಂದರೆ ಅದಕ್ಕೆ ಒಂದೇ ಸ್ಥಾನಮಾನವಿದೆ. ಇದು ಸಂವಿಧಾನ ರಚನಾಸಭೆ. ಭಾರತ ಸ್ವಾತಂತ್ರ್ಯ ಅಧಿನಿಯಮದಲ್ಲಿ ಡೊಮಿನಿಯನ್ ದೇಶದ ಸಂವಿಧಾನ ರಚನಾಸಭೆಯು ಮೊದಲಿಗೆ ಡೊಮಿನಿಯನ್ ದೇಶದ ಶಾಸನಸಭೆಯ ಅಧಿಕಾರಗಳನ್ನು ಚಲಾಯಿಸಬೇಕು ಎಂದು ತಿಳಿಸಲಾಗಿದೆ. ಈ (ಸಂವಿಧಾನ ರಚನಾ) ಸಭೆಯು ಅಖಂಡ ಅನಿವಾರ್ಯ ನಿಕಾಯ (ಘಟಕ)ವಾಗಿದ್ದು ಇದು ಡೊಮಿನಿಯನ್ ಶಾಸನಸಭೆಯ ಅಧಿಕಾರಗಳನ್ನು ಚಲಾಯಿಸಬೇಕಾಗುತ್ತದೆ. ಆದ್ದರಿಂದ ಅದೇ ಸದಸ್ಯರನ್ನು ಒಳಗೊಂಡಿರುವ ಈ ಸದನವನ್ನು ಎರಡಾಗಿ ವಿಭಜಿಸುವುದರಲ್ಲಿ ಅರ್ಥವೇ ಇಲ್ಲ. ಇಂದು ಇದು ಸಂವಿಧಾನ ರಚನಾಸಭೆ ನಾಳೆ ಶಾಸನಸಭೆಯಾಗಿರುತ್ತದೆ ಎಂದು ಹೇಳುವುದು ಕಾನೂನುಬಾಹಿರವಾಗುತ್ತದೆ ಎಂದು ನನ್ನ ಭಾವನೆ. ಇದು ಒಂದು ನಿಕಾಯ (ಘಟಕ) ಅನುಕೂಲಕ್ಕಾಗಿ ನಾವು ಸ್ವಲ್ಪ ಸಮಯವನ್ನು ಒಂದು ಕೆಲಸಕ್ಕಾಗಿ ಮತ್ತು ಸ್ವಲ್ಪ ಸಮಯವನ್ನು ಇನ್ನೊಂದು ಕೆಲಸಕ್ಕಾಗಿ ಮೀಸಲಿಡಬಹುದು. ಮತ್ತು ಅಗತ್ಯವೆನಿಸಿದರೆ ಎರಡು ಬಗೆಯ ನಿಯಮಗಳನ್ನು ಮಾಡಬಹುದು. ಇಂದು ಇದು ಶಾಸನಸಭೆಯಲ್ಲದಿರುವುದರಿಂದ ಈ ವಿಷಯವನ್ನೆತ್ತುವಂತಿಲ್ಲ. ನಾಳೆ ಇದು ಶಾಸನಸಭೆ ಮಾತ್ರವಾಗಿರುವುದರಿಂದ ಬೇರೊಂದು ಪ್ರಶ್ನೆಯನ್ನು ಎತ್ತಬಾರದು ಎಂಬ ಮಾತು ಕಾನೂನು ಸಮ್ಮತವಾಗುತ್ತದೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ಇದನ್ನು ನಾವು ಒಂದು ನಿಕಾಯ (ಘಟಕ)ವೆಂದು ಪರಿಗಣಿಸಬೇಕು. ಈ ಎರಡು ಬಗೆಯ ಪ್ರಕಾರ್ಯಗಳನ್ನು ನಿಯಂತ್ರಿಸುವ ವಿಧಾನದ ಬಗ್ಗೆ ನಿಯಮಗಳನ್ನು ರಚಿಸಲು ಒಂದು ಸಮಿತಿಯನ್ನು ರಚಿಸಬಹುದು. ಈ ನಿಕಾಯದ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಆತುರದ ನಿರ್ಣಯ ಅಥವಾ ಆದೇಶ ನೀಡಬಾರದೆಂಬುದು ನನ್ನ ಸಲಹೆ, ಇದನ್ನು

ವಕೀಲರು ಜಾಗರೂಕತೆಯಿಂದ ಪರಿಶೀಲಿಸಬೇಕು ಮತ್ತು ಎಲ್ಲ ರೀತಿಯ ತೊಂದರೆಗಳಿಗೆ ದಾರಿಮಾಡಿಕೊಡುವ ಯಾವುದಕ್ಕೂ ನಾವು ಬದ್ಧರಾಗಬಾರದು.

**ಶ್ರೀ ತಜಮಲ್ ಹುಸೇನ್** (ಬಿಹಾರ್ : ಮುಸ್ಲಿಮ್) : ಮಾನ್ಯರೇ ನಾವು ಈಗ ಸಂವಿಧಾನ ರಚನಾ ಸಭೆಯ ಸದಸ್ಯರಾಗಿ ಇದ್ದೇವೆ. ಆಗಸ್ಟ್ ೧೫ರಂದು ನಾವು ಸಂಸತ್ ಸದಸ್ಯರಾಗಿ ಅಧಿಕಾರಗ್ರಹಣ ಮಾಡಿದ್ದು ನಿಜ. ಆದರೆ ಇಂದು ಸಂವಿಧಾನ ರಚನಾಸಭೆಗೆ ಹಾಜರಾಗುವಂತೆ ನೀವು ಕರೆ ನೀಡಿದಿರಿ; ಆದರೆ ಕೇಂದ್ರ ಸಂಸತ್ತಿನ ಸಭೆಗೆ ಅಲ್ಲ. ಮಾನ್ಯರೇ ಇಲ್ಲಿ ನಾವು ಈ ಸದನವು ರಚಿಸಿದ ಕಾರ್ಯವಿಧಾನದ ನಿಯಮಗಳು ಹಾಗೂ ಸ್ಥಾಯೀ ಆದೇಶಗಳ ನಿಯಂತ್ರಣದಲ್ಲಿದ್ದೇವೆ. ಬೇರೆ ಯಾವುದೇ ನಿಯಮವಲ್ಲ ಮತ್ತು ಆ ನಿಯಮಗಳಿಗೆ ಬದ್ಧರಾಗಿದ್ದೇವೆ. ಇಂದು ನಾವಿಲ್ಲಿ ಸಂವಿಧಾನ ರಚನಾಸಭೆಯ ಸದಸ್ಯರಾಗಿ ಸಭೆ ಸೇರಿದ್ದೇವೆಯೇ ಹೊರತು ಸಂಸತ್ ಸದಸ್ಯರಾಗಿ ಅಲ್ಲ. ಸಂಸತ್ ಸದಸ್ಯರಾಗಿ ಸಭೆ ಸೇರಿದ್ದಿದ್ದರೆ ಭಾರತ ಸರ್ಕಾರದ ಎಲ್ಲ ಸದಸ್ಯರು ಇಲ್ಲಿ ಹಾಜರಿರಬೇಕಿತ್ತು. ಮಾನ್ಯರೇ ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದ ತುರ್ತು ಮಹತ್ತ್ವದ ವಿಷಯ ಚರ್ಚೆಗೆ ಬಂದಿದೆ ಎಂದಿಟ್ಟುಕೊಳ್ಳೋಣ. ಆಗ ಶಿಕ್ಷಣದ ಪ್ರಭಾರದಲ್ಲಿರುವ ಸದಸ್ಯರ ಉಪಸ್ಥಿತಿ ಅಗತ್ಯವಾಗುತ್ತದೆ. ಆದರೆ ಅದು ಸಾಧ್ಯವಾಗುವುದಿಲ್ಲ. ಏಕೆಂದರೆ ಅವರು ಸಂವಿಧಾನ ರಚನಾಸಭೆಯ ಸದಸ್ಯರಲ್ಲ. ಆದ್ದರಿಂದ ನನ್ನ ಬಿನ್ನಹವೇನೆಂದರೆ ಚರ್ಚೆಗೆ ಎತ್ತಿಕೊಂಡಿರುವ ವಿಷಯ ಅತ್ಯಂತ ಮಹತ್ತ್ವದ್ದಾದರೂ ಹಾಗೂ ಭಾರತದ ಗೌರವಾನ್ವಿತ ಪ್ರಧಾನಿ ಆ ಬಗ್ಗೆ ಗಂಭೀರ ಕ್ರಮ ಕೈಗೊಳ್ಳಬೇಕಾಗಿದೆಯಾದರೂ ನಮ್ಮ ನಿಯಮಗಳ ಅಡಿಯಲ್ಲಿ, ನಾವು ಈ ವಿಷಯದ ಚರ್ಚೆಗೆ ಅಧಿಕಾರ ಪಡೆದಿಲ್ಲ. ಆದ್ದರಿಂದ ನಾನು ಎತ್ತಿರುವ ಕ್ರಿಯಾಲೋಪವೇನೆಂದರೆ ನಾವು ಇಂದು ಸಂವಿಧಾನ ರಚನಾಸಭೆಯ ಸದಸ್ಯರಾಗಿ ಸಭೆ ಸೇರಿದ್ದು, ನಮ್ಮ ನಿಯಮಗಳ ನಿರ್ಬಂದಕ್ಕೊಳಪಟ್ಟಿದ್ದು ಈಗ ಎತ್ತಲಾಗಿರುವ ವಿಷಯವನ್ನು ನಾವು ಚರ್ಚಿಸಲು ಆಗುವುದಿಲ್ಲ.

**ಶ್ರೀ ಆರ್.ವಿ. ಧುಳೇಕರ್** (ಸಂಯುಕ್ತ ಪ್ರಾಂತ್ಯ : ಸಾಮಾನ್ಯ) : *[ಮಾನ್ಯರೆ, ಈಗ ಎತ್ತಲಾಗಿರುವ ಕ್ರಿಯಾಲೋಪ ನನಗೆ ಒಪ್ಪಿಗೆಯಿಲ್ಲ. ಆಗಸ್ಟ್ ೧೫ರಿಂದ ಸಂವಿಧಾನ ರಚನಾಸಭೆ ಪೂರ್ಣ ಅಧಿಕಾರ ಪಡೆದುಕೊಂಡಿದೆ. ಅದಕ್ಕೆ ಯಾವುದೇ ದ್ವಂದ್ವಭಾವವಿಲ್ಲ. ಆಗಸ್ಟ್ ೧೫ಕ್ಕೆ ಮುಂಚೆ ಇದು ಸಂವಿಧಾನ ರಚನಾಸಭೆಯಾಗಿದ್ದು ಅದಕ್ಕೆ ಶಾಸನಾಧಿಕಾರವಾಗಲೀ ದೇಶದ ಆಡಳಿತಕಾರ್ಯಗಳಲ್ಲಿ ಬದಲಾವಣೆ ಮಾಡುವ ಅಧಿಕಾರವಿಲ್ಲ ಎಂದು ಹೇಳಬಹುದಾಗಿತ್ತು. ಆಗಸ್ಟ್ ೧೫ರಿಂದ ಸಂವಿಧಾನ ರಚನೆ ಸೇರಿದಂತೆ ಆಡಳಿತದ ಪೂರ್ಣ ಅಧಿಕಾರವನ್ನು ವಹಿಸಿಕೊಂಡಿರುವುದರಿಂದ ನಾವು ಒಂದು ಸ್ಥಳದಲ್ಲಿ ಕುಳಿತು ಆ ಕಾರ್ಯಗಳನ್ನು ನಿರ್ವಹಿಸಬಹುದಾಗಿದೆ.

ಇನ್ನೊಂದು ಪ್ರಶ್ನೆಯನ್ನು ಎತ್ತಲಾಗಿದ್ದು ಅದೆಂದರೆ ಆಗಸ್ಟ್ ೧೫ರಂದು ಸಂವಿಧಾನ ರಚನಾಸಭೆಯ ಮುಂದಿನ ಅಧಿವೇಶನ ದಿನಾಂಕ ೨೦ರಂದು ಪ್ರಾರಂಭವಾಗುತ್ತದೆ ಎಂದು ತಿಳಿಸಲಾಗಿತ್ತು. ಎಲ್ಲ ಅಧಿಕಾರಗಳು ಸಂವಿಧಾನ ರಚನಾಸಭೆಯಲ್ಲಿ ನಿಹಿತವಾಗಿವೆ ಎಂದು ನಾನು ಮತ್ತೆ ಹೇಳಬಯಸುತ್ತೇನೆ. ಅಧಿವೇಶನ ನಡೆಯುವಾಗ ಅದರ ವ್ಯಾಪ್ತಿಯಾಚೆಗಿನದು ಯಾವುದೂ ಇಲ್ಲ. ನಾವು ಯಾವ ಸಮಯದಲ್ಲಾದರೂ ಏನು ಬೇಕಾದರೂ ಮಾಡಬಹುದು. ನಮ್ಮ ಅನುಕೂಲಕ್ಕಾಗಿ ನಾವು ಸಂವಿಧಾನ ಕುರಿತ ಚರ್ಚೆಯನ್ನು ೧೦ ಗಂಟೆಯಿಂದ ೧ ಗಂಟೆಯವರೆಗೆ ನಡೆಸಬಹುದು ಎಂಬುದು ಬೇರೆ ವಿಚಾರ. ಅನಂತರ ೩ ಗಂಟೆಯಿಂದ ೫ ಗಂಟೆವರೆಗೆ ಆಡಳಿತ ವಿಷಯಗಳನ್ನು ಚರ್ಚಿಸಬಹುದು. ನಮಗೆ ಎರಡೂ ಕಾರ್ಯಗಳಿಗೂ ಸಂಪೂರ್ಣ ಅಧಿಕಾರವಿದ್ದು, ಕಾನೂನು ರೀತ್ಯ ಸಹ ಹಾಗೆ ಮಾಡುವುದನ್ನು ಯಾರೂ ತಡೆಯಲಾರರು. ನಮಗೆ ಕಾನೂನು ನಿರ್ಬಂಧಗಳಿವೆ ಎಂದು ಹೇಳುವವರು ಕಾನೂನಿಗೆ ವಿರುದ್ಧವಾಗಿದ್ದಾರೆ. ಅವರು ಸ್ವಾತಂತ್ರ್ಯ ಅಧಿನಿಯಮವನ್ನು ಅಭ್ಯಾಸ ಮಾಡಿ ಆಡಳಿತ ನಮ್ಮ ಕೈಯಲ್ಲಿರುವುದನ್ನು ಅರಿತುಕೊಳ್ಳಬೇಕು. ನಾವು ಈಗ ಅಧಿವೇಶನವನ್ನು ಮುಂದೂಡಿ ಈಗ ದೆಹಲಿಯಿಂದ ಹೊರಟು, ಒಂದು ಅಥವಾ ಎರಡು ತಿಂಗಳ ಅನಂತರ

ಅಧಿವೇಶನ ಕರೆದು ಆಗ ಶಾಸನಸಭೆಯಾಗಿ ಕಾರ್ಯನಿರ್ವಹಿಸಬಹುದು. ಆದ್ದರಿಂದ ಕ್ರಿಯಾಲೋಪದ ಮಂಡನೆ ಸರಿಯಲ್ಲ. ಈ ಸಭೆಗೆ ಒಂದೇ ಒಂದು ವ್ಯಾಪಕ ದೃಷ್ಟಿಕೋನವಿದ್ದು ಅದರಲ್ಲಿ ಸಂವಿಧಾನ ರಚನೆ ಹಾಗೂ ಆಡಳಿತ ನಿರ್ವಹಣೆ ಎರಡೂ ಸೇರುತ್ತವೆ.]*

**ಶ್ರೀ ಟಿ. ಪ್ರಕಾಶಂ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಸಂವಿಧಾನ ರಚನಾಸಭೆಯ ಸ್ಥಾನಮಾನ ಪರಮಾಧಿಕಾರ ನಿಕಾಯದ ಸ್ವರೂಪದ್ದಾಗಿದ್ದು ಅದು ಒಂದೇ ಮತ್ತು ಅವಿಭಾಜ್ಯ ಎಂದು ಹೇಳುವುದು ತಪ್ಪಾಗುತ್ತದೆ. ಆಗಸ್ಟ್ ೧೫ರ ತರುವಾಯ ಈ ನಿಕಾಯವು ಸಂವಿಧಾನ ರಚನೆಗೆ ಸಂಬಂಧಿಸಿ ಹಾಗೂ ಪರಮಾಧಿಕಾರವುಳ್ಳ ಶಾಸಕಾಂಗ ಸ್ವರೂಪದಲ್ಲಿ ಮಾಡಬೇಕಾದ ಕೆಲಸಗಳಿಗೆ ಸಂಬಂಧಿಸಿ ಪರಮಾಧಿಕಾರ ನಿಕಾಯವಾಯಿತು. ಮಾನ್ಯರೆ, ಸಂವಿಧಾನ ರಚನೆಗೆ ಸಂಬಂಧಿಸಿದಂತೆ ಪರಮಾಧಿಕಾರವುಳ್ಳ ಶಾಸನಸಭೆಯ ಮುಂದೆ ನಾನು ಕೆಲವು ವಿಷಯಗಳನ್ನು ಮಂಡಿಸಬೇಕಾಗಿದೆ. ನನ್ನ ಪ್ರಕಾರ ಆ ವಿಷಯಗಳು ಶಾಸನಸಭೆಯಲ್ಲಿ ಇತ್ಯರ್ಥವಾಗದೇ ಸಂವಿಧಾನ ರಚನಾ ಕಾರ್ಯವನ್ನು ಮುಂದುವರಿಸಲು ಆಗುವುದಿಲ್ಲ. ಆದ್ದರಿಂದ ಈ ಸದನವು ಎರಡು ಬಗೆಯ ಸಾಮರ್ಥ್ಯ ಹೊಂದಿದ್ದು ಸಂವಿಧಾನ ರಚನೆಗೆ ಸಂಬಂಧಪಟ್ಟ ಸಮಯವನ್ನು ವ್ಯರ್ಥಗೊಳಿಸದೇ ಪರಮಾಧಿಕಾರದ ಶಾಸನಸಭೆಯಾಗಿ ಪರಿವರ್ತನೆಗೊಂಡು ಒಂದೆರಡು ಮಹತ್ತ್ವದ ಪ್ರಶ್ನೆಗಳನ್ನು ಪರಿಶೀಲಿಸಿ ಅನಂತರ ಮತ್ತೆ ಸಂವಿಧಾನ ರಚಿಸುವ ಸಂವಿಧಾನ ರಚನಾಸಭೆಯಾಗಿ ಬದಲಾಗಬಹುದು. ಇದು ಸರಿಯಾದ ಮತ್ತು ಸಂವಿಧಾನಾತ್ಮಕ ಸ್ಥಾನ. ಆದ್ದರಿಂದ ಅದು (ಸಂವಿಧಾನ ರಚನೆಯ) ಒಂದೇ ಸ್ಥಾನಮಾನ ಹೊಂದಿರುವ ಅವಿಭಾಜ್ಯ ನಿಕಾಯವೆಂದು ಪರಿಗಣಿಸಬಾರದು. ಅಲ್ಲದೆ ಸದನದ ಮುಂದೆ ಬರುವ ಇತರ ವಿಷಯಗಳನ್ನು ಲೆಕ್ಕಿಸದೇ ಸಂವಿಧಾನ ರಚನೆಯಲ್ಲೂ ತೊಡಗಿರಬಾರದು.

**ಮಾನ್ಯ ಸಭಾಧ್ಯಕ್ಷರು** : ಈ ಅಂಶದ ಬಗ್ಗೆ ಈಗಾಗಲೇ ನಾವು ಸಾಕಷ್ಟು ಚರ್ಚಿಸಿದ್ದೇವೆ. ಎರಡು ಪ್ರಶ್ನೆಗಳನ್ನು ಎತ್ತಲಾಗಿದೆ. ಒಂದು ಪ್ರಶ್ನೆ ಸಂವಿಧಾನ ರಚನಾಸಭೆಯ ಸ್ಥಾನಮಾನ ಇಂದು ಇರುವಂತೆ. ಇನ್ನೊಂದು ಪ್ರಶ್ನೆ ೧೪/೧೫ರಂದು ನಡೆದ ಘಟನೆಗಳ ಕುರಿತಾದುದು. ಎರಡೂ ಅಂಶಗಳ ಬಗ್ಗೆ ಅಥವಾ ಯಾವುದೇ ಅಂಶದ ಬಗ್ಗೆ ತಮಗೆ ತೋರುವಂತೆ ಹೇಳಿಕೆ ನೀಡುವಂತೆ ಸದನದ ನಾಯಕರನ್ನು ಕೇಳುತ್ತೇನೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಎರಡು ಪ್ರಶ್ನೆಗಳಲ್ಲಿ ಯಾವುದನ್ನು ಮೊದಲು ಎತ್ತಿಕೊಳ್ಳಬೇಕೆಂದು ನನಗೆ ತೋಚುತ್ತಿಲ್ಲ. ನನಗೆ ಈಗ ಒಂದು ಕಷ್ಟ ತಲೆದೋರಿದೆ. ಈ ಸದನದಲ್ಲಿ ಹೇಳಲಾದುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಲೇ ಇದ್ದೇನೆ. ಆದರೆ ಹೇಳಿದುದರ ಪೈಕಿ ಕೇವಲ ೧/೪ ಭಾಗದಷ್ಟನ್ನು ನಾನು ಕೇಳಿಸಿಕೊಂಡಿದ್ದೇನೆ. ಈ ಸಭಾಂಗಣದ ಧ್ವನಿವ್ಯವಸ್ಥೆ ಬದಲಾಗಿದೆಯೇ ಅಥವಾ ಕಳೆದ ಕೆಲವು ದಿನಗಳ ಅನುಭವಗಳಿಂದ ನಮ್ಮ ಧ್ವನಿ ಬದಲಾಗಿದೆಯೇ ಅಥವಾ ಏನೋ ಆಗಿದೆ. ಅದು ಗರ್ಜನೆ ಅಥವಾ ಪಿಸುದನಿ. ಗರ್ಜನೆಯಾಗಲೀ ಅಥವಾ ಪಿಸುದನಿಯಾಗಲಿ ನನಗೆ ಗುರುತಿಸುವುದು ಕಷ್ಟವಾಗುತ್ತದೆ.

ಸಂವಿಧಾನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಆ ಬಗ್ಗೆ ಎತ್ತಿದ ಪ್ರಶ್ನೆ ಒಬ್ಬ ಅನುಭವಿಗಿಂತ ಸಾಮಾನ್ಯನೊಬ್ಬ ಕೇಳಿದಂತಿದೆ. ನನಗೆ ಖಚಿತವಾಗಿ ಸ್ಪಷ್ಟವಾಗಿ ಗೋಚರಿಸುವುದೇನೆಂದರೆ ಈ ಸದನ ಪರಮಾಧಿಕಾರವುಳ್ಳ ನಿಕಾಯ, ಅದು ತನಗೆ ತೋರಿದಂತೆ ಮಾಡಬಹುದು ಮತ್ತು ಅದು ತಾನು ಮಾಡಬೇಕೆಂದು ನಿರ್ಧರಿಸಿದ ವಿಷಯಗಳನ್ನಷ್ಟೇ ಮಾಡುತ್ತದೆ. ಅದು ತನ್ನ ನಿರ್ಧಾರಗಳನ್ನು ಬದಲಿಸಬಲ್ಲದು. ತನ್ನ ನಿಯಮಗಳನ್ನು ತಾನೇ ಬದಲಿಸಬಲ್ಲದು, ಆದರೆ ಎಲ್ಲಿಯವರೆಗೆ ನಿಯಮಗಳು ಇರಬಲ್ಲವೋ ಅಲ್ಲಿಯವರೆಗೆ ಪಾಲಿಸುತ್ತದೆ, ಬೇಕೆನಿಸಿದರೆ ಅವುಗಳನ್ನು ಬದಲಿಸುತ್ತದೆ. ಆದ್ದರಿಂದ ಈ ಸದನವು ಶಾಸನಸಭೆಯಾಗಿ ಕಾರ್ಯಮಾಡುವ ಹಕ್ಕು ಹೊಂದಿದ್ದು ನಾಳೆಯಿಂದ ಅಥವಾ ತನಗೆ ಬೇಕೆನಿಸಿದ್ದ ದಿನದಿಂದ ಹೀಗೆ ಮಾಡಬಹುದು. ಆದರೆ ಹಾಗೆ ಮಾಡುವುದಕ್ಕೆ ಮುಂಚೆ ಅದು ಆ ಬಗ್ಗೆ ನಿರ್ಧಾರ ಕೈಗೊಂಡು ತದನುಸಾರವಾಗಿ ನಿಯಮಗಳನ್ನು

ರಚಿಸಬೇಕು. ಈಗ ನಮಗಿರುವ ಸೂಕ್ತ ಮಾರ್ಗವೆಂದರೆ ಸಭಾಧ್ಯಕ್ಷರು ಒಂದು ಸಣ್ಣ ಸಮಿತಿಯನ್ನು ರಚಿಸಿ ಈ ಮಧ್ಯಂತರ ಅವಧಿಗಾಗಿ ನಾವು ಯಾವ ನಿಯಮಗಳನ್ನು ರಚಿಸಬೇಕೆಂಬ ಬಗ್ಗೆ ೨-೩ ದಿನಗಳಲ್ಲಿ ವರದಿ ಸಲ್ಲಿಸಬೇಕೆಂದು ತಿಳಿಸಬೇಕೆಂದು ನಾನು ವಿನಂತಿಸುತ್ತೇನೆ. ಈಗಿರುವಂತೆ ನಾವು ಶಾಸನಸಭೆಯಾಗಿ ಕಾರ್ಯನಿರ್ವಹಿಸಲು ಒಂದು ತೊಂದರೆಯಿದೆ. ಉದಾಹರಣೆಗೆ ಕೇಳಲಾಗುವ ಪ್ರಶ್ನೆಗಳಿಗೆ ಸರ್ಕಾರದ ಇಲಾಖೆಯ ಪ್ರಭಾರದಲ್ಲಿರುವ ಸದಸ್ಯರು ಉತ್ತರಿಸಬೇಕಾಗುತ್ತದೆ. ಮಾನ್ಯರೆ, ನೀವು ಸರ್ಕಾರದ ಒಬ್ಬ ಸದಸ್ಯನಾಗಿದ್ದ ಆಹಾರ ಮತ್ತು ಕೃಷಿ ಇಲಾಖೆ ಕುರಿತು ಪ್ರಶ್ನೆ ಕೇಳಿದರೆ ಸಭಾಧ್ಯಕ್ಷರು ಉತ್ತರಿಸಬೇಕೆ? ಅಥವಾ ಯಾರು ಉತ್ತರಿಸಬೇಕು?

ಒಂದು ತೊಂದರೆ ಉದ್ಭವಿಸುತ್ತದೆ. ಕೆಲವರು ಮಂತ್ರಿಗಳಾಗಿರುವವರು ಈ ಸದನದ ಸದಸ್ಯರಲ್ಲ. ಈಗಿರುವ ನಿಯಮಗಳ ಮೇರೆಗೆ ಅವರು ಸದನಕ್ಕೆ ಹಾಜರಾಗಬಹುದು ಮತ ಹಾಕಲಾಗದಿದ್ದರೂ ಮಾತನಾಡಬಹುದು. ಆದರೆ ನಾವು ಶಾಸನಸಭೆಯಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸುವುದಕ್ಕೆ ಮುಂಚೆ ಈ ಎಲ್ಲ ಅಂಶಗಳನ್ನು ಪರಿಶೀಲಿಸಬೇಕು ಹಾಗೂ ಸ್ಪಷ್ಟಪಡಿಸಬೇಕು. ನಾವು ನಮಗೆ ಇಷ್ಟವೆನಿಸುವ ಯಾವ ನಿಯಮಗಳನ್ನಾದರೂ ಮಾಡಬಹುದು ಎಂಬುದು ನಿಜ. ನಾವು ಬಯಸಿದರೆ ಮಂತ್ರಿಗಳನ್ನು ಸದನಕ್ಕೆ ಬಂದು ಸದಸ್ಯರಾಗಿ ಕಾರ್ಯನಿರ್ವಹಿಸುವಂತೆ ಕೇಳಬಹುದು. ಆದ್ದರಿಂದ ಈ ಮಧ್ಯಾವಧಿಯಲ್ಲಿ ನಾವು ಹೇಗೆ ಕಾರ್ಯನಿರ್ವಹಿಸಬಹುದೆಂಬ ಬಗ್ಗೆ ೩ ದಿನಗಳಲ್ಲಿ ನಮಗೆ ವರದಿ ಸಲ್ಲಿಸುವುದಕ್ಕಾಗಿ ಒಂದು ಸಮಿತಿ ರಚಿಸಬೇಕೆಂದು ಸಭಾಧ್ಯಕ್ಷರಲ್ಲಿ ನಾನು ವಿನಂತಿಸುತ್ತೇನೆ. ನಾವು ಬೇರೆ ಸ್ವರೂಪದಲ್ಲಿ ಸಭೆ ಸೇರಬಹುದಾದರೂ ಸದ್ಯಕ್ಕೆ ಸಂವಿಧಾನ ರಚನಾಸಭೆಯಾಗಿ ಸಭೆ ಸೇರಿದ್ದೇವೆ. ಈ ಸಂವಿಧಾನ ರಚನಾಸಭೆಗೆ ಈಗ ಕೆಲಸವಿಲ್ಲದೇ ಇದ್ದಿದ್ದರೆ ಎಂದರೆ ೧೫ ದಿನಗಳ ಹಿಂದೆ ಅಥವಾ ೩ ವಾರಗಳಿಗೆ ಮುಂಚೆ ನಾವು ಸಂವಿಧಾನ ತತ್ತ್ವಗಳನ್ನು ರೂಪಿಸುವ ಕೆಲಸವನ್ನು ಮುಗಿಸಿದ್ದರೆ ಇಂದು ನಾವು ಸಭೆ ಸೇರಿರುತ್ತಿರಲಿಲ್ಲ. ೧೪ರ ರಾತ್ರಿ ಹಾಗೂ ೧೫ರ ಬೆಳಗ್ಗೆ ಆ ನಿರ್ದಿಷ್ಟ ಉದ್ದೇಶಕ್ಕಾಗಿ ಸಭೆ ಸೇರಿ, ಸಂವಿಧಾನದ ರಚನಾಸಭೆಯ ಮುಂದಿನ ಅಧಿವೇಶನವನ್ನು ಸೆಪ್ಟೆಂಬರ್ ಅಥವಾ ಅಕ್ಟೋಬರ್‌ವರೆಗೆ ಮುಂದೂಡಿರುತ್ತಿದ್ದೆವು. ನಾವು ನಮ್ಮ ಕೆಲಸವನ್ನು ೧೫ ದಿನಗಳ ಹಿಂದೆ ಮುಗಿಸದಿದ್ದುದರಿಂದ ಇಂದು ನಾವು ಸಭೆ ಸೇರಿದ್ದೇವೆ. ನಾವು ಆ ಕೆಲಸವನ್ನು ಮುಂದಿನವಾರ ಮುಗಿಸಬೇಕೆಂದುಕೊಂಡಿದ್ದೇವೆ ಅಥವಾ ಅದಕ್ಕೆ ಇನ್ನಷ್ಟು ಸಮಯ ಬೇಕಾಗಬಹುದು ಆಗ ವಿವರವಾದ ಸಂವಿಧಾನ ಸಿದ್ಧವಾಗಬಹುದು ಮತ್ತು ನಾವು ಅಕ್ಟೋಬರ್‌ನಲ್ಲಿ ಸಭೆ ಸೇರಬಹುದು. ಆಗ ಅಂತಿಮವಾಗಿ ಸಂವಿಧಾನವನ್ನು ಅಂಗೀಕರಿಸಲು ಸಾಧ್ಯವಾಗಬಹುದು. ಈಗ ಇದನ್ನು ಶಾಸನಸಭೆಯೆಂದು ಸಾಂದರ್ಭಿಕವಾಗಿ ಪರಿಗಣಿಸುವುದು ಹಲವು ತೊಂದರೆಗಳಿಗೆ ದಾರಿ ಮಾಡುತ್ತದೆ. ಸರ್ಕಾರದ ಸದಸ್ಯರು ಒದಗಿಸಿದ ಮಾಹಿತಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಸದನವು ಬಯಸಿದರೆ ಸದಸ್ಯರು ಸಂತೋಷದಿಂದ ಮಾಹಿತಿ ಒದಗಿಸಬಹುದು. ಆದರೆ ಪ್ರತಿಯೊಂದು ಕೆಲಸಕ್ಕೂ ಒಂದು ವಿಧಾನವಿದೆ. ಆದ್ದರಿಂದ ಮಾನ್ಯರೆ, ನಿಮ್ಮ ಮುಂದಿರುವ ಉತ್ತಮ ವಿಧಾನವೆಂದರೆ ನಾವು ಅನುಸರಿಸಬೇಕಾದ ಕಾರ್ಯವಿಧಾನವನ್ನು ಕುರಿತು ೨-೩ ದಿನಗಳಲ್ಲಿ ವರದಿ ಸಲ್ಲಿಸುವುದಕ್ಕೆ ಒಂದು ಸಮಿತಿ ರಚಿಸುವುದು ಮತ್ತು ಅಗತ್ಯವಾದರೆ ತತ್ಸಂಬಂಧದಲ್ಲಿ ನಾವು ನಿಯಮಗಳನ್ನು ಬದಲಿಸಬಹುದು.

ಕೆಲ ಸದಸ್ಯರ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಅವುಗಳಲ್ಲಿ ಕೆಲವು ನನಗೆ ಅರ್ಥವಾಗಲಿಲ್ಲ. ಸೇಠ್ ಗೋವಿಂದ್ ದಾಸ್‌ರು ಜಬಲ್‌ಪುರ ಕುರಿತು ಹೇಳಿದರೆಂದು ಅರ್ಥವಾಯಿತೇ ಹೊರತು ಅಲ್ಲಿ ನಡೆದುದೇನು ಎಂಬುದು ನನಗೆ ಅರ್ಥವಾಗಲಿಲ್ಲ. ನಾನು ಪ್ರಯತ್ನಿಸಿದೆನಾದರೂ ನನಗೆ ತಿಳಿಯಲಿಲ್ಲ. ಆ ಬಗ್ಗೆ ನನಗೆ ವಿಷಾದವಿದೆ. ಬಹುಶಃ ಸರಿಯಾಗಿ ಕೇಳಿಸದಿರುವಿಕೆ ಕಾರಣವಿರಬಹುದು. ಮತ್ತೊಬ್ಬ ಸದಸ್ಯರು ಹೇಳಿದ್ದು ನನಗೆ ಸುಲಭವಾಗಿ ಅರ್ಥವಾಗಲಿಲ್ಲ. ಆದರೂ ಸಂಕ್ಷಿಪ್ತವಾಗಿ ಹೇಳುವುದಾದರೆ ಸದನವೂ ಸೇರಿದಂತೆ

ಸರ್ಕಾರವು ರಾಷ್ಟ್ರಧ್ವಜಕ್ಕೆ ಗೌರವ ನೀಡಬೇಕೆಂಬ ಅಂಶಕ್ಕೆ ಅತ್ಯಂತ ಹೆಚ್ಚಿನ ಮಹತ್ತ್ವ ನೀಡುತ್ತದೆ ಮತ್ತು ಎಲ್ಲಿಯಾದರೂ ರಾಷ್ಟ್ರಧ್ವಜಕ್ಕೆ ಅಗೌರವ ತೋರಿದರೆ ಆ ಬಗ್ಗೆ ವಿಚಾರಣೆ ನಡೆಸಿ ಅಗತ್ಯ ಕ್ರಮಕೈಗೊಳ್ಳಬೇಕು. ಆಗ್ರಾ ಕೋಟೆಯಲ್ಲಿ ನಡೆದ ಒಂದೆರಡು ಘಟನೆಗಳನ್ನು ಗಮನಕ್ಕೆ ತಂದ ವಿಷಯದ ಕುರಿತು ವಿಚಾರಣೆ ನಡೆಸಲಾಗುತ್ತದೆ. ಸಂಯುಕ್ತ ಪ್ರಾಂತ ಸರ್ಕಾರವು....

**ಶ್ರೀ ಬಾಲಕೃಷ್ಣ ಶರ್ಮ** : ಈ ಘಟನೆಗಳ ಬಗ್ಗೆ ನಾನು ಕಳಿಸಿದ ತಂತಿ ಸಂದೇಶಗಳು ಸದನದ ನಾಯಕರಿಗೆ ತಲುಪಿದೆಯೇ?

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಇದ್ದಕ್ಕಿದ್ದಂತೆ ನಾನೂ ಹೇಳಲಾರೆ. ಏಕೆಂದರೆ ಕಳೆದ ನಾಲ್ಕೈದು ದಿನಗಳಲ್ಲಿ ನನಗೆ ೭೦೦೦ ತಂತಿ ಸಂದೇಶಗಳು ಬಂದಿವೆ. ಹೀಗಾಗಿ ಈ ನಿರ್ದಿಷ್ಟ ತಂತಿ ಸಂದೇಶಗಳು ನನ್ನ ಬಳಿ ಸ್ವೀಕೃತವಾಗಿರುವ ಬಗ್ಗೆ ತತ್‌ಕ್ಷಣಕ್ಕೆ ತಿಳಿಸುವುದು ತುಸು ಕಷ್ಟ. ಒಬ್ಬ ವ್ಯಕ್ತಿಯಾಗಲೀ ಅಥವಾ ವ್ಯಕ್ತಿಗಳ ಸಮೂಹವಾಗಲೀ ಬೇಗನೆ ತಂತಿ ಸಂದೇಶವನ್ನು ಓದುವುದಾಗಲಿ ವಿಶ್ಲೇಷಿಸುವುದಾಗಲೀ ಅಸಾಧ್ಯ. ನಾವು ಆ ಕೆಲಸವನ್ನು ಸಾಧ್ಯವಾದಷ್ಟು ತ್ವರಿತವಾಗಿ ಮಾಡುತ್ತಿದ್ದೇವೆ.

ನಾವು ಈ ಘಟನೆಗಳ ಬಗ್ಗೆ ಸಂಯುಕ್ತ ಪ್ರಾಂತ್ಯ ಸರ್ಕಾರದಿಂದ ಮಾಹಿತಿ ತಿಳಿದುಕೊಳ್ಳುತ್ತಿದ್ದೇವೆ ಮತ್ತು ನಮ್ಮ ರಕ್ಷಣಾ ಇಲಾಖೆ ಸಹ ವಿಚಾರಣೆ ಮಾಡುತ್ತಿದೆ ಮತ್ತು ನಾವು ಅಗತ್ಯಕ್ರಮ ಕೈಗೊಳ್ಳುತ್ತೇವೆ.

ಜಬಲ್‌ಪುರ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಸೇಠ್ ಗೋವಿಂದ್ ದಾಸ್ ಅವರು ಪ್ರತ್ಯೇಕವಾಗಿ ನನಗೆ ಮಾಹಿತಿ ನೀಡಿದರೆ ಒಳ್ಳೆಯದಾಗುತ್ತದೆ. ನಾವು ವಿಷಯದ ಬಗ್ಗೆ ವಿಚಾರಣೆ ನಡೆಸಿ ಅಗತ್ಯಕ್ರಮ ಕೈಗೊಳ್ಳುತ್ತೇವೆ.

**ಒಬ್ಬರು ಗೌರವಾನ್ವಿತ ಸದಸ್ಯರು** : ಹೈದರಾಬಾದ್ ವಿಷಯದಲ್ಲಿ ಏನು?

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರೂ** : ಹೈದರಾಬಾದ್ ಕುರಿತಂತೆ ನಾನು ಹೇಳುವುದಾದರೆ ನಮ್ಮ ರಾಜ್ಯಗಳ ಸರ್ಕಾರವು ತತ್‌ಕ್ಷಣವೇ ವಿಚಾರಿಸಲಾಗಿ ಹೈದರಾಬಾದ್ ಸರ್ಕಾರವು ಹಾಗೆ ರಾಷ್ಟ್ರಧ್ವಜಕ್ಕೆ ಅವಮಾನವಾದ ಘಟನೆಯನ್ನು ಸಾರಾಸಗಟಾಗಿ ತಳ್ಳಿಹಾಕಿದ್ದು, ಅವರು ಎಲ್ಲೆಡೆ ಧ್ವಜ ಹಾರಿಸಲು ಅನುಮತಿಸಿದ್ದಾರೆಂದು ಹಾಗೂ ಅವಮಾನವಾದ ಘಟನೆ ತಮ್ಮ ಗಮನಕ್ಕೆ ಬಂದಿಲ್ಲವೆಂದು ತಿಳಿಸಿರುತ್ತಾರೆ.

**ಮಾನ್ಯ ಸಭಾಧ್ಯಕ್ಷರು** : (ಸಂವಿಧಾನ ರಚನಾ) ಸಭೆಯ ಸ್ಥಾನಮಾನ ಹಾಗೂ ಕಾರ್ಯನಿರ್ವಹಣೆಯ ಪ್ರಶ್ನೆ ಮಹತ್ತ್ವದ್ದಾಗಿದೆ. ಇಲ್ಲಿನ ನಮ್ಮ ಕಾರ್ಯಕಲಾಪಗಳನ್ನು ಕುರಿತಂತೆ ನಾವು ರಚಿಸಿದ ನಿಯಮಗಳು ಹಾಗೂ ಭಾರತ ಸರ್ಕಾರದ ಅಧಿನಿಯಮ ಹಾಗೂ ಸ್ವಾತಂತ್ರ್ಯ ಅಧಿನಿಯಮಗಳ ಅಳವಡಿಕೆಗಳನ್ನು ಕುರಿತು ಪರಿಶೀಲನೆ ಮಾಡಬೇಕು ಎಂದು ನನ್ನ ಅನಿಸಿಕೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿದಾಗ ನಾವು ಎರಡು ವಿಭಾಗಗಳಲ್ಲಿ ಪ್ರತ್ಯೇಕವಾಗಿ ಕೆಲಸ ಮಾಡಬೇಕೇ ಅಥವಾ ಒಂದೇ ನಿಕಾಯವಾಗಿ ಕೆಲಸ ಮಾಡಬೇಕೆ ಎಂಬ ಬಗ್ಗೆ ಪರಿಹಾರ ಕಂಡುಕೊಳ್ಳಬೇಕು. ಈ ಪ್ರಶ್ನೆಗಳ ಬಗ್ಗೆ ನಾವು ಪರಿಶೀಲನೆ ಮಾಡಬೇಕಾಗಿದೆ. ಈ ಪ್ರಶ್ನೆಗಳ ಬಗ್ಗೆ ಪರಿಶೀಲಿಸಲು ಮತ್ತು ನಮಗೆ ಮಾರ್ಗದರ್ಶನ ನೀಡಲು ಇರುವ ನಿಯಮಗಳನ್ನು ಕುರಿತು ಸಲಹೆ ನೀಡಲು ಒಂದು ಚಿಕ್ಕ ಉಪಸಮಿತಿಯನ್ನು ರಚಿಸಬೇಕೆಂಬ ಸದನದ ನಾಯಕರ ಸಲಹೆ ಸದನಕ್ಕೆ ಒಪ್ಪಿಗೆಯಾಗಬೇಕು ಮತ್ತು ಹಾಗೆ ಮಾಡುವುದಕ್ಕೆ ಸದನದ ಒಪ್ಪಿಗೆ ಇದೆಯೇ ಎಂದು ನಾನು ತಿಳಿಯಬಯಸುತ್ತೇನೆ.

**ಗೌರವಾನ್ವಿತ ಸದಸ್ಯರು** : ಹೌದು.

**ಮಾನ್ಯ ಸಭಾಧ್ಯಕ್ಷರು** : ಸದನದ ಒಪ್ಪಿಗೆ ದೊರೆತಿರುವುದರಿಂದ ಉಪಸಮಿತಿಯ ಸದಸ್ಯರ ಹೆಸರುಗಳನ್ನು ನಾನು ಇಂದು ಅನಂತರ ಘೋಷಿಸುತ್ತೇನೆ. ಮತ್ತು ಸಾಧ್ಯವಾದಷ್ಟು ಬೇಗ ವರದಿ ನೀಡುವಂತೆ ನಾವು ಅವರನ್ನು ವಿನಂತಿಸಬೇಕು.

ಇಂದು ಬೆಳಗ್ಗೆ ನಾವು ಸಭೆ ಸೇರಿದ ಉದ್ದೇಶ: ಸಂವಿಧಾನ ರಚನಾಸಭೆಯ ನಮ್ಮ ಕೆಲಸವನ್ನು ಮುಂದುವರಿಸೋಣ. ನಾನು ಈಗ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ತಮ್ಮ ಗೊತ್ತುವಳಿಯನ್ನು ಮಂಡಿಸಬೇಕೆಂದು ಕೇಳುತ್ತೇನೆ.

**ಶ್ರೀ ವಿಶ್ವನಾಥ್ ದಾಸ್** (ಒರಿಸ್ಸಾ : ಸಾಮಾನ್ಯ) : ಸದನದ ನಾಯಕರ ಹೇಳಿಕೆಯ ಹಿನ್ನೆಲೆಯಲ್ಲಿ ನಾನು ಒಂದು ಅಂಶವನ್ನು ತಿಳಿಸಬಯಸುತ್ತೇನೆ. ಅದು ಅವರು ಸೂಚಿಸಿದ ಸಮಿತಿಯ ಮುಂದಿನ ಪರಿಶೀಲನಾಂಶಗಳ ಕುರಿತು ಸಮಿತಿಯ ಪರಿಶೀಲನೆಗೆ ಇರುವ ವಿಷಯ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ಸೀಮಿತವಾಗಿರಬೇಕು ಎಂದಿದ್ದಾರೆ. ನನ್ನ ಅಭಿಪ್ರಾಯದ ಮೇರೆಗೆ ಉಪಸಮಿತಿಯ ಪರಿಶೀಲನೆಗೆ ಇನ್ನು ಕೆಲ ಪ್ರಶ್ನೆಗಳಿವೆ. ಅದೇಂದರೆ ಸಂವಿಧಾನ ರಚನಾಸಭೆಯಲ್ಲಿ ಪ್ರಾಂತ್ಯಗಳ ಪ್ರತಿನಿಧಿಗಳಿದ್ದಾರೆ ಹಾಗೂ ರಾಜ್ಯಗಳ ಪ್ರತಿನಿಧಿಗಳಿದ್ದಾರೆ. ಈ ಎರಡೂ ಬಗೆಯ ಪ್ರತಿನಿಧಿಗಳು ಒಟ್ಟಿಗೆ ಕೆಲಸ ಮಾಡುತ್ತಾರೆ. ಕಾರ್ಯವಿಧಾನವನ್ನು ಕುರಿತ ಪ್ರಶ್ನೆಯನ್ನು ಮಾತ್ರ ಸಮಿತಿಗೆ ಒಪ್ಪಿಸಿದರೆ, ರಾಜ್ಯಗಳ ಪ್ರತಿನಿಧಿಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಹಾಗೂ ಮತದಾನಕ್ಕೆ ಸಂಬಂಧಿಸಿದಂತೆ ಕೆಲವು ತೊಂದರೆಗಳಿವೆ. ಇದಕ್ಕೆ ಒಂದು ಉದಾಹರಣೆ ನೀಡುತ್ತೇನೆ. ನಾವು ಮುಂಗಡಪತ್ರವನ್ನು ಅಂಗೀಕರಿಸಬೇಕು. ಈಗ ಗೊತ್ತಿರುವಂತೆ ರಾಜ್ಯಗಳು ೩ ವಿಷಯಗಳನ್ನು ಮಾತ್ರ ಅಂಗೀಕರಿಸಿವೆ. ಒಕ್ಕೂಟವು ಹೆಚ್ಚಿನ ವಿಷಯಗಳನ್ನು ಅಂಗೀಕರಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಹಾಗಿದ್ದರೆ ಅದು ಒಳ್ಳೆಯದು. ವರ್ತಮಾನ ಪತ್ರಿಕೆಗಳ ಮಾಹಿತಿ ಮೇರೆಗೆ ನಮ್ಮ ನಾಯಕರು ೩ ವಿಷಯಗಳನ್ನು ಮಾತ್ರ ಅಂಗೀಕರಿಸಿದ್ದಾರೆ. ಇತರ ವಿಷಯಗಳ ಶಾಸನಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಮತದಾನಕ್ಕೆ ಹಕ್ಕು ಇದೆಯೇ? ಈ ಮೂರು ವಿಷಯಗಳ ವ್ಯಾಪ್ತಿಯ ಆಚೆಗಿನ ಇತರ ವಿಷಯಗಳ ಸಂಬಂಧದಲ್ಲಿ ರಾಜ್ಯಗಳ ಪ್ರತಿನಿಧಿಗಳ ಸ್ಥಾನವೇನು?

ಈ ಸನ್ನಿವೇಶದಲ್ಲಿ ನಿಮಗೆ ಹಾಗೂ ಸದನದ ನಾಯಕರಿಗೆ ನಾನು ಸೂಚಿಸಲು ಬಯಸುವುದೇನೆಂದರೆ ಸಮಿತಿಗೆ ಸಲ್ಲಿಸುವ ವಿಷಯಗಳು ಹಾಗೂ ಸಮಿತಿಯ ಪರಿಶೀಲನಾಂಶಗಳನ್ನು ವಿಸ್ತೃತಗೊಳಿಸಬೇಕು. ಇದರಿಂದ ಸಮಿತಿಯು ಕಾರ್ಯವಿಧಾನದ ಕುರಿತು ಶಿಫಾರಸುಗಳನ್ನು ನೀಡುವುದಷ್ಟೇ ಅಲ್ಲ ಕಾರ್ಯನಿರ್ವಹಣೆ ಹಾಗೂ ಇತರ ಸಂಬಂಧಿತ ವಿಷಯಗಳ ಬಗೆಗೂ ಶಿಫಾರಸು ಮಾಡುವುದರಿಂದ ನಮಗೆ ಪೂರ್ಣಚಿತ್ರ ದೊರೆಯುತ್ತದೆ.

**ಮಾನ್ಯ ಸಭಾಧ್ಯಕ್ಷರು** : ಈ ಸಮಿತಿಯ ಪರಿಶೀಲನಾಂಶಗಳನ್ನು ತಿಳಿಸುವಾಗ ಈ ಅಂಶವನ್ನು ಗಮನದಲ್ಲಿರಿಸಿಕೊಂಡಿರುತ್ತೇನೆ.

**ಶ್ರೀ ಎಚ್.ವಿ. ಕಾಮತ್** : ಮಾನ್ಯರೆ, ಒಂದು ಸಣ್ಣ ಅಂಶದ ಬಗ್ಗೆ ನಾನು ತಿಳಿಸಬೇಕಾಗಿದೆ. ೧೪ರ ರಾತ್ರಿಯ ನಿಮ್ಮ ಭಾಷಣದ ಪ್ರತಿ ೧೫ರ ಬೆಳಗಿನ ಗರ್ವನರ್ ಜನರಲ್‌ರ ಭಾಷಣದ ಪ್ರತಿ ಹಾಗೂ ಅದಕ್ಕೆ ನಿಮ್ಮ ಉತ್ತರ ಇದಾವುದೂ ಸದಸ್ಯರ ಮೇಜಿನ ಮೇಲಿರಲಿಲ್ಲ. ಮತ್ತು ಇಂದಿನವರೆಗೂ ಅವನ್ನು ನಮಗೆ ನೀಡಿಲ್ಲ. ಈ ಬಗ್ಗೆ ದಯವಿಟ್ಟು ಕ್ರಮಕೈಗೊಳ್ಳುವಿರಾ?

**ಮಾನ್ಯ ಸಭಾಧ್ಯಕ್ಷರು** : ಕೇಂದ್ರ ಅಧಿಕಾರ (ಪವರ್ಸ್) ಸಮಿತಿಯ ವರದಿಯ ಕುರಿತು ಕಲಾಪವನ್ನು ಈಗ ಮುಂದುವರಿಸೋಣ ಎಂದು ನನ್ನ ಭಾವನೆ.

**ಶ್ರೀ ಶಂತನು ಕುಮಾರ್ ದಾಸ್** (ಒರಿಸ್ಸಾ : ಸಾಮಾನ್ಯ) : ನಿಮ್ಮ ಹಾಗೂ ಸದನದ ನಾಯಕರ ಮೂಲಕ ಪಾಕಿಸ್ತಾನದಲ್ಲಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದವರ ವಿರುದ್ಧ ಆ ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ತಿಳಿಯಬಹುದೆ?

**ಮಾನ್ಯ ಸಭಾಧ್ಯಕ್ಷರು** : ನಾವು ಕಾರ್ಯಸೂಚಿಯ ಪ್ರಕಾರ ಕಲಾಪಗಳನ್ನು ಮುಂದುವರಿಸೋಣ. ಬೇರೆ ಯಾವುದೇ ಪ್ರಶ್ನೆಗಳಿದ್ದರೆ ಅವುಗಳನ್ನು ಸೂಕ್ತ ಸಮಯದಲ್ಲಿ ಪರಿಗಣಿಸಬಹುದು. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್.

**ಕೇಂದ್ರ ಅಧಿಕಾರ (ಪವರ್ಸ್) ಸಮಿತಿಯ ವರದಿ** –– ಮುಂದುವರಿದುದು.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ ಈ ಮುಂದಿನ ಪ್ರಸ್ತಾವವನ್ನು ಮಂಡಿಸಲು ನಾನು ಅನುಮತಿ ಕೇಳುತ್ತೇನೆ:

೨೫ ಜನವರಿ ೧೯೪೭ರ (ಸಂವಿಧಾನ ರಚನಾ) ಸಭೆಯ ನಿರ್ಣಯಗಳಿಗನುಸಾರವಾಗಿ ನೇಮಕಗೊಂಡ ಸಮಿತಿಯು ಕೇಂದ್ರದ ಅಧಿಕಾರಗಳನ್ನು ಕುರಿತು ನೀಡಿದ ಎರಡನೆಯ ವರದಿಯನ್ನು *ಸಂವಿಧಾನ ರಚನಾ ಸಭೆಯು ಪರಿಗಣನೆಗೆತ್ತಿ ಕೊಳ್ಳಬೇಕೆಂದು ಗೊತ್ತುವಳಿ ಮಂಡಿಸಲಾಗಿದೆ.

ಮಾನ್ಯರೆ, ಈ ವರದಿಯ ಪ್ರತಿಗಳನ್ನು ಈಗಾಗಲೇ ಸದಸ್ಯರಿಗೆ ನೀಡಲಾಗಿದೆ. ಆದರೆ ಈ ವರದಿಯನ್ನು ಸದನದ ಮುಂದೆ ಮಂಡಿಸುವಾಗ ನಾನು ಈ ವರದಿಯನ್ನು ಸದನಕ್ಕೆ ಮಂಡಿಸಬೇಕಾದ ಸಂದರ್ಭದ ಕುರಿತು ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ.

ಈ ದೇಶದ ಮಹತ್ತ್ವದ ಪ್ರಾಂತಗಳಲ್ಲೊಂದರ ಗವರ್ನರ್ ಆಗಿರುವ ನಮ್ಮೆಲ್ಲರ ಹೆಮ್ಮೆಯ ಶ್ರೀ ರಾಜಗೋಪಾಲಚಾರಿಯವರು ಸೂಚಿಸಿದ ಪ್ರಸ್ತಾವದ ಮೇರೆಗೆ ೨೫ ಜನವರಿ ೧೯೪೭ರಂದು ಈ ಸಮಿತಿ ಅಸ್ತಿತ್ವಕ್ಕೆ ಬಂದ ವಿಷಯ ಸದನಕ್ಕೆ ನೆನಪಿರಬಹುದು. ಆ ನಿರ್ಣಯದಲ್ಲಿ.....

**ಮೌಲಾನಾ ಹಜರತ್ ಮೊಹಾನಿ** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ಮಾನ್ಯರೆ, ಕ್ರಿಯಾಲೋಪದ ಮೇರೆಗೆ ಈ ವರದಿಯನ್ನು ಪರಿಗಣನೆಗೆ ಎತ್ತಿಕೊಳ್ಳಬಾರದೆಂದು ಕೋರಿ ತಿದ್ದುಪಡಿ ಸೂಚನೆಯನ್ನು ನೀಡಿರುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಮೊದಲು ನಿರ್ಣಯವನ್ನು ಮಂಡಿಸಲಿ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಈ ನಿರ್ಣಯವನ್ನು ಅಳವಡಿಸಿದಾಗ ನಾವು ಕ್ಯಾಬಿನೆಟ್ ಮಿಷನ್ ಯೋಜನೆಯಲ್ಲಿ ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸಲು ಯತ್ನಿಸಿದ್ದೆವು. ಆ ಯೋಜನೆಯಲ್ಲಿ ಪ್ರಾಂತ್ಯಗಳು ಹಾಗೂ ರಾಜ್ಯಗಳ ಒಕ್ಕೂಟಕ್ಕೆ ಉಪಬಂಧ ಕಲ್ಪಿಸಲಾಗಿದ್ದು ಹಾಗೂ ಕೆಲವು ಸೀಮಿತ ಸಂಖ್ಯೆಯ ವಿಷಯಗಳನ್ನು ವಹಿಸಲಾಗಿದ್ದು, ಒಕ್ಕೂಟಕ್ಕೆ ಸಂಬಂಧಿಸಿದ ವಿಷಯ ಹಾಗೂ ಕಾರ್ಯವಿಧಾನದ ಇತರ ವಿವರಗಳನ್ನು ತಿಳಿಸಲಾಗಿದ್ದು ಅದನ್ನು ಈಗಾಗಲೇ ದೇಶದ ಎರಡು ದೊಡ್ಡ ಪಕ್ಷಗಳ ಮುಖಂಡರು ಒಪ್ಪಿಕೊಂಡಿರುವ ವಿಷಯ ಸದನಕ್ಕೆ ನೆನಪಿರಬಹುದು. ಆ ಯೋಜನೆಗೆ ಸಂಬಂಧಿಸಿದಂತೆ ಸದನವು ಪರಿಶೀಲಿಸಬೇಕಾಗಿದ್ದ ಮಹತ್ತ್ವದ ವಿಷಯಗಳಲ್ಲೊಂದು ಎಂದರೆ ಕೇಂದ್ರಕ್ಕೆ ವಹಿಸಲಾದ ವಿಷಯಗಳ ವ್ಯಾಪ್ತಿ ನಾನು ಹೇಳಿದಂತೆ ಆ ವಿಷಯಗಳನ್ನು ಸ್ಥೂಲವಾಗಿ ವಿವರಿಸಲಾಗಿತ್ತು. ಅದರಲ್ಲಿ ರಕ್ಷಣೆ, ವಿದೇಶಾಂಗ ವ್ಯವಹಾರ ಹಾಗೂ ಸಂಪರ್ಕ ವಿಷಯಗಳು ಹಾಗೂ ಅವುಗಳಿಗೆ ಅಗತ್ಯವಿರುವ ಹಣವನ್ನು ಕುರಿತು ವಿವರಿಸಲಾಗಿತ್ತು. ಆ ಯೋಜನೆಯಲ್ಲಿ ತಿಳಿಸಲಾಗಿದ್ದ ವಿಷಯಗಳ ಪೈಕಿ ಒಂದು ಅಂಶದ ಬಗ್ಗೆ ಒಪ್ಪಿಕೊಳ್ಳಲಾಗಿದ್ದು ಅದೆಂದರೆ ಪ್ರಾಂತಗಳು ಹಾಗೂ ಕೇಂದ್ರ (ಒಕ್ಕೂಟ)ಗಳೆರಡಕ್ಕೂ ಸಂವಿಧಾನ ರಚನೆ ಹಾಗೂ ಯಾವುದೇ ಗುಂಪುಗಳ ರಚನೆಗೆ ಸದನ ಒಪ್ಪಿದರೆ ಅವುಗಳ ಸಂಬಂಧದಲ್ಲೂ ಸಂವಿಧಾನ ರಚನೆ. ಈ ಸಂವಿಧಾನ ರಚನಾಸಭೆಯ ಪ್ರಾರಂಭಿಕ ಸಭೆಯ ಅನಂತರ ಹಾಗೆ ಪ್ರಾಂತಗಳಿಗೂ ಗುಂಪುಗಳಿಗೂ ಉದ್ದೇಶಿತ ಸಂವಿಧಾನ ರಚಿಸಲು ಈ ಸಭೆಯನ್ನು ವಿಭಾಗಗಳಾಗಿ ವಿಂಗಡಿಸಬೇಕಾಗಿತ್ತು. ಆ ಸಂವಿಧಾನಗಳ ರಚನೆಯ ಕಾರ್ಯವನ್ನು ಕೈಗೆತ್ತಿಕೊಳ್ಳುವುದಕ್ಕೆ ಮುಂಚೆ ಒಕ್ಕೂಟದ ವ್ಯಾಪ್ತಿಗೆ ಸೇರುವ ವಿಷಯಗಳ ಕುರಿತಂತೆ ಒಕ್ಕೂಟದ ಅಧಿಕಾರ ವ್ಯಾಪ್ತಿಯನ್ನು ಕುರಿತು ಗುರುತಿಸಬೇಕಾದ ಅಗತ್ಯವಿತ್ತು ಹಾಗೂ ಅಸ್ತಿತ್ವಕ್ಕೆ ಬರಬೇಕಾದ ಗುಂಪುಗಳ ಬಗ್ಗೆ ನಿರ್ಧರಿಸಿದರೆ ಪ್ರಾಂತ್ಯಗಳು ಹಾಗೂ ಗುಂಪುಗಳಿಗೆ ವಹಿಸಲಾಗುವ ಮಿಕ್ಕ ವಿಷಯಗಳನ್ನು ಕುರಿತು ಸಂವಿಧಾನದಲ್ಲಿ ಅವಕಾಶ ಕಲ್ಪಿಸಬಹುದಿತ್ತು. ಈ ಅಂಶದ ಅನುಷ್ಠಾನಕ್ಕಾಗಿ ಈ ನಾಲ್ಕು ಸ್ಥೂಲ ಪ್ರವರ್ಗಗಳಿಗೆ ಸೇರುವ ಪ್ರತಿಯೊಂದು ವಿಷಯದ ವಿವರ ಅಗತ್ಯವೆಂದು ಕಂಡುಬಂದಿತು. ಈ ವಿವರವನ್ನು ಅಧ್ಯಯನ ಮಾಡಿ ಸದನಕ್ಕೆ ಒಂದು ವರದಿ ಸಲ್ಲಿಸಲು ಒಂದು ಸಮಿತಿಯನ್ನು ರಚಿಸಿದೆವು. ಸಮಿತಿ ಸಭೆ ಸೇರಿ ಬಹುಶಃ ಏಪ್ರಿಲ್ ೧೭ರಂದು ವರದಿ ಸಲ್ಲಿಸಿತು. ನಾನು ಆ ವರದಿಯನ್ನು ಏಪ್ರಿಲ್ ೨೮ರಂದು ಸದನಕ್ಕೆ ಮಂಡಿಸಿದೆ. ಆ ವರದಿಯನ್ನು ಮಂಡಿಸುವಾಗ ನಾನು ವರದಿಯ ಪರಿಶೀಲನೆಗಾಗಿ ಸದನಕ್ಕೆ ಯಾವುದೇ ಪ್ರಸ್ತಾವ ಸೂಚನೆ

* ಅನುಬಂಧ–ಎ

ಸಲ್ಲಿಸುತ್ತಿಲ್ಲವೆಂದು ತಿಳಿಸಿದೆ. ಏಕೆಂದರೆ ಆಗ ಪರಿಸ್ಥಿತಿ ಎಷ್ಟು ಅಸ್ಥಿರವಾಗಿತ್ತೆಂದರೆ ವರದಿ ಪರಿಶೀಲನೆಯಲ್ಲಿ ಸದನದ ಸಮಯ ಹಾಳಾದರೆ ಕೆಲವೇ ವಾರಗಳಲ್ಲಿ ವರದಿ ಹಳೆಯದೆನಿಸುವ ಸಾಧ್ಯತೆ ಇತ್ತು. ಆ ಸಮಯದಲ್ಲಿ ನಿರ್ಧಾರಕ ರಾಜಕೀಯ ನಿರ್ಣಯ ಬಾಕಿಯಿತ್ತು. ಆ ನಿರ್ಧಾರದ ಸ್ವರೂಪ ಏನಾಗುವುದಿತ್ತು ಎಂಬುದು ನಮಗೂ ಗೊತ್ತಿರಲಿಲ್ಲ. ಭಾರತ ಅಖಂಡವಾಗಿ ಉಳಿಯುವುದೇ ಅಥವಾ ವಿಭಜನೆಯಾಗುವುದೇ ಹಾಗೆ ಆದರೆ ಇತರ ವಿವರಗಳೇನು ಯಾವುದೂ ಗೊತ್ತಿರಲಿಲ್ಲ. ಆ ಸನ್ನಿವೇಶದಲ್ಲಿ ಸದನವು ಈ ಸಮಿತಿಯ ಮೊದಲನೇ ವರದಿಯನ್ನು ಪರಿಗಣಿಸುವ ಅಗತ್ಯವಿಲ್ಲ ಎಂದು ಸೂಚಿಸಿದೆ. ಸಮಿತಿಯು ಮತ್ತೆ ಸಭೆ ಸೇರಿ ನಿಕಟ ತರುವಾಯದಲ್ಲಿ ಆಗಲಿದ್ದ ರಾಜಕೀಯ ನಿರ್ಧಾರದ ಹಿನ್ನೆಲೆಯಲ್ಲಿ ಸಮಿತಿಯ ಮೊದಲನೇ ವರದಿಯಲ್ಲಿದ್ದ ಶಿಫಾರಸುಗಳನ್ನು ಪುನರವಲೋಕಿಸುವ ಅಗತ್ಯವಿದೆ ಎಂದು ತಿಳಿಸಿದೆ. ಸದನಕ್ಕೆ ಗೊತ್ತಿರುವಂತೆ ಆ ನಿರ್ಧಾರವನ್ನು ಜೂನ್ ೩ರಂದು ಕೈಗೊಳ್ಳಲಾಯಿತು. ಮತ್ತು ಅದೇ ದಿನಾಂಕದಿಂದಲೇ ಅದರ ಅನುಷ್ಠಾನ ಪ್ರಾರಂಭವಾಯಿತು. ಆಗ ಸಂಸತ್ತು ಅಧಿನಿಯಮಿಸಿದ್ದ ಭಾರತ ಸ್ವಾತಂತ್ರ್ಯ ಅಧಿನಿಯಮ ನಮ್ಮ ಬಳಿಯಿತ್ತು. ಆ ಅಧಿನಿಯಮ ನಮಗೆ ಆಗಸ್ಟ್ ೧೫ಕ್ಕೆ ಮುಂಚೆ ಭಾರತದಲ್ಲಿದ್ದ ಎರಡು ರಾಜ್ಯ (ಡೊಮಿನಿಯನ್)ಗಳನ್ನು ತೋರಿಸಿದೆ.

ನಮ್ಮ ದೇಶ ಈಗ ಒಂದು ಡೊಮಿನಿಯನ್. ನಾವು ಸ್ವಾತಂತ್ರ್ಯದತ್ತ ಹೆಜ್ಜೆ ಹಾಕಿದ್ದೇವೆ. ನಾನು ಉದ್ದೇಶ ಪೂರ್ವಕವಾಗಿ ಈ ನುಡಿಗಟ್ಟನ್ನು ಬಳಸಿದ್ದೇವೆ. ನಾವು ಹೋಗಿ ಅದನ್ನು ಹಿಡಿದುಕೊಂಡಿಲ್ಲ. ಅದು ಅಲ್ಲಿತ್ತು. ನಾವು ಹೋಗಿ ನಮ್ಮ ಅಧಿಕಾರ ನಾವು ಪಡೆದುಕೊಂಡಿದ್ದೇವೆ ಎಂದೆವು. ಈಗ ಸಂವಿಧಾನ ಸಿದ್ಧತೆಯಲ್ಲಿ ತೊಡಗಿದ್ದೇವೆ. ಅದು ಭಾರತ ಸ್ವಾತಂತ್ರ್ಯ ಅಧಿನಿಯಮ ಹಾಗೂ ಭಾರತ ಸರ್ಕಾರದ ಅಧಿನಿಯಮ ೧೯೩೫ ಇವೆರಡರ ಉಪಬಂಧಗಳನ್ನು ಭಾರತ ಸ್ವಾತಂತ್ರ್ಯ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಳವಡಿಸಿಕೊಂಡ ಒಂದು ಸಂಯೋಗ.

ಮಾನ್ಯರೆ, ಇದು ವಸ್ತುಸ್ಥಿತಿ. ಏಪ್ರಿಲ್ ೨೮ರ ತರುವಾಯ ಕೇಂದ್ರ ಅಧಿಕಾರಗಳ ಸಮಿತಿ ಮತ್ತೆ ಸಭೆ ಸೇರಿತು. ಆಗ ಇನ್ನೂ ಭಾರತ ಸ್ವಾತಂತ್ರ್ಯ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಿರಲಿಲ್ಲ. ಇಂಥ ಒಂದು ವಿಧೇಯಕವನ್ನು ಮಂಡಿಸಲಾಗುತ್ತದೆ ಎಂಬ ಸಂಗತಿ ನಮಗೆ ಗೊತ್ತಿತ್ತು. ಆದರೂ ನಮ್ಮ ೨ನೇ ವರದಿಯನ್ನು ನಾವು ಇತ್ಯರ್ಥ ಮಾಡುವ ವೇಳೆಯಲ್ಲಿ ನಮಗೆ ಆ ಅಧಿನಿಯಮದ ಉಪಬಂಧಗಳು ಹೇಗಿರಬಹುದು ಎಂಬುದರ ಅರಿವಿರಲಿಲ್ಲ. ಆಗ ಈ ಸ್ವಾತಂತ್ರ್ಯ ಅಧಿನಿಯಮ ಆಯಿತು. ಈಗ ನಮ್ಮದು ಸ್ವತಂತ್ರ (ಡೊಮಿನಿಯನ್) ದೇಶ ಭಾರತ ಸರ್ಕಾರ ಅಧಿನಿಯಮದ ಅಳವಡಿಕೆಗಳಲ್ಲಿ ಅದನ್ನು ಹಾಗೆಯೇ ವರ್ಣಿಸಲಾಗಿದೆ. ಈ ಬಗ್ಗೆ ನನಗೆ ಖಚಿತವಿಲ್ಲ. ಏಕೆಂದರೆ ೧೪ರ ರಾತ್ರಿ ಅಥವಾ ೧೫ರ ಬೆಳಗ್ಗೆ ನಮ್ಮ ಕೈಸೇರಬೇಕಿದ್ದ ರಾಜ್ಯಪತ್ರ ವಿಶೇಷಾಂಕದ ಪ್ರತಿಗಳು ಈವರೆಗೆ ನಮಗೆ ಸಿಕ್ಕಿಲ್ಲ. ಇರಲಿ ಆ ಅಳವಡಿಕೆಯಲ್ಲಿ ವಿವರಿಸಿರುವ ಪ್ರಕಾರ ಈ ಡೊಮಿನಿಯನ್ ಒಂದು ಒಕ್ಕೂಟವಾಗಿದ್ದು ಇದರಲ್ಲಿ ಬ್ರಿಟಿಷ್ ಭಾರತದ ಪ್ರಾಂತ್ಯಗಳು ಸೇರಿವೆ. ಇವು ಪಾಕಿಸ್ತಾನದ ಹೊಸ ಡೊಮಿನಿಯನ್‌ಗೆ ಸೇರಿಲ್ಲ. ಅಲ್ಲದೇ ಭಾರತ ಡೊಮಿನಿಯನ್‌ಗೆ ಪ್ರವೇಶ ಪಡೆದ ಭಾರತೀಯ ರಾಜ್ಯಗಳೂ ಸೇರಿವೆ. ನಾನು ಪ್ರಾಂತ್ಯಗಳು ಎಂದು ಹೇಳಿರುವಲ್ಲಿ ನಮ್ಮ ದೇಶದಲ್ಲಿ ಎರಡು ಬಗೆಯ ಪ್ರಾಂತ್ಯಗಳಿವೆ. ಅವೆಂದರೆ ಗವರ್ನರ್ ಪ್ರಾಂತ್ಯಗಳು, ಚೀಫ್ ಕಮಿಷನರ್ ಪ್ರಾಂತ್ಯಗಳು. ಇವಲ್ಲದೇ ಬೇರೆ ಪ್ರದೇಶಗಳೂ ಈ ಸ್ವತಂತ್ರ ದೇಶದಲ್ಲಿ ಸೇರಿರಬಹುದು. ಹೀಗೆ ಈ ದೇಶದಲ್ಲಿ ಒಕ್ಕೂಟ ಮಾದರಿಯ ಸರ್ಕಾರವಿದೆ. ಇಲ್ಲಿ ಭಾರತ ಸ್ವಾತಂತ್ರ್ಯ ಅಧಿನಿಯಮ ಹಾಗೂ ತಿದ್ದುಪಡಿಯಾದ ಭಾರತ ಸರ್ಕಾರ ಅಧಿನಿಯಮ ಇವೆರಡರ ಉಪಬಂಧಗಳಿಗನುಸಾರವಾಗಿ ಆಡಳಿತ ನಡೆಸಬೇಕಾಗುತ್ತದೆ. ಮಾನ್ಯರೆ, ಕೇಂದ್ರ ಅಧಿಕಾರಗಳ ಸಮಿತಿಯ ಈ ವರದಿಯಲ್ಲಿ ಈಗಿರುವ ಒಕ್ಕೂಟ ಸರ್ಕಾರಕ್ಕೆ ಅನ್ವಯವಾಗುವಂಥದು ಏನೂ ಇಲ್ಲ. ಭವಿಷ್ಯದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ನೆಲೆಗೊಳಿಸಬೇಕೆಂಬುದು ನಮ್ಮ ಪ್ರಯತ್ನ. ಆ ಒಕ್ಕೂಟ ವ್ಯವಸ್ಥೆಯ ಅತ್ಯಾವಶ್ಯಕ ಅಂಶಗಳು ಹೇಗಿರಬೇಕೆಂಬ ಕುರಿತು ಯೋಚಿಸಿದ್ದೇವೆ. ಒಕ್ಕೂಟದ ಸಂವಿಧಾನದ ಅತ್ಯಾವಶ್ಯಕ ಅಂಶವೆಂದರೆ

ಪರಮಾಧಿಕಾರವು ಕೇಂದ್ರ ಸರ್ಕಾರ ಹಾಗೂ ಘಟಕಗಳ ಸರ್ಕಾರಗಳಲ್ಲಿ ವಿಭಜಿತವಾಗಿದ್ದು ಅಧಿಕಾರದ ವಿಷಯದಲ್ಲಿ ಸಮನ್ವಯತೆ, ಸ್ವಾತಂತ್ರ್ಯ ಇರಬೇಕು. ಸದನದ ಮಾಹಿತಿಗಾಗಿ ನಾನು ರಾಜಕೀಯ ಚಿಂತಕರು ಹಾಗೂ ಒಕ್ಕೂಟದ ಸಂವಿಧಾನ ರಚನೆಯಲ್ಲಿ ತೊಡಗಿರುವವರು ಕಂಡುಕೊಂಡಂತೆ ಒಕ್ಕೂಟದ ಪರಿಭಾಷೆ ಕುರಿತು ಇರುವ ಸಾಂಪ್ರದಾಯಿಕ ಮಾತುಗಳನ್ನು ಇಲ್ಲಿ ಉದ್ಧರಿಸಲು ಬಯಸುತ್ತೇನೆ. ೧೯೨೯ರಲ್ಲಿ ಆಸ್ಟ್ರೇಲಿಯನ್ ಸಂವಿಧಾನವನ್ನು ಕುರಿತ ರಾಯಲ್ ಕಮಿಷನ್ ವರದಿಯಲ್ಲಿನ ವಿವರ ಹೀಗಿದೆ. ಈ ಪರಿಭಾಷೆಗೆ ಕಾರಣರಾದ ವ್ಯಕ್ತಿ ಸರ್ ರಾಬರ್ಟ್ ಗ್ಯಾರನ್, ಅವರು ಒಕ್ಕೂಟ ಸಂವಿಧಾನಗಳ ಇತಿಹಾಸದಲ್ಲಿ ಖ್ಯಾತನಾಮರು. ಅವರು ವಿವರಿಸಿರುವಂತೆ ಒಕ್ಕೂಟ ವ್ಯವಸ್ಥೆಯಲ್ಲಿ ಪರಮಾಧಿಕಾರ ಅಥವಾ ರಾಜಕೀಯ ಅಧಿಕಾರವು ಕೇಂದ್ರ ಹಾಗೂ ಸ್ಥಳೀಯ ಸರ್ಕಾರಗಳಲ್ಲಿ ವಿಭಜಿತವಾಗಿದ್ದು ಅವೆರಡೂ ತಮ್ಮ ತಮ್ಮ ನೆಲೆಗಳಲ್ಲಿ ಸ್ವತಂತ್ರವಾಗಿರುತ್ತವೆ. ಇದನ್ನು ನಾನು ಸಾಂಪ್ರದಾಯಿಕ ಪರಿಭಾಷೆ ಎಂದು ಕರೆಯಲು ಕಾರಣವೇನೆಂದರೆ ನಮ್ಮ ಸುತ್ತ ಮುತ್ತ ಅಸ್ತಿತ್ವದಲ್ಲಿರುವ ಒಕ್ಕೂಟ ಸಂವಿಧಾನಗಳನ್ನು ಗಮನಿಸಿದ ಆ ಪೈಕಿ ಯಾವುದೂ ಕಟ್ಟುನಿಟ್ಟಾಗಿ ಈ ಪರಿಭಾಷೆಗೆ ಅನುಸಾರವಾಗಿಲ್ಲವೆಂಬುದು ಕಂಡುಬರುತ್ತದೆ. ಈ ಪರಿಭಾಷೆಯಲ್ಲಿ ಹೇಳಿರುವಂತೆ ಎಲ್ಲಿಯೂ ಕೇಂದ್ರ ಹಾಗೂ ಸ್ಥಳೀಯ ಸರ್ಕಾರಗಳ ನಡುವಣ ಗೆರೆ ನಿಗದಿತವಾಗಿಲ್ಲ. ಕೇಂದ್ರ ಹಾಗೂ ಸ್ಥಳೀಯ ಘಟಕಗಳ ನಡುವೆ ಸಂಬಂಧ ಏರ್ಪಟ್ಟಿರುತ್ತದೆ, ಘಟಕಗಳು ಕೇಂದ್ರದ ಮೇಲೆ ಅವಲಂಬಿತವಾಗಿರುತ್ತವೆ. ತುರ್ತು ಸಂದರ್ಭಗಳಲ್ಲಿ ಕೇಂದ್ರವು ನಿಯಂತ್ರಣಾಧಿಕಾರವನ್ನು ಹೊಂದಿದ್ದು, ಘಟಕಗಳ ಮೇಲೆ ಅಧಿಕಾರವ್ಯಾಪ್ತಿ ಸಾಧಿಸಿ ವಿಷಯಗಳನ್ನು ತಾನೇ ನಿಯಂತ್ರಿಸುತ್ತದೆ. ಹಿಂಗಾಗಿ ಪರಿಭಾಷೆಯಲ್ಲಿ ಹೇಳಿರುವಂತೆ ಕಾರ್ಯನಿರ್ವಹಣೆಯಲ್ಲಿನ ಪೂರ್ಣಸ್ವಾತಂತ್ರ್ಯದ ಪರಿಕಲ್ಪನೆಯನ್ನು ಆಚರಣೆಯಲ್ಲಿ ತರಲಾಗುವುದಿಲ್ಲ. ಒಕ್ಕೂಟಗಳ ಇತಿಹಾಸದಲ್ಲಿ ಎದ್ದುಕಾಣುವ ಅಂಶವೆಂದರೆ ಕೇಂದ್ರ ಹಾಗೂ ಘಟಕಗಳು ಒಂದು ನಿರ್ದಿಷ್ಟ ಮಿತಿಯಲ್ಲಿ ತಮ್ಮ ಪರಮಾಧಿಕಾರವನ್ನು ಚಲಾಯಿಸುವಂತೆ ಗುರುತು ಮಾಡಬೇಕಾದ ಅಗತ್ಯವಿದೆ. ಬೇರೆ ಬೇರೆ ಅಭಿಪ್ರಾಯಗಳ ಮೇರೆಗೆ ವಿವಿಧ ಒಕ್ಕೂಟಗಳಲ್ಲಿ ಹೀಗೆ ಗುರುತು ಮಾಡುವ ಪ್ರಯತ್ನಗಳು ನಡೆದಿವೆ. ಎಂದರೆ ಕೇಂದ್ರಕ್ಕೆ ವಹಿಸಬೇಕಾದ ವಿಷಯಗಳು, ಘಟಕಗಳಿಗೆ ವಹಿಸಬೇಕಾದ ಅಥವಾ ಘಟಕಗಳಲ್ಲಿ ಉಳಿಸಿಕೊಳ್ಳಬೇಕಾದ ವಿಷಯಗಳು ಹಾಗೂ ಉಳಿದ ಅಧಿಕಾರ ಎಲ್ಲಿ ಇರಬೇಕು ಎಂಬ ಬಗ್ಗೆ ಯೋಚಿಸಲಾಗಿದೆ.

ಮಾನ್ಯರೆ, ಈಗ ನಮ್ಮ ದೇಶದ ಬಗ್ಗೆ ಹೇಳುವುದಾದರೆ ಇತಿಹಾಸದಲ್ಲಿ ಇತರ ಒಕ್ಕೂಟಗಳು ಎದುರಿಸದೇ ಇದ್ದಂತಹ ಸಮಸ್ಯೆ ನಮಗೆ ಎದುರಾಗಿದೆ. ಆಗಸ್ಟ್ ೧೫ಕ್ಕೆ ಮುಂಚೆ ಬ್ರಿಟಿಷ್ ಪರಮಾಧಿಕಾರಕ್ಕೆ ಒಳಪಟ್ಟಿದ್ದ ಪ್ರದೇಶಗಳು ಹಾಗೂ ಸೈದ್ಧಾಂತಿಕವಾಗಿ ಸ್ವತಂತ್ರವಾಗಿದ್ದರೂ ಬ್ರಿಟಿಷ್ ಅಧಿಪತ್ಯಕ್ಕೆ ಒಳಪಟ್ಟಿದ್ದ ಪ್ರದೇಶಗಳನ್ನು ಒಕ್ಕೂಟದ ವ್ಯಾಪ್ತಿಗೆ ತರಲು ನಿರ್ಧರಿಸಿದ್ದೇವೆ ಇಂಥ ಪ್ರದೇಶಗಳನ್ನು ಒಕ್ಕೂಟದಡಿ ತರುವಲ್ಲಿ ಇರುವ ಸಮಸ್ಯೆಯನ್ನು ಬೇರಾವ ಒಕ್ಕೂಟ ರಚನಾಕಾರರು ಎದುರಿಸಿಲ್ಲ. ಇನ್ನೊಂದು ವಾಸ್ತವಾಂಶವೆಂದರೆ ಪ್ರಾಂತಗಳಿಗೆ ರಾಜಪ್ರಭುತ್ವ (ಮಾನಾರ್ಕಿಯಲ್) ಮಾದರಿಯದಲ್ಲದ ಸರ್ಕಾರದ ವ್ಯವಸ್ಥೆಯಾಗಬೇಕು. ಭಾರತೀಯ ರಾಜ್ಯಗಳು ಒಕ್ಕೂಟದಡಿ ಸೇರಿ ರಾಜಪ್ರಭುತ್ವ ಮಾದರಿಯಡಿ ಇರಬೇಕು. ಸರ್ಕಾರ ರಾಜಪ್ರಭುತ್ವ ಮಾದರಿಯದಾಗಿರಲಿ ಅಥವಾ ಗಣರಾಜ್ಯ ಮಾದರಿಯದಾಗಿರಲಿ ನಾನು ಮೇಲೆ ಹೇಳಿದ ವಿಭಿನ್ನತೆಯಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಯಾವುದೇ ಧಕ್ಕೆ ಉಂಟಾಗುವುದಿಲ್ಲವೆಂದು ಯೋಚಿಸುವವರ ಪೈಕಿ ನಾನೂ ಒಬ್ಬ.

ಸದನದ ಅಭಿಪ್ರಾಯ ನಾನು ಗಮನಿಸಿರುವ ಮೇರೆಗೆ ಶಾಸಕಾಂಗದ ಹೊಣೆ ಹೊರುವ ಸರ್ಕಾರ ನಮಗೆ ಬೇಕು. ಅಂಥ ಜವಾಬ್ದಾರಿಯುತ ಸರ್ಕಾರ ರಾಜಪ್ರಭುತ್ವ ವ್ಯವಸ್ಥೆಯಲ್ಲು ಸಿಗುತ್ತದೆ. ಗಣರಾಜ್ಯ ವ್ಯವಸ್ಥೆಯಲ್ಲೂ ಸಿಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಈ ದೇಶದಲ್ಲಿ ಎರಡು ಪ್ರಕಾರದ ಪ್ರದೇಶಗಳಿರುವುದರಿಂದಾಗಿ ಕಂಡುಬರುವ ಮೇಲ್ನೋಟದ ತೊಂದರೆಗಳನ್ನು ನಾವು ಸುಲಭವಾಗಿ ನಿವಾರಿಸಿಕೊಂಡು ಎರಡೂ ಪ್ರಕಾರದ ಪ್ರದೇಶಗಳಲ್ಲಿನ ಸರ್ಕಾರದ ವ್ಯವಹಾರಗಳಲ್ಲಿ ಸೌಹಾರ್ದಯುತ

ಸಮನ್ವಯವನ್ನುಂಟುಮಾಡುವಂಥ ಒಕ್ಕೂಟ ಮಾದರಿಯ ಸಂವಿಧಾನವನ್ನು ರಚಿಸಬಹುದು.

ಮಾನ್ಯರೆ, ಸಂವಿಧಾನ ರಚನೆಯಲ್ಲಿ ಈ ಅಂಶವನ್ನು ಯಾವಾಗಲೂ ದೃಷ್ಟಿಯಲ್ಲಿರಿಸಿಕೊಂಡಿದ್ದೇವೆ. ಕೇಂದ್ರದ ಅಧಿಕಾರಗಳಿಗೆ ಸಂಬಂಧಿಸಿದ ಈ ಸಮಿತಿಯಲ್ಲಿಯೂ ಸಹ ಇದೇ ಅಭಿಪ್ರಾಯವನ್ನು ಹೊಂದಿದ್ದೇವೆ.

ನಾವು ಮಾಡಬೇಕಾದ ಕೆಲಸದಲ್ಲಿನ ಒಂದೆರಡು ವೈಚಿತ್ರ್ಯಗಳನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಮುಂಚೆ ಇದ್ದ ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳು ಹಾಗೂ ಭಾರತೀಯ ರಾಜ್ಯಗಳ ಸಂಬಂಧದಲ್ಲಿ ಕೇಂದ್ರಕ್ಕೆ ವಹಿಸಲಾಗುತ್ತಿರುವ ಆಡಳಿತ ವ್ಯಾಪ್ತಿಯ ಪ್ರಮಾಣ ಕುರಿತಂತೆ ನಾವು ಮಾಡುತ್ತಿರುವ ವ್ಯತ್ಯಾಸದ ತತ್ತ್ವಕ್ಕೆ ಒಪ್ಪಿಗೆ ದೊರಕಿದೆ. ರಾಜ್ಯಗಳು ತಮ್ಮ ಆಡಳಿತ ವ್ಯಾಪ್ತಿಯನ್ನು ಬಿಟ್ಟುಕೊಟ್ಟು ಒಕ್ಕೂಟಕ್ಕೆ ಸೇರಬೇಕೆಂಬ ಬಗ್ಗೆ ಸಮ್ಮತಿಸಲಾಗಿದೆ. ಕನಿಷ್ಠ ಸಂಖ್ಯೆಯ ವಿಷಯಗಳ ಸಂಬಂಧದಲ್ಲಿ ಸೇರ್ಪಡೆ ಹಾಗೂ ಇತರ ಒಕ್ಕೂಟ ವಿಷಯಗಳ ಸಂಬಂಧದಲ್ಲಿ ಅವರ ಒಪ್ಪಿಗೆಯಿಂದ ಸೇರ್ಪಡೆಯಾಗಬೇಕೆಂದು ಒಪ್ಪಿಕೊಳ್ಳಲಾಗಿದೆ. ಭಾರತೀಯ ರಾಜ್ಯಗಳ ಮನ್ನಣೆ ಪಡೆದ ಸಂವಿಧಾನ ಸಲಹೆಗಾರರು ಹಾಗೂ ಭಾರತೀಯ ರಾಜ್ಯಗಳ ಜನಪ್ರತಿನಿಧಿಗಳು ಕೇಂದ್ರಕ್ಕೆ ರಕ್ಷಣೆ, ವಿದೇಶಾಂಗ ವ್ಯವಹಾರ ಹಾಗೂ ಸಂಪರ್ಕ ವಿಷಯಗಳಷ್ಟೇ ಅಲ್ಲದೇ ಬೇರೆ ಹಲವು ಬಗೆಯ ವಿಷಯಗಳನ್ನು ವಹಿಸುವುದನ್ನು ಒಪ್ಪಿಕೊಳ್ಳುವ ಜಾಣ್ಮೆಯನ್ನು ಮಾನ್ಯ ಮಾಡುತ್ತಾರೆ ಎಂದು ತಿಳಿಸಲು ಸಂತೋಷವಾಗುತ್ತದೆ. ಸದನಕ್ಕೆ ನನ್ನ ಕೋರಿಕೆ ಏನೆಂದರೆ ನಾನು ಹೇಳಿದ ಅಂಶ ಆ ಸಲಹೆಗಾರರಿಗೆ ಮನದಟ್ಟಾಗಿ ಅವರು ಅದನ್ನು ಅನುಷ್ಠಾನಗೊಳಿಸಬೇಕೆಂದರೆ ಅದನ್ನು ಪುಷ್ಟೀಕರಿಸದಿರುವಂಥದಾವುದನ್ನೂ ನಾವು ಸಂವಿಧಾನದಲ್ಲಿ ಸೇರಿಸುವುದಿಲ್ಲವೆಂದು ಅವರಿಗೆ ಮನವರಿಕೆ ಮಾಡುವುದು.

ಮಾನ್ಯರೆ, ಕೇಂದ್ರಕ್ಕೆ ರಾಜ್ಯಗಳು ವಹಿಸಿದ ಅಧಿಕಾರವ್ಯಾಪ್ತಿಯ ಪ್ರಮಾಣ ಹಾಗೂ ಬ್ರಿಟಿಷ್ ಇಂಡಿಯನ್ ಪ್ರಾಂತ್ಯಗಳಿಗೆ ವಹಿಸಿದ ಅಧಿಕಾರವ್ಯಾಪ್ತಿ ಇವೆರಡರ ನಡುವಣ ಅಂತರದ ತಾಕಲಾಟ ಈ ಸದನದ ಮುಂದೆ ಮಂಡಿಸಬೇಕಾಗಿರುವ ವರದಿಯ ಸ್ವರೂಪದ ಮೇಲೆ ಪರಿಣಾಮ ಬೀರಿದೆ ಎಂಬುದು ವಸ್ತುಸ್ಥಿತಿ. ಈ ವರದಿಯೊಂದಿಗೆ ३ ವಿಷಯ ಪಟ್ಟಿಗಳನ್ನು ಲಗತ್ತಿಸಲಾಗಿದ್ದು ಅವು ಒಕ್ಕೂಟದ ಪಟ್ಟಿ ಪ್ರಾಂತ್ಯದ ಪಟ್ಟಿ ಹಾಗೂ ಸಮವರ್ತಿ ಪಟ್ಟಿ, ರಾಜ್ಯಗಳಿಗೆ ಮಾತ್ರ ನಿಕಟ ಸಂಪರ್ಕವೇರ್ಪಡುವುದು.

ಇನ್ನೊಂದು ವ್ಯತ್ಯಾಸದ ಕಡೆ ನಾನು ಗಮನ ಸೆಳೆಯಬೇಕು ಕ್ಯಾಬಿನೆಟ್ ಮಿಷನ್ ಯೋಜನೆಯನ್ನು ನಾವು ಅನುಷ್ಠಾನಗೊಳಿಸುವಾಗ ಕ್ಯಾಬಿನೆಟ್ ಮಿಷನ್‌ಗೆ ಒಂದು ಪ್ರಸ್ತಾವವನ್ನು ಅಂಗೀಕರಿಸಿದ್ದೆವು. ಅದೆಂದರೆ ಕೇಂದ್ರಕ್ಕೆ ವಹಿಸದಿರುವ ವಿಷಯಗಳನ್ನು ಪ್ರಾಂತ್ಯಗಳಿಗೆ ವಹಿಸಲಾಗಿದೆ ಎಂದು ಭಾವಿಸಲಾಗಿದೆ ಎಂಬುದು. ರಾಜ್ಯಗಳ ವಿಷಯದಲ್ಲಿ, ರಾಜ್ಯಗಳು ಒಕ್ಕೂಟಕ್ಕೆ ಬಿಟ್ಟುಕೊಡದಿರುವ ವಿಷಯಗಳು ರಾಜ್ಯಗಳಲ್ಲೇ ಉಳಿದಿರುತ್ತವೆ ಎಂಬ ಮಾತನ್ನು ಹೇಳಲಾಗಿತ್ತು. ಒಟ್ಟಾರೆ ತಾತ್ಪರ್ಯ ಒಂದೇ ಆಗಿದೆ ಎಂದರೆ ಒಕ್ಕೂಟ ವಿಷಯಗಳಲ್ಲದ ಮಿಕ್ಕ ವಿಷಯಗಳು ಪ್ರಾಂತ್ಯಗಳು ಹಾಗೂ ರಾಜ್ಯಗಳಲ್ಲಿ ಉಳಿದುಕೊಳ್ಳುತ್ತವೆ.

ಮಾನ್ಯರೆ, ಮೊದಲನೇ ವರದಿ ಸಲ್ಲಿಸಿದ ತರುವಾಯ ಈ ಸಮಿತಿ ಸಭೆ ಸೇರಿದಾಗ ಕ್ಯಾಬಿನೆಟ್ ಮಿಷನ್ ಯೋಜನೆಯ ಸ್ವೀಕಾರದ ಪ್ರಯುಕ್ತ ನಮ್ಮ ಮೇಲೆ ನಾವೇ ವಿಧಿಸಿಕೊಂಡ ಸಂಕೋಲೆಯಿಂದ ನಾವು ಮುಕ್ತರಾಗಿದ್ದೆವು. ಪ್ರಾಂತ್ಯಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ವಿಷಯಗಳನ್ನು ನೀಡಿ, ಪ್ರಾಂತೀಯ ಸರ್ಕಾರಗಳು ತಾವು ಬಯಸುವಂತೆ ಆದೇಶಿಸುವ ಸ್ವಾತಂತ್ರ್ಯ ನೀಡಿ ಈ ದೇಶದಲ್ಲಿ ಕೇಂದ್ರವನ್ನು ಬಲಶಾಲಿಯನ್ನಾಗಿ ಮಾಡಬೇಕೆಂಬ ನಿರ್ಧಾರವನ್ನು ಸಮಿತಿ ತಳೆದಿತ್ತು. ಈ ಅಭಿಪ್ರಾಯಕ್ಕನುಸಾರವಾಗಿ ವಿಷಯಗಳ ३ ಪಟ್ಟಿಗಳನ್ನು ಸಿದ್ಧಪಡಿಸಲು ನಿರ್ಧರಿಸಲಾಗಿತ್ತು. ಅವು ಕೇಂದ್ರ ವಿಷಯಗಳು, ಪ್ರಾಂತೀಯ ವಿಷಯಗಳು, ಸಮವರ್ತಿ ವಿಷಯಗಳು. ಇದಲ್ಲದೇ ಯಾವುದಾದರೂ ವಿಷಯ ಉಳಿದರೆ ಅಥವಾ ಈ ३ ಪಟ್ಟಿಗಳಲ್ಲಿ ಸೇರಿಸಲಾಗದಂಥ ವಿಷಯ ಭವಿಷ್ಯದಲ್ಲಿ ಉದ್ಭವಿಸಿದರೆ ಪ್ರಾಂತ್ಯಗಳಿಗೆ ಸಂಬಂಧಿಸಿದ ಮಟ್ಟಿಗೆ ಅದು ಕೇಂದ್ರಕ್ಕೆ ಸೇರಿರುತ್ತದೆಂದು ಭಾವಿಸಬೇಕೆಂದು ತೀರ್ಮಾನಿಸಲಾಗಿತ್ತು.

ಆದರೆ ಈ ನಿರ್ಧಾರವನ್ನು ಸಮಿತಿಯು ರಾಜ್ಯಗಳಿಗೆ ಅನ್ವಯಿಸಿಲ್ಲ ಈ ಬಗ್ಗೆ ವರದಿಯಲ್ಲಿ ನಿಮಗೆ

ಉಲ್ಲೇಖ ಸಿಗುತ್ತದೆ. ಅಲ್ಲಿ ಹೇಳಿರುವುದೇನೆಂದರೆ ಮಿಕ್ಕ ವಿಷಯಗಳನ್ನು ರಾಜ್ಯಗಳು ಕೇಂದ್ರಕ್ಕೆ ಬಿಟ್ಟುಕೊಡಲು ಇಚ್ಛಿಸದಿದ್ದರೆ ಅವು ರಾಜ್ಯಗಳಲ್ಲೇ ಉಳಿದಿರುತ್ತವೆ. ಈ ಸದನದಲ್ಲಿರುವ ರಾಜ್ಯಗಳ ಪ್ರತಿನಿಧಿಗಳು, ಸಮಿತಿಯು ಹಾಗೆ ಹೇಳಿದಾಗ ಯಾವ ಆಶಯವನ್ನು ಹೊಂದಿತ್ತೋ ಅದೇ ರೀತಿಯಲ್ಲಿ ನಿರ್ಧಾರ ಕೈಗೊಳ್ಳುತ್ತಾರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನಾವು ಅವು ಇರುವಂತೆಯೇ ಸ್ವೀಕರಿಸಬೇಕಾಗಿದೆ.

ನಾವು ಗಮನಿಸಬೇಕಾದ ಮಹತ್ತ್ವದ ಅಂಶ ಇನ್ನೊಂದಿದೆ. ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಮಿಕ್ಕ ವಿಷಯಗಳೆಂದರೆ ನಾವು ವರದಿಗೆ ಲಗತ್ತಿಸಿದ ೩ ದೊಡ್ಡ ಪಟ್ಟಿಗಳಲ್ಲಿ ಸೇರಿಸಲಾಗದ ಯಾವುದೇ ವಿಷಯಗಳು. ರಾಜ್ಯಗಳಿಗೆ ಸಂಬಂಧಿಸಿದಂತೆ ಕೇಂದ್ರಪಟ್ಟಿಯಲ್ಲಿ ಸೇರಿಸಲಾಗದ ಎಲ್ಲ ವಿಷಯಗಳು ಈ ಬಗ್ಗೆ ನಾನು ತಮ್ಮ ಗಮನ ಸೆಳೆಯಲು ಬಯಸುತ್ತೇನೆ. ಏಕೆಂದರೆ ಸಮವರ್ತಿ ಪಟ್ಟಿಯಲ್ಲಿರುವ ಎಲ್ಲ ವಿಷಯಗಳನ್ನಲ್ಲದಿದ್ದರೂ ಆ ಪಟ್ಟಿಯಲ್ಲಿ ಕೆಲವನ್ನಾದರೂ ರಾಜ್ಯಗಳು ಒಪ್ಪುವಂತೆ ನನ್ನ ಸನ್ಮಾನ್ಯ ಮಿತ್ರ ಡಾ. ಅಂಬೇಡ್ಕರ್ ಮಾಡುತ್ತಾರೆಂದು ನನಗೆ ಗೊತ್ತು. ಏಕೆಂದರೆ ಅದರ ಪರವಾಗಿರುವ ಅಭಿಪ್ರಾಯ ಹೊಂದಿರುವ ಗುಂಪು ಇಲ್ಲಿದೆ. ಆದರೆ ವಸ್ತುಸ್ಥಿತಿ ಇಂದು ಇರುವಂತೆ ವರದಿಯು ಇಂದು ಇರುವಂತೆ ಪ್ರಾಂತೀಯ ಪಟ್ಟಿಯಲ್ಲಿ ಸೇರಿರುವ ಎಲ್ಲ ವಿಷಯಗಳು ಸಮವರ್ತಿ ಪಟ್ಟಿಯಲ್ಲಿ ಸೇರಿರುವ ಎಲ್ಲ ವಿಷಯಗಳು, ಕೇಂದ್ರಪಟ್ಟಿಯಲ್ಲಿ ಸೇರಿರದ ವಿಷಯಗಳು ರಾಜ್ಯಗಳಿಗೆ ಸೇರುತ್ತವೆ. ಈ ವರದಿಯನ್ನು ಪರಿಶೀಲಿಸುವಾಗ ಸದನವು ಈ ಅಂಶವನ್ನು ನೆನಪಿಡಬೇಕೆಂದು ನನ್ನ ಅನಿಸಿಕೆ. ವರದಿಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಇದರಲ್ಲಿ ಸೇರಿಸಲಾಗಿದೆಯೇ ಅಥವಾ ಕೈಬಿಡಲಾಗಿದೆಯೇ ಎಂಬ ಸಂಶಯದ ನಿವಾರಣೆಗಾಗಿ ನಾನು ಒಂದು ಅಂಶದ ಕಡೆ ಗಮನ ಸೆಳೆಯಲು ಬಯಸುತ್ತೇನೆ. ಮೊದಲನೇ ವರದಿಯಲ್ಲಿ ಈ ನಾಲ್ಕು ಶೀರ್ಷಿಕೆಗಳಡಿ ಪ್ರತಿಯೊಂದಕ್ಕೂ ಸೇರುವ ವಿಷಯಗಳ ಪಟ್ಟಿ ನೀಡಲಾಗಿತ್ತು. ಪಟ್ಟಿಗಳಲ್ಲಿ ಸೇರಿಸಲಾಗದ ಕೆಲವು ಉಪಬಂಧಗಳನ್ನು ಸಂವಿಧಾನದಲ್ಲಿ ಸೇರಿಸುವ ಬಗ್ಗೆ ಶಿಫಾರಸು ಮಾಡಲಾಗಿತ್ತು. ಉದಾಹರಣೆಗೆ ಮೊದಲನೇ ವರದಿಯ ೨ (ಎ) ಕಂಡಿಕೆಯ ಕೊನೆಯ ವಾಕ್ಯದಲ್ಲಿ ರಕ್ಷಣಾ ವಿಷಯಗಳಿಗೆ ಸಂಬಂಧಿಸಿದ, ಭಾರತ ಸರ್ಕಾರದ ಅಧಿನಿಯಮದ ೧೦೨ ಮತ್ತು ೧೦೬ (ಎ) ಪ್ರಕರಣಗಳಲ್ಲಿರುವಂಥದೇ ಉಪಬಂಧವನ್ನು ನಾವು ಮಾಡುವ ಕುರಿತು ಉಲ್ಲೇಖಿಸಲಾಗಿದೆ. ಮಾನ್ಯರೇ ತರುವಾಯದಲ್ಲಿ ೨(ಡಿ) ಕಂಡಿಕೆಯಲ್ಲಿ ಒಂದು ಉಪಾಂತ ಉಪ ಕಂಡಿಕೆ ಇದ್ದು ಒಂದು ಉಪಬಂಧವನ್ನು ಕಲ್ಪಿಸಲಾಗಿದೆ. ರಾಜ್ಯ ಪ್ರತಿನಿಧಿಗಳ ಆಶಯವನ್ನು ಪೋಷಿಸುವುದಕ್ಕಾಗಿ ಸಮಿತಿಯು ಭಾರತದ ಇತರ ಭಾಗಗಳ ಮಟ್ಟಕ್ಕೆ ಬರುವುದಕ್ಕಾಗಿ ತಮ್ಮ ಹಣಕಾಸು ವ್ಯವಸ್ಥೆಯನ್ನು ಮರುಯೋಜಿಸಲು ರಾಜ್ಯಗಳಿಗೆ ಸ್ವಲ್ಪ ಕಾಲಾವಕಾಶ ನೀಡಬೇಕೆಂದು ಉಪಬಂಧದಲ್ಲಿ ಅವಕಾಶ ಕಲ್ಪಿಸಿತು. ಎರಡನೇ ವರದಿಯಲ್ಲಿಯೂ ಆ ಉಪಬಂಧವನ್ನು ಉಳಿಸಿಕೊಳ್ಳಲಾಗಿದೆ.

ಎರಡನೇ ವರದಿಯಲ್ಲಿ ಕೆಲ ನಿರ್ದಿಷ್ಟ ವಿಷಯಗಳತ್ತ ಗಮನ ಸೆಳೆಯಲಾಗಿದೆ. ಆ ವಿಷಯಗಳೆಂದರೆ...

**ಶ್ರೀ ಎಚ್.ವಿ. ಕಾಮತ್** : ಸಭಾಧ್ಯಕ್ಷರೆ, ಧ್ವನಿವರ್ಧಕ ವ್ಯವಸ್ಥೆ ೧೫ನೇ ದಿನಾಂಕದವರೆಗೆ ಇದ್ದಂತೆ ಸಮರ್ಪಕವಾಗಿಲ್ಲ ಎಂದು ವಿನಂತಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಅದಕ್ಕೆ ಸ್ವತಂತ್ರವಾಗಿರುವ ಸೋಂಕು ತಗುಲಿದೆ. ಅದನ್ನು ದುರಸ್ತಿ ಮಾಡಿಸಿ ಸರಿಪಡಿಸುತ್ತೇವೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಸಮಿತಿಯ ೨ನೇ ವರದಿಯನ್ನು ಪರಿಗಣನೆಗೆ ಎತ್ತಿಕೊಳ್ಳಬೇಕೆಂಬ ಪ್ರಸಾವವಿದ್ದರೂ ಎರಡನೇ ವರದಿಯಲ್ಲಿ ಹೇಳಿರುವುದಕ್ಕೆ ವಿರುದ್ಧವಾಗಿಲ್ಲದ ಮೊದಲನೇ ವರದಿಯ ಕೆಲವು ಭಾಗಗಳನ್ನು ಪರಿಗಣನೆಗೆ ಎತ್ತಿಕೊಳ್ಳಲು ಸದನಕ್ಕೆ ಹಕ್ಕು ಇದೆ ಎಂದು ನನ್ನ ಭಾವನೆ. ಮಾನ್ಯರೆ, ಪಟ್ಟಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಈ ಪಟ್ಟಿಗಳನ್ನು ಸ್ಥೂಲವಾಗಿ ನೋಡಿದರೆ ಯಾರೇ ಆಗಲಿ ಅವು ದೀರ್ಘವಾಗಿವೆಯೆಂದು ಅದರಲ್ಲೂ ಕೇಂದ್ರ ಪಟ್ಟಿಯಲ್ಲಿ ೮೭ ವಿಷಯಗಳಿವೆ ಎಂಬ ಅಭಿಪ್ರಾಯ

ಮೂಡಬಹುದು. ಸಮಿತಿಯು ಪ್ರಾಂತೀಯ ಹಾಗೂ ಸಮವರ್ತಿ ಪಟ್ಟಿಗಳಿಂದ ಕೆಲವು ವಿಷಯಗಳನ್ನೆತ್ತಿ ಕೇಂದ್ರಪಟ್ಟಿಯಲ್ಲಿ ಸೇರಿಸಿ ಅದನ್ನು ಅನಾವಶ್ಯಕವಾಗಿ ದೀರ್ಘಗೊಳಿಸಲಾಗಿದೆ ಎಂದು ಭಾವಿಸಬಹುದು. ಮಾನ್ಯ ಸದಸ್ಯರು ಈ ಪಟ್ಟಿಗಳನ್ನು ಪರಿಶೀಲಿಸಿ ೧೯೩೫ರ ಅಧಿನಿಯಮದಲ್ಲಿನ ಪಟ್ಟಿಗಳೊಂದಿಗೆ ಹೋಲಿಸಿ ನೋಡಿದರೆ ಅಲ್ಲಿ ಇಲ್ಲಿ ಒಂದೆರಡನ್ನು ಬಿಟ್ಟರೆ ನಾವು ಎಲ್ಲಿಯೂ ಆ ಅಧಿನಿಯಮದಲ್ಲಿ ಪ್ರಾಂತಗಳಿಗೆ ವಹಿಸಲಾದ ವಿಷಯಗಳ ಮೇಲೆ ಆಕ್ರಮಣ ಮಾಡಿದ್ದೇವೆ ಎನಿಸುವುದಿಲ್ಲ. ಕೇಂದ್ರದ ಪಟ್ಟಿಗೆ ಸಂಬಂಧಿಸಿದಂತೆ ಒಂದು ಅಂಶವನ್ನು ಹೇಳಲು ಬಯಸುತ್ತೇನೆ. ಕೇಂದ್ರಪಟ್ಟಿಯಲ್ಲಿರುವ ಕೆಲವು ವಿಷಯಗಳನ್ನು ತುಂಡರಿಸಿ ಪ್ರತ್ಯೇಕ ವಿಷಯಗಳನ್ನಾಗಿಸಿರುವುದರಿಂದ ವಿಷಯ ಸಂಖ್ಯೆ ಅಧಿಕಗೊಂಡಿದೆ. ಬೇರೆ ಸಂದರ್ಭಗಳಲ್ಲಿ ಭಾರತ ಸರ್ಕಾರದ ಅಧಿನಿಯಮದಲ್ಲಿ ಕಂಡುಬಾರದ ಕೆಲವನ್ನು ಬೇರೆ ಸಂವಿಧಾನಗಳಿಂದಾಯ್ದು ಅಳವಡಿಸಿಕೊಂಡಿದ್ದೇವೆ. ಆದರೆ ಸಮಿತಿಯು ಅಭಿಪ್ರಾಯಪಡುವ ಮೇರೆಗೆ ಆ ಪೈಕಿ ಯಾವುದೂ ಪ್ರಾಂತೀಯ ಪಟ್ಟಿ ಅಥವಾ ಸಮವರ್ತಿ ಪಟ್ಟಿಗೆ ಸೇರಬೇಕು ಎನಿಸುವಂಥ ಲಕ್ಷಣವನ್ನು ಹೊಂದಿಲ್ಲ.

ಈ ಸಂಬಂಧದಲ್ಲಿ ನಾನು ಉಲ್ಲೇಖಿಸಬೇಕಾದ ಒಂದು ವಿಷಯವಿದೆ. ಭಾರತ ಸ್ವಾತಂತ್ರ್ಯ ಅಧಿನಿಯಮದಿಂದ ಈ ದೇಶದಲ್ಲಿ ಉಂಟಾದ ತಲೆನೋವೆಂದರೆ ಭಾರತ ಸರ್ಕಾರ ಹಾಗೂ ಭಾರತೀಯ ರಾಜ್ಯಗಳ ನಡುವಣ ರಾಜಕೀಯ ಸಂಬಂಧವನ್ನು ಕಡಿದು ಹಾಕುವುದನ್ನು ಅದು ಉತ್ತೇಜಿಸುತ್ತದೆ. ಆ ಅಧಿನಿಯಮ ಅಥವಾ ವಿಧೇಯಕವು ಅದು ರಚಿತವಾದ ಮೂಲರೂಪದಲ್ಲೇ ಕಾನೂನಾಗಿದ್ದರೆ ಕಡಿದು ಹಾಕುವಿಕೆಯು ಪೂರ್ಣವಾಗುತ್ತಿತ್ತು. ಆದರೆ ಅಂಥ ಅಪಾಯವನ್ನು ತಪ್ಪಿಸುವಂಥ ಉಪಬಂಧಗಳನ್ನು ಮಂಡಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ಸಂಸತ್ತಿನಲ್ಲಿ ಅಧಿನಿಯಮಿಸಲಾದಂತೆ ಅಧಿನಿಯಮದಲ್ಲಿ ಉಪಬಂಧ ಕಲ್ಪಿಸಿದ್ದು, ಈಗ ಈ ಡೊಮಿನಿಯನ್ ದೇಶದ ಗವರ್ನರ್ ಜನರಲ್ ಆಗಿರುವ ರಾಜಕೀಯ ತಜ್ಞವ್ಯಕ್ತಿಯ ಪೂರ್ಣ ಬೆಂಬಲದಿಂದ ಮಾಡಿದ್ದ ಬೇಡಿಕೆಯ ಅರ್ಥದಷ್ಟಿರಲಿಲ್ಲ. ಇಲ್ಲಿಂದ ಮಾಡಿದ ಒತ್ತಾಯದ ಅಭಿಪ್ರಾಯಕ್ಕೆ ಭಾಗಶಃ ಮನ್ನಣೆ ದೊರೆತು ತನ್ಮೂಲಕ ಕೇಂದ್ರ ಹಾಗೂ ಭಾರತೀಯ ರಾಜ್ಯಗಳ ನಡುವೆ ಈಗಿರುವ ಆರ್ಥಿಕ ಸಂಪರ್ಕವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಲಾಯಿತು. ಯಾವುದೋ ಒಂದು ರೀತಿಯಲ್ಲಿ ಆ ಸಂಪರ್ಕವನ್ನು ಉಳಿಸಲು ಕ್ರಮಗಳನ್ನು ಕೈಗೊಂಡಿರದಿದ್ದರೆ ಆ ಸಂಪರ್ಕ ಕಡಿದುಹೋಗುತ್ತಿತ್ತು. ಆ ಸಂಪರ್ಕದ ಪುನಶ್ಚೇತನದ ಕಾರಣದಿಂದ ರಾಜಕೀಯ ಸಂಪರ್ಕಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ೧೯೩೫ರ ಅಧಿನಿಯಮಕ್ಕಿಂತ ಭಾರತ ಸ್ವಾತಂತ್ರ್ಯ ಅಧಿನಿಯಮದಿಂದಾಗಿ ನಾವು ಇಂದು ಡೊಮಿನಿಯನ್ ಭಾರತದಲ್ಲಿದ್ದೇವೆ.

ಡೊಮಿನಿಯನ್ ಸ್ವತಂತ್ರ ಭಾರತದ ಭೌಗೋಳಿಕ ಪರಿಮಿತಿಯಲ್ಲಿ ಬರುವ ಅಸಂಖ್ಯಾತ ರಾಜ್ಯಗಳು ಡೊಮಿನಿಯನ್ ಸ್ವತಂತ್ರ ದೇಶದಲ್ಲಿ ಪ್ರವೇಶ ಪಡೆದಿವೆ. ಆಗಸ್ಟ್ ೧೫ಕ್ಕೆ ಮುಂಚೆ ಇಲ್ಲದಿದ್ದ ತಾವು ಒಪ್ಪಿಕೊಂಡ ವಿಷಯಗಳ ಸಂಬಂಧದಲ್ಲಿ ಡೊಮಿನಿಯನ್ ಸ್ವತಂತ್ರ ದೇಶವು ಕಾನೂನುಗಳನ್ನು ಮಾಡಬಹುದು ಎಂದು ರಾಜ್ಯಗಳು ಒಪ್ಪಿಕೊಂಡಿವೆ. ಬಹುತೇಕ ಎಲ್ಲ ರಾಜ್ಯಗಳು ಸಂವಿಧಾನ ರಚನಾಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳಿಸಿದ್ದು, ಆ ಸಂವಿಧಾನ ರಚನಾಸಭೆಯು ಡೊಮಿನಿಯನ್ ಸ್ವತಂತ್ರ ಭಾರತ ಶಾಸನಸಭೆಯಾಗಿಯೂ ಕೆಲಸ ಮಾಡುತ್ತದೆ. ಇದರಿಂದ ಕಳೆದ ೧೫೦ ವರ್ಷಗಳಲ್ಲಿದ್ದದ್ದಕ್ಕಿಂತ ಈಗ ಕೇಂದ್ರ ಹಾಗೂ ರಾಜ್ಯಗಳ ನಡುವಣ ರಾಜಕೀಯ ಹಾಗೂ ಸಂವಿಧಾನಾತ್ಮಕ ಸಂಬಂಧ ಹೆಚ್ಚು ನಿಕಟವಾಗಿದೆ. ನಾನು ಕೇವಲ ರಾಜಕೀಯ ಹಾಗೂ ಸಂವಿಧಾನತ್ಮಕ ಸಂಬಂಧ ಎಂದಿದ್ದೇನೆ. ಹಿಂದೆ ಭಾರತೀಯ ರಾಜ್ಯಗಳ ಮೇಲೆ ಚಲಾಯಿಸುತ್ತಿದ್ದ ಹಿಡಿತದ ಪರಿಣಾಮದ ಕುರಿತು ಉಲ್ಲೇಖಿಸುವುದಿಲ್ಲ. ಅದು ಈಗಿರುವುದಕ್ಕಿಂತ ಆಗ ಇನ್ನೂ ದಕ್ಷವಾಗಿದ್ದಿರಬಹುದು. ಗಮನ ಸೆಳೆಯುವ ಮತ್ತೊಂದು ಅಂಶವೆಂದರೆ ನಾವು ಒಂದು ರಾಜಕೀಯ ಹಾಗೂ ಸಂವಿಧಾನಾತ್ಮಕ ಸಮಿತಿಯನ್ನು ರಚಿಸಿದ್ದು ಅದು ಆಗಸ್ಟ್ ೧೫ರಿಂದ ಕಾರ್ಯಾರಂಭ ಮಾಡಿದೆ. ಇದರ ಯಶಸ್ಸಿಗೆ ಕಾರಣ

ರಾಜ್ಯಗಳಲ್ಲಿ ಸಾರ್ವಜನಿಕ ಅಭಿಪ್ರಾಯ ಜಾಗೃತಗೊಂಡಿರುವುದು ಎರಡನೆಯದಾಗಿ ಇಂದು ರಾಜ್ಯಗಳ ಇಲಾಖೆಯ ಅಧ್ಯಕ್ಷತೆ ವಹಿಸಿರುವ ಸರ್ದಾರ್ ವಲ್ಲಭಭಾಯಿ ಪಟೇಲರು ಸ್ವತಂತ್ರ ಭಾರತಕ್ಕೆ ಸೇರುವಂತೆ ಭಾರತೀಯ ರಾಜ್ಯಗಳಿಗೆ ಕರೆ ನೀಡಿದ ಕಾರ್ಯನೀತಿಗೆ ಯಶಸ್ಸು ಸಲ್ಲಬೇಕು. ಮೂರನೆಯದಾಗಿ ಯಶಸ್ಸಿಗೆ ಪಾತ್ರರಾದ ಲಾರ್ಡ್ ಮೌಂಟ್‌ಬ್ಯಾಟನ್ ತಮ್ಮ ರಾಜಕೀಯ ಪರಿಣತಿ ಹಾಗೂ ಪ್ರತಿಭೆಯಿಂದ ಮುಕ್ತ ರಾಯಭಾರವೆಂಬ ಹೆಸರಿನಲ್ಲಿ ಭಾರತೀಯ ರಾಜ್ಯಗಳು ಬಹುದೊಡ್ಡ ಸಂಖ್ಯೆಯಲ್ಲಿ ಪ್ರವೇಶ ಪಡೆಯುವಂತೆ ಮಾಡುವ ಮೂಲಕ ಅವುಗಳನ್ನು ಒಂದೆಡೆ ತಂದರು. ಈ ವಿಷಯದಲ್ಲಿನ ಅವರ ಉತ್ಸಾಹ ಹಾಗೂ ರಾಜಕೀಯ ಕೌಶಲದಿಂದಾಗಿ ದೊರೆತ ಫಲಿತಾಂಶವನ್ನು ಇಂದು ನಾವು ಸಂತೋಷದಿಂದ ವೀಕ್ಷಿಸುತ್ತಿದ್ದೇವೆ.

ಮಾನ್ಯರೆ, ನಾನು ಮೇಲಿನ ಅಂಶವನ್ನು ತಿಳಿಸಲು ಕಾರಣವೇನೆಂದರೆ ಈ ಪ್ರವೇಶ ಪಡೆಯುವುದು ಎಂದರೇನು? ಎಂದು ಕೆಲವು ಅಭಿಪ್ರಾಯಗಳು ಕೇಳಿಬಂದಿವೆ. ರಾಜ್ಯಗಳು ಮೂರು ವಿಷಯಗಳಿಗೆ ಮಾತ್ರ ಒಪ್ಪಿಕೊಂಡಿವೆ ಎಂದು ಹೇಳಲಾಗಿದೆ. ಸ್ಥೂಲವಾಗಿ ಹೇಳಲಾದಂತೆ ೩ ವಿಷಯಗಳು ಎಂಬುದು ನಿಜ. ಆದರೆ ರಾಜ್ಯಗಳು ಸಹಿಮಾಡಿದ ಪ್ರವೇಶದ ಲಿಖಿತ ಪತ್ರದಲ್ಲಿ ಮೂರು ವಿಷಯಗಳ ಪ್ರತಿಯೊಂದು ಶೀರ್ಷಿಕೆಯಡಿ ಬರುವ ವಿಷಯಗಳನ್ನು ವಿವರಿಸಲಾಗಿದ್ದು ಅವು ೧೮ ರಿಂದ ೨೦ ಇವೆ. ಕೇಂದ್ರ ಅಧಿಕಾರಗಳ ಸಮಿತಿಯ ವರದಿಗೆ ಲಗತ್ತಿಸಲಾದ ಪಟ್ಟಿಯ ಮೇರೆಗೆ ನೋಡಿದರೆ ಆ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ನಾನು ಈ ನಿರ್ದಿಷ್ಟ ಅಂಶವನ್ನೆತ್ತಿ ಹೇಳಲು ಕಾರಣವೇನೆಂದರೆ ಸದನದಲ್ಲಿ ಹಾಜರಿರುವ ರಾಜ್ಯಗಳ ಪ್ರತಿನಿಧಿಗಳು ಸಂವಿಧಾನ ರಚನೆಯಾಗಿರಲಿ, ಶಾಸನ ರಚನೆಯಾಗಿರಲಿ ಅಥವಾ ಕೇಂದ್ರ ಆಡಳಿತದ ಮೇಲಿನ ನಿಯಂತ್ರಣದ ಕುರಿತಾಗಲೀ ಕಲಾಪದ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಅವರಿಗೂ ಹಾಗೂ ಸದನದಲ್ಲಿರುವ ಇತರ ಪ್ರತಿನಿಧಿಗಳಿಗೂ ಯಾವುದೇ ವ್ಯತ್ಯಾಸವಿಲ್ಲವೆಂದು ಅವರಿಗೆ ಅರಿವಾಗಲಿ ಎಂಬುದು ನನ್ನ ಅಭಿಪ್ರಾಯ. ಈಗ ನಾನು ಮೂರು ಪಟ್ಟಿಗಳ ಬಗ್ಗೆ ಉಲ್ಲೇಖಿಸುತ್ತಿದ್ದು ಮಿಕ್ಕ ಅಧಿಕಾರಗಳನ್ನು ಕುರಿತ ಪ್ರತ್ಯೇಕತೆ ಮುಂದುವರಿಯಬೇಕೇ? ಎಂಬ ಪ್ರಶ್ನೆ ಇಲ್ಲಿನ ಹಲವು ಸದಸ್ಯರ ಮನಸ್ಸನ್ನು ಕೊರೆಯುತ್ತಿದೆ ಎಂದು ನನಗೆ ಗೊತ್ತು. ಈ ಪ್ರತ್ಯೇಕತೆಯನ್ನು ನಿವಾರಿಸಲು ಎರಡು ಮಾರ್ಗಗಳಿವೆ. ಮೂರು ಪಟ್ಟಿಗಳ ವಿಷಯಗಳನ್ನು ಸಂಪೂರ್ಣವಾಗಿ ವಿವರಿಸಿರುವ ಕಾರಣದಿಂದ ಕ್ಯಾಬಿನೆಟ್ ಮಿಷನ್ ಯೋಜನೆಯನ್ನು ಸ್ವೀಕರಿಸಿ ಪ್ರಾಂತ್ಯಗಳಿಗೆ ಸಂಬಂಧಪಟ್ಟ ಮಿಕ್ಕ ಅಧಿಕಾರಗಳನ್ನು ಪ್ರಾಂತ್ಯಗಳಲ್ಲೇ ಇರಿಸುವುದು. ಎರಡನೇ ಮಾರ್ಗವೆಂದರೆ ರಾಜ್ಯಗಳಿಂದ ಪರಿಶೀಲನೆ, ಭಾರತೀಯ ರಾಜ್ಯಗಳ ಆಡಳಿತಕ್ಕೆ ಸಂಬಂಧಿಸಿದ ರಾಜಕೀಯ ತಜ್ಞರು, ತಾವು ಕೇಂದ್ರವು ಬಲಿಷ್ಠವಾಗಿರಬೇಕೆಂದು ಬಯಸಿದ್ದುದಾಗಿಯೂ ಕೇಂದ್ರವು ಬಲಿಷ್ಠವಾಗಿದ್ದರೆ ಸಂವಿಧಾನ ರಚನಾ ಸಭೆಗೆ ಬಂದು ಅದರ ಕಲಾಪಗಳಲ್ಲಿ ಭಾಗವಹಿಸಲು ತಾವು ಹಿಂದೆಟು ಹಾಕಬೇಕಾಗಿರಲಿಲ್ಲ ಎಂದೂ ದೂರಿದರು. ಇಲ್ಲಿರುವ ಅವರ ಸಹೋದ್ಯೋಗಿಗಳು ಹಾಗೂ ಭಾರತೀಯ ರಾಜ್ಯಗಳ ಜನಪ್ರತಿನಿಧಿಗಳು ಆ ಅಭಿಪ್ರಾಯಕ್ಕೆ ಸಮ್ಮತಿಸಿದರೆ ಈ ಸಮಿತಿಯ ವರದಿಯನ್ನು ಮಾರ್ಪಡಿಸುವ ಪರ್ಯಾಯ ಮಾರ್ಗದ ಬಗ್ಗೆ ಪರಿಶೀಲಿಸುವುದು ಹಾಗೂ ಮಿಕ್ಕ ಅಧಿಕಾರಗಳನ್ನು ಕೇಂದ್ರದಲ್ಲಿಯೇ ಉಳಿಸಿಕೊಳ್ಳಲು ಒಪ್ಪುವುದು ಅವರಿಗೆ ಸೇರಿದ ವಿಷಯ. ಅದು ಈ ಸದನವು ಗಂಭೀರವಾಗಿ ಪರಿಗಣಿಸಬೇಕಾದ ವಿಷಯಗಳಲ್ಲೊಂದಾಗಿದೆ. ಮಿಕ್ಕ ಅಧಿಕಾರಗಳಿಗೆ ಸಂಬಂಧಿಸಿದಂತೆ ಸಮಿತಿಯ ವರದಿಯಲ್ಲಿ ರಾಜ್ಯಗಳ ಸಂದರ್ಭದಲ್ಲಿ ರಾಜ್ಯಗಳಿಗೂ, ಪ್ರಾಂತ್ಯಗಳ ಸಂಬಂಧದಲ್ಲಿ ಕೇಂದ್ರಕ್ಕೂ ಅವುಗಳನ್ನು ವಹಿಸಲಾಗಿದೆ. ಮಾನ್ಯರೆ, ಸದನದ ಸಮಯವನ್ನು ನಾನು ಇನ್ನಷ್ಟು ಬಳಸಿಕೊಳ್ಳಲು ಬಯಸುವುದಿಲ್ಲ. ನಾನು ಹೊರಡುತ್ತೇನೆ.

**ಮೌಲಾನಾ ಹಜರತ್ ಮೋಹಾನಿ** : *[ಮಾನ್ಯ ಸಭಾಧ್ಯಕ್ಷರೆ, ಇದಕ್ಕೆ ಮುಂಚೆ ಸರ್ದಾರ್ ಪಟೇಲ್ ತಪ್ಪು ಮಾಡಿದ್ದರು. ಈಗ ನನ್ನ ಮಿತ್ರ ಶ್ರೀ ಎನ್. ಗೋಪಾಲಸ್ವಾಮಿ ಇನ್ನೂ ದೊಡ್ಡ ತಪ್ಪು ಮಾಡುತ್ತಿದ್ದಾರೆ. ಅವರು ಪ್ರತಿಭಾವಂತ ನ್ಯಾಯವೇತ್ತರು. ಈಗ ನೀವು ಅನುಸರಿಸುವ ಮಾರ್ಗ ಯಾವುದು? ನಾನು ಆಗಲೇ

ಸರ್ದಾರ್ ಪಟೇಲ್‌ರನ್ನು ಕೇಂದ್ರವನ್ನು ಕುರಿತು ಏನನ್ನೂ ನಿರ್ಧರಿಸದಿರುವ ಬಗ್ಗೆ ಕೇಳಿದ್ದೆ. ಕೇಂದ್ರಕ್ಕೆ ಯಾವ ಪ್ರಕಾರದ ಸಂವಿಧಾನ ಬೇಕು ಎಂಬ ಬಗ್ಗೆ ನಿರ್ಧಾರವಾಗಿರಲಿಲ್ಲ. ಒಕ್ಕೂಟವೇ ಅಥವಾ ಗಣತಂತ್ರವೇ? ಗಣತಂತ್ರವಾದರೆ ಅದು ಸಮಾಜವಾದಿಯೋ ಅಥವಾ ರಾಷ್ಟ್ರೀಯವಾದಿಯೋ? ಅದರ ಆಕಾರ ಯಾವ ರೀತಿಯದ್ದಾಗಿರುತ್ತದೆಂದು ನೀವು ನಿರ್ಧರಿಸಿಲ್ಲ. ನೀವು ಸರಳವಾಗಿ ಎಲ್ಲ ಅಧಿಕಾರಗಳು ಕೇಂದ್ರದಲ್ಲಿ ನಿಹಿತವಾಗಿರಬೇಕು, ಕೇಂದ್ರವು ಎಲ್ಲ ಅಧಿಕಾರಗಳನ್ನು ವಹಿಸಿಕೊಳ್ಳಬೇಕು ಎಂದು ಹೇಳಿದಿರಿ. ಇದಕ್ಕಿಂತ ದೊಡ್ಡ ತಪ್ಪು ಬೇರೆ ಇಲ್ಲ ಎಂದು ನಾನು ಹೇಳುತ್ತೇನೆ. ಇಲ್ಲಿರುವ ಸದಸ್ಯರೆಲ್ಲ ಮೂರ್ಖರೆಂದು ನೀವು ಪರಿಗಣಿಸಿದ್ದೀರಿ. ಪೂರ್ಣ ಪರಿಶೀಲಿಸಿದ ತರುವಾಯ ನಾನು ಈ ಆಕ್ಷೇಪವನ್ನೆತ್ತಿದ್ದೇನೆ. ಇದಕ್ಕೆ ಉತ್ತರಿಸುವಾಗ ಪಂಡಿತ್ ನೆಹರೂ ಉದ್ದೇಶಗಳ ನಿರ್ಣಯದಲ್ಲಿ ಗಣತಂತ್ರ ಎಂಬ ಪದವಿತ್ತು ಎಂದರು. ನಾನು ಸುಮ್ಮನಾದೆ. ಆದರೆ ನೀವೇನು ಕನಸು ಕಾಣುತ್ತಿದ್ದೀರಿ ಎಂದೂ ತಿಳಿಯಬೇಕಾಗಿದೆ. ನಮ್ಮ ಬ್ರಿಟಿಷ್ ಸಾಮ್ರಾಜ್ಯವಾದಿ ಮಿತ್ರರು ಈಗಾಗಲೇ ನಿಮ್ಮನ್ನು ಕಟ್ಟಿಹಾಕಿದ್ದಾರೆ. ನಿಮ್ಮನ್ನು ತಮ್ಮ ದೊರೆತನದಲ್ಲಿ ಉಳಿಸಿಕೊಳ್ಳಲು ಹೊಸ ಸಾಧನ ಕಂಡುಹಿಡಿದಿದ್ದಾರೆ ಎಂಬುದು ಪಂಡಿತ್ ನೆಹರುಗೆ ತಿಳಿಯಬೇಕು. ಅದನ್ನು ಸೃಜಿಸುವಲ್ಲಿ ಫ್ರಾನ್ಸ್, ಹಾಲೆಂಡ್, ಇಂಗ್ಲೆಂಡ್, ಅಮೇರಿಕ ಚಿಯಾಂಗ್ ಕೈ ಶೇಖ್‌ರಂಥವರು ಕೈಜೋಡಿಸಿದ್ದಾರೆ. ಅವರು ಗಣತಂತ್ರ ದೊರೆತನ ಮಾದರಿಯನ್ನು (ರಿಪಬ್ಲಿಕನ್ ಡೊಮಿನಿಯನ್) ಕಂಡುಹಿಡಿದಿದ್ದಾರೆ. ಹಾಲೆಂಡ್ ಇಂಡೋನೇಷ್ಯಾ ಮೇಲೆ ಫ್ರಾನ್ಸ್ ಇಂಡೊಚೈನಾ ಹಾಗೂ ವಿಯೆಟ್ನಾಂ ಮೇಲೆ ರಿಪಬ್ಲಿಕನ್ ಡೊಮಿನಿಯನ್ ಹೆಸರಿನಲ್ಲಿ ದಬ್ಬಾಳಿಕೆ ಮಾಡುತ್ತಿದ್ದಾರೆ. ನಿಮ್ಮನ್ನು ಮೂರ್ಖರನ್ನಾಗಿ ಮಾಡಿ ರಿಪಬ್ಲಿಕನ್ ಇಂಡಿಯನ್ ಡೊಮಿನಿಯನ್ ಎಂಬುದನ್ನು ನಿಮ್ಮ ಮೇಲೆ ಹೇರಿದ್ದಾರೆ. ಅದರಿಂದ ನೀವು ಪಾರಾಗಲಾರಿರಿ ಎಂಬುದು ಖಚಿತ. ನೀವು ಶಾಶ್ವತವಾಗಿ ದೊರೆತನಕ್ಕೊಳಪಟ್ಟವರಾಗಿ (ಡೊಮಿನಿಯನ್) ಇರಬೇಕಾಗುತ್ತದೆ. ಪದಪ್ರಯೋಗದ ಕಲೆ ಹಾಗೂ ದ್ವಿವಿಧದ ವ್ಯವಹಾರದಲ್ಲಿ ಅವರು ಪ್ರಭುತ್ವ ಹೊಂದಿರುವವರು. ಅವರು ಹೇಳುವುದು ಒಂದಾದರೆ ಅದರ ಅರ್ಥ ಇನ್ನೊಂದೇ ಆಗಿರುತ್ತದೆ. ನಮ್ಮ ಗವರ್ನರ್ ಜನರಲ್ ಮೌಂಟ್ ಬ್ಯಾಟನ್, ಭಾರತ ಒಕ್ಕೂಟವನ್ನು ಸೇರುವಂತೆ ನಾವು ಎಲ್ಲ ಭಾರತೀಯ ರಾಜ್ಯಗಳನ್ನು ಒತ್ತಾಯಿಸಿದ್ದೇವೆ ಎಂದು ಹೇಳಿದ್ದಾರೆ. ನಾವು ಎಲ್ಲ ಭಾರತೀಯ ರಾಜ್ಯಗಳನ್ನು ನಮ್ಮ ಹಿಡಿತದಡಿ ತಂದಿದ್ದೇವೆ ಎಂಬುದು ಉತ್ತಮವೇ. ಆದರೆ ನಾನು ಹೇಳುವುದೇನೆಂದರೆ ಅವು ನಿಮ್ಮ ಹಿಡಿತಕ್ಕೆ ಬಂದಿಲ್ಲ. ನೀವು ಅವರ ಹಿಡಿತದಲ್ಲಿದ್ದೀರಿ. ನಿಮ್ಮ ಸಹಜಪ್ರಶ್ನೆ ಅದು ಎಂಬುದು ಹೇಗೆ? ಅದು ಹೀಗೆ ನೀವು ಒಕ್ಕೂಟದ ಸಂವಿಧಾನವನ್ನು ರಚಿಸುತ್ತೀರಿ. ಆಗ ಏನಾಗುತ್ತದೆ? ನಿಮ್ಮ ಉತ್ತರ ಅದು ಕೇವಲ ಭಾರತದೇಶ. ನಿಮಗೆ ಅದು ಹಾಗೂ ಅದರೊಂದಿಗೆ ಸಂವಿಧಾನವನ್ನು ಬದಲಿಸುವ ಹಕ್ಕು ದೊರಕಿದೆ. ಸಂವಿಧಾನವನ್ನು ಹೇಗೆ ಬದಲಿಸಬೇಕೆಂದು ನೀವೀಗ ಯೋಚಿಸಬೇಕು. ಮುಕ್ಕಾಲುಭಾಗ ಸಂಖ್ಯೆಯಷ್ಟು ಸದಸ್ಯರು ಒಪ್ಪದೇ ಯಾವುದನ್ನೂ ಅಂಗೀಕರಿಸಲು ಆಗುವುದಿಲ್ಲ. ಯಾವಾಗಲೂ ಡೊಮಿನಿಯನ್‌ನಲ್ಲಿರುವ ರಾಜ್ಯಗಳ ಸಂಖ್ಯೆಯ ಒಕ್ಕೂಟದಲ್ಲಿ ೩ನೇ ೧ ಭಾಗದಷ್ಟಿದೆ. ಒಕ್ಕೂಟಕ್ಕೆ ಒಪ್ಪಿಗೆ ನೀಡಿದ ರಾಜ್ಯಗಳ ಪ್ರತಿನಿಧಿಗಳು ಭಾರತ ದೇಶವನ್ನು ಸಮಾಜವಾದಿ ಗಣತಂತ್ರವನ್ನಾಗಿ ಬದಲಿಸಲು ಒಪ್ಪುವರೇ? ಹಾಗಾದರೆ ನಿಮ್ಮನ್ನು ನೀವೇ ವಂಚಿಸಿಕೊಳ್ಳುತ್ತಿದ್ದೀರಿ. ಈ ತುಚ್ಛ ಡೊಮಿನಿಯನ್ ಸ್ಥಾನಮಾನದಿಂದ ನೀವು ಹೊರಬರಬಹುದೆಂದು ಯೋಚಿಸಿದರೆ ಅದು ಆತ್ಮವಂಚನೆ. ನಿಮ್ಮ ಪೈಕಿ ೩ನೇ ೧ರಷ್ಟು ಸದಸ್ಯರು ರಾಜ್ಯಗಳಿಗೆ ಸೇರಿದವರು. ಸಂವಿಧಾನ ಬದಲಿಸಲು ಸಂವಿಧಾನ ರಚನಾಸಭೆಯ ಮುಕ್ಕಾಲುಪಾಲು ಸದಸ್ಯರ ಬಹುಮತ ಬೇಕು. ಹಾಗಿರುವಾಗ ಸಂವಿಧಾನ ಬದಲಾವಣೆ ಅಸಾಧ್ಯ ಎಂದೂ ನಿಮಗೆ ತೋರುವುದಿಲ್ಲವೇ? ನಿಮ್ಮನ್ನು ನೀವು ಬ್ರಿಟಿಷ್ ಸಾಮ್ರಾಜ್ಯದ ಆಧಿಪತ್ಯಕ್ಕೆ (ಡೊಮಿನಿಯನ್) ಗುರಿ ಮಾಡಿಕೊಂಡಿದ್ದೀರಿ. ಅದಕ್ಕೆ ನಾನು ಹೇಳುತ್ತಿದ್ದೇನೆ ನಿಮ್ಮನ್ನು ಮೂರ್ಖರನ್ನಾಗಿಸಲಾಗಿದೆ. ಕಾಂಗ್ರೆಸ್ ಹೈ ಕಮಾಂಡ್‌ನ ನನ್ನ ಸ್ನೇಹಿತರು ಸಹೋದ್ಯೋಗಿಗಳು ಇದನ್ನು ಒಪ್ಪಿದ್ದು ಹೇಗೆ? ಅಲ್ಲದೇ ಪಂಡಿತ್ ನೆಹರೂ, ಗೊತ್ತುವಳಿ ಎಂಬ ಉದ್ದೇಶ

ಅಂಗೀಕೃತವಾಗಿದೆ ಎಂದು ಹೇಳಿದ್ದಾರೆ ಈಗ ಯಾರಿಗೂ ಏನನ್ನೂ ಹೇಳುವ ಹಕ್ಕು ಇಲ್ಲ. ಅವರು ಗಣತಂತ್ರ ಎನ್ನುವುದು ನಿಜವಾದ ಗಣತಂತ್ರವಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಇದನ್ನೇ ಬೇರೆ ಹೆಸರುಗಳಿಂದ ಗುರುತಿಸುತ್ತಾರೆ ಅಷ್ಟೇ. ಬ್ರಿಟಿಷರು ಇಂಡೊನೇಷ್ಯಾದಲ್ಲಿ ಇದನ್ನೇ ಮಾಡಿದ್ದಾರೆ. ಇದೇನೂ ರಹಸ್ಯವಾಗಿ ಉಳಿದಿಲ್ಲ. ಆದ್ದರಿಂದ ನೀವೂ ಇಂಡೊನೇಷ್ಯಾ ಮಾಡಿದ ತಪ್ಪನ್ನು ಮಾಡಬೇಡಿ.]*

**ಶ್ರೀ ಎಂ.ಎಸ್. ಆ್ಯನೆ :** (ಡೆಕ್ಕನ್ ರಾಜ್ಯಗಳು) : ಕ್ರಿಯಾಲೋಪ ಕುರಿತಂತೆ ಮಾನ್ಯರೆ, ಒಬ್ಬ ಸದಸ್ಯ ಎರಡು ಭಾಷೆಗಳಲ್ಲಿ ಭಾಷಣ ಮಾಡಬಹುದೇ?

**ಮಾನ್ಯ ಸಭಾಧ್ಯಕ್ಷರು :** ಬೇರೆ ಸದಸ್ಯರ ಅನುಕೂಲಕ್ಕಾಗಿ ಅವರು ಭಾಗಶಃ ಇಂಗ್ಲಿಷ್‌ನಲ್ಲಿ ವಿವರಣೆ ನೀಡುತ್ತಿದ್ದಾರೆ.

**ಮೌಲಾನಾ ಹಜರತ್ ಮೋಹಾನಿ :** *[ಮಾನ್ಯರೆ, ಧನ್ಯವಾದಗಳು. ಈಗ ನಾನು ಗುರುತು ಮಾಡಿ ತೋರಿಸುವ ಅಗತ್ಯವಿರುವ ಅಂಶವೇನೆಂದರೆ ಈಗ ನೀವು ಪಡೆದಿರುವ ಸ್ವಾತಂತ್ರ್ಯಕ್ಕೆ ಈಗಾಗಲೇ ಡೊಮಿನಿಯನ್ (ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸ್ವಾತಂತ್ರ್ಯ ಪಡೆದ ಒಳರಾಷ್ಟ್ರ) ಸ್ಥಾನಮಾನ ದೊರಕಿದ್ದು ಈಗ ಬಹಿರಂಗದಲ್ಲಿ ಸ್ವತಂತ್ರ ಸ್ಥಾನಮಾನ ಎಂದು ಹೇಳಲಾಗುತ್ತಿದೆ. ಅವರು ಯಾವತ್ತೂ ಸಂಪೂರ್ಣ ಸ್ವಾತಂತ್ರ್ಯ ಎಂದು ಅರ್ಥೈಸಿಲ್ಲ. ನಾವು ಮೋಸ ಹೋಗುತ್ತಿದ್ದೇವೆಂದು ಗೊತ್ತಿದ್ದರೂ ಸ್ವಾತಂತ್ರ್ಯದ ಸಡಗರವನ್ನಾಚರಿಸುತ್ತಾ ನಮ್ಮ ಮನೆಗಳನ್ನು ದೀಪಗಳಿಂದ ಝಗಝಗಿಸುತ್ತಿರುವ ನಮಗಿಂತ ದೊಡ್ಡ ಮೂರ್ಖರು ಯಾರಿದ್ದಾರೆ? ನನಗೆ ಇದೊಂದೂ ಅರ್ಥವಾಗುತ್ತಿಲ್ಲ. ಬಹುಜನಾಭಿಪ್ರಾಯವನ್ನು ವಿರೋಧಿಸಲು ನನಗೆ ಅವಕಾಶ ಸಿಗದಿದ್ದುದರಿಂದ ಆಗ ನಾನು ಸುಮ್ಮನುಳಿದೆ, ಆದರೆ ಈಗ ನಮಗೆ ನಿಜವಾದ ಸ್ವಾತಂತ್ರ್ಯ ಬಂದಿಲ್ಲ ಎಂದು ಹೇಳುತ್ತಿದ್ದೇನೆ. ಇಲ್ಲಿರುವ ನನ್ನ ಸ್ನೇಹಿತರಲ್ಲಿ ಹಲವರು ಉತ್ತಮ ನ್ಯಾಯವಾದಿಗಳು, ಬುದ್ಧಿಜೀವಿಗಳು ಇದ್ದಾರೆ. ಆದರೆ ಅವರ ದೃಷ್ಟಿಗೆ ಮಂಜು ಕವಿದಿದ್ದು ಅವರೆಲ್ಲ ಕನಸು ಕಾಣುತ್ತಿರುವಂತೆ ತೋರುತ್ತದೆ. ಕಾಂಗ್ರೆಸ್ ಹೈಕಾಂಡ್‌ನ ಸದಸ್ಯರು ನನ್ನ ಸ್ನೇಹಿತರು ಹಾಗೂ ಸಹೋದ್ಯೋಗಿಗಳಾಗಿದ್ದಾರೆ ಎಂದೂ ಹೇಳುತ್ತಿದ್ದೆ. ನಾನು ಮುಸ್ಲಿಂ ಲೀಗ್ ಮೂಲಕ ಈ ಸಂವಿಧಾನ ರಚನಾಸಭೆಗೆ ಬಂದಿದ್ದು ನನ್ನ ಹಳೆಯ ಸ್ನೇಹಿತರಿಗೆ ಸಹಕಾರ ನೀಡುವುದೇ ನನ್ನ ಉದ್ದೇಶವಾಗಿತ್ತು. ಆದರೆ ಈಗ ಅವರಿಗೆ ನನ್ನ ಸಹಕಾರ ಬೇಕಿಲ್ಲವೆಂದು ಅವರು ಅದನ್ನು ತಿರಸ್ಕರಿಸುತ್ತಿರುವಂತೆನಿಸುತ್ತಿದೆ. ಆದ್ದರಿಂದ ಅವರನ್ನು ವಿರೋಧಿಸದೇ ಗತ್ಯಂತರವೇ ಇಲ್ಲ. ಅವರನ್ನು ನಾನು ವಿರೋಧಿಸಲು ಕಾರಣವೇನೆಂದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಅವರನ್ನು ಮೂರ್ಖರನ್ನಾಗಿಸಿದ್ದಾರೆ.

ನೀವು ಮೋಸ ಹೋಗಿರುವುದಕ್ಕೆ ಇನ್ನೊಂದು ಪುರಾವೆ ಏನೆಂದರೆ ಭಾರತ ಸ್ವಾತಂತ್ರ್ಯದ ಕಡು ವಿರೋಧಿಯಾದ ಚರ್ಚಿಲ್ ತಮ್ಮ ಸ್ವಭಾವಕ್ಕೆ ವಿರುದ್ಧವಾಗಿ ಈ ಪ್ರಸ್ತಾವವನ್ನು ಅಂಗೀಕರಿಸಿದ್ದಕ್ಕೆ ಲೇಬರ್ ಸರ್ಕಾರಕ್ಕೆ ಅಭಿನಂದನೆ ತಿಳಿಸಿ ಇದು ಅಲ್ಪಕಾಲದ್ದೇ ಆದರೂ ಚಿಂತೆ ಇಲ್ಲ. ಅವರು ಸದ್ಯಕ್ಕಂತೂ ಡೊಮಿನಿಯನ್ ಆಗಿ ಉಳಿಯಲು ಒಪ್ಪಿದ್ದಾರಲ್ಲವೇ ನನಗಷ್ಟೇ ಸಾಕು ಎಂದ ಚರ್ಚಿಲ್ ಜಾಣ ಎಂಬುದು ನಿಮಗೆ ಗೊತ್ತಿದೆ. ನನಗೆ ತುಂಬ ಖೇದವಾಗುತ್ತಿದೆ. ಅತ್ಯಂತ ತೀಕ್ಷ್ಣಮತಿಗಳಾದ ನನ್ನ ಸ್ನೇಹಿತರಾದ ಶ್ರೀ ರಾಜಗೋಪಾಲಾಚಾರಿ ಡಾ. ರಾಧಾಕೃಷ್ಣನ್, ಡಾ. ಅಂಬೇಡ್ಕರ್‌ರಂಥವರು ಈ ತಂತ್ರ ಅರಿಯದೇ ಮೋಸಕ್ಕೊಳಗಾಗಿರುವುದು ಹೇಗೆ ಎಂದು ಆಶ್ಚರ್ಯವೆನಿಸುತ್ತಿದೆ.

ನೀವು ಭಾರತೀಯ ರಾಜ್ಯಗಳನ್ನು ಸೇರಿಸಿಕೊಳ್ಳುವುದಾಗಿ ಹೇಳಿದ್ದೀರಿ ಹಾಗೂ ನಿಮ್ಮ ಸದಸ್ಯರ ೩ನೇ ೧ ಭಾಗದಷ್ಟು ಸದಸ್ಯರನ್ನು ಈ ರಾಜ್ಯಗಳಿಂದ ತೆಗೆದುಕೊಂಡಿದ್ದೀರಿ. ಸಂವಿಧಾನ ಬದಲಾವಣೆಗೆ ಅವಕಾಶ ಕಲ್ಪಿಸುವವರಿದ್ದೀರಿ. ಡೊಮಿನಿಯನ್ ನಿಂದ ಸೋಷಿಯಲಿಸ್ಟ್ ರಿಪಬ್ಲಿಕ್ ಆಗಿ ಬದಲಿಸಲು ಮುಕ್ಕಾಲು ಭಾಗ ಸದಸ್ಯರ ಬಹುಮತ ಬೇಕು. ಆದರೆ ಇದು ಅಸಾಧ್ಯ. ರಾಜ್ಯಗಳ ಪ್ರತಿನಿಧಿಗಳು ನಿಮ್ಮ ಸಂಸತ್ತಿನ ಸಭೆಯ

ಭಾಗವಾಗಿರುವ ವರೆಗೂ ಡೊಮಿನಿಯನ್ ಹಾಗೂ ಕಾಮನ್‌ವೆಲ್ತ್ ಕೂಪದಿಂದ ನೀವು ಹೊರಬರಲಾರಿರಿ. ನಿಮಗೆ ಏನಾಗಿದೆ? ಪಾಕಿಸ್ತಾನ ಪ್ರತ್ಯೇಕಗೊಳ್ಳುವವರೆಗೂ ಕೇಂದ್ರ ಬಲಶಾಲಿಯಾಗಿರಬೇಕೆಂಬ ನಿಮ್ಮ ಬೇಡಿಕೆಯಲ್ಲಿ ಅರ್ಥವಿತ್ತು. ಏಕೆಂದರೆ ಮುಸ್ಲಿಂ ಬಹುಮತವುಳ್ಳ ಪ್ರಾಂತ್ಯಗಳಿಂದ ತೊಂದರೆಯಾಗಬಹುದೆಂಬ ಸಂಶಯ ನಿಮಗೆ ಇತ್ತು. ಆದರೆ ಈಗ ಪಾಕಿಸ್ತಾನ ಬೇರ್ಪಟ್ಟಿರುವಾಗ ಆ ತೊಂದರೆಯೂ ಇಲ್ಲ.

**ಮೊಹಮ್ಮದ್ ಷರೀಫ್** (ಮೈಸೂರು ರಾಜ್ಯ) : ಶ್ರೀಯುತರಿಗೆ ವಿಷಯಕ್ಕೆ ಬರಲು ತಿಳಿಸುತ್ತೀರಾ?

**ಮೌಲಾನಾ ಹಜರತ್ ಮೋಹಾನಿ :** *[ಜವಾಹರಲಾಲ್ ನೆಹರು ಅವರ ಮೊದಲಿನ ಕೇಂದ್ರ ಸಂರಚನಾ ಯೋಜನೆ (ಯೂನಿಯನ್ ಕಾನ್ಸ್‌ಟಿಟ್ಯೂಷನ್ ಸ್ಕೀಂ) ಕುರಿತಂತೆ ನನಗಿದ್ದ ಆಕ್ಷೇಪಣೆಗಳನ್ನು ಅವರಿಗೆ ತಿಳಿಸಬೇಕಿತ್ತು. ಈಗಿನ ಯೋಜನೆಯೂ ಹಾಗೇ ಇರುವುದರಿಂದ ಅದೇ ಆಕ್ಷೇಪಣೆ ಇದಕ್ಕೂ ಅನ್ವಯವಾಗುತ್ತದೆ. ಎಲ್ಲ ಅಧಿಕಾರಗಳನ್ನು ಮೊದಲು ಕೇಂದ್ರಕ್ಕೆ ಕೊಟ್ಟು ಅದು ತನ್ನ ಆಯ್ಕೆಯ ಮೇರೆಗಿನ ಅಧಿಕಾರಗಳನ್ನು ಘಟಕಗಳಿಗೆ ನೀಡುವುದಕ್ಕಿಂತ ರಕ್ಷಣೆ, ವಿದೇಶಾಂಗ ವ್ಯವಹಾರಗಳು, ಸಂಪರ್ಕ ವಿಷಯಗಳನ್ನು ಕೇಂದ್ರಕ್ಕೆ ನೀಡಿ ಉಳಿದೆಲ್ಲ ಅಧಿಕಾರಗಳನ್ನು ಘಟಕಗಳಿಗೆ ನೀಡುವುದು ಸಹಜ ಹಾಗೂ ಉತ್ತಮ ಮಾರ್ಗ ಎಂದು ನನ್ನ ಅಭಿಪ್ರಾಯ. ನನಗೆ ಯಾವುದೇ ಸಾಮ್ರಾಜ್ಯ ರಾಜ್ಯ ಡೊಮಿನಿಯನ್ ಅಥವಾ ಕಾಮನ್‌ವೆಲ್ತ್‌ನಲ್ಲಿ ನಂಬಿಕೆ ಇಲ್ಲ. ಈ ಬಗ್ಗೆ ನಾವು ಈಗಾಗಲೇ ಸಾಕಷ್ಟು ಅನುಭವಿಸಿದ್ದಾಗಿದೆ. ಈಗ ನಮಗೆ ಯಾವ ಚಕ್ರವರ್ತಿಯೂ ಇಲ್ಲ ಸರ್ವಾಧಿಕಾರಿಯೂ ಇಲ್ಲ. ಯಾವ ಕಾಮನ್‌ವೆಲ್ತ್ ಡೊಮಿನಿಯನ್ ಇಲ್ಲ. ನಮಗೆ ಕೇಂದ್ರವು ಸೋಷಿಯಲಿಸ್ಟ್ ರಿಪಬ್ಲಿಕ್ ಆಗಿರಬೇಕೇ ಹೊರತು ಬೇರೇನೂ ಬೇಡ.

ಇದು ನನ್ನ ಸಾಮಾನ್ಯ ಆಕ್ಷೇಪಣೆ. ನೀವು ರಾಜ್ಯಗಳನ್ನು ಸೇರಿಸಿರುವುದರಿಂದ ನನ್ನ ಆಕ್ಷೇಪ ಹತ್ತು ಪಟ್ಟು ಬಲವಾಗುತ್ತದೆ. ನಮ್ಮ ಪ್ರಾಂತ್ಯಗಳಿಗೆ ಯಾವ ಅಧಿಕಾರಗಳನ್ನು ಕೊಟ್ಟಿದ್ದೀರಿ? ಅವರು ಸ್ವಾತಂತ್ರ್ಯ ಪೂರ್ವದಲ್ಲೇ ಹೊಂದಿದ್ದ ಹಕ್ಕು ಹಾಗೂ ಅಧಿಕಾರಗಳನ್ನು ನೀವು ಮೊಟಕುಗೊಳಿಸಿದ್ದೀರಿ. ಅವರ ಹಕ್ಕು ಅಧಿಕಾರಗಳನ್ನು ಕಿಂಚಿತ್ತೂ ಹೆಚ್ಚಿಸಿಲ್ಲ. ಅದರ ಬದಲು ಕಡಿತಗೊಳಿಸಿದ್ದೀರಿ. ನಿಮಗೆ ಬಹುಮತ ಸಿಕ್ಕಿರುವುದರಿಂದ ಅದು ನಿಮ್ಮ ಇಚ್ಛೆಯನ್ನವಲಂಬಿಸಿರುತ್ತದೆ. ಇಲ್ಲಿರುವ ಎಲ್ಲ ಸದಸ್ಯರೂ ಕಾಂಗ್ರೆಸ್‌ನ ನಿರ್ಧಾರಗಳಿಗೆ ಬದ್ಧರಾಗಿರುವುದು ಸಹಜ. ಕಾಂಗ್ರೆಸ್ ಪಕ್ಷ ಅಥವಾ ಮುಸ್ಲಿಂ ಲೀಗ್ ಪಕ್ಷ ಎಂಬ ಪ್ರಶ್ನೆಯೇ ಇರಬಾರದು. ಏಕೆಂದರೆ ನೀವು ಕೋಮು ನ್ಯಾಯ ಅಗತ್ಯತೆಗಳನ್ನು ಕೈಬಿಟ್ಟಿರುವುದರಿಂದ ಪ್ರತಿಯೊಬ್ಬ ಸದಸ್ಯರನ್ನು ತಾನು ಒಂದು ನಿರ್ದಿಷ್ಟ ರಾಜಕೀಯ ಪಕ್ಷದ ಸದಸ್ಯನಾಗಿ ಬಾಳಬೇಕೇ ಹೊರತು ಹಿಂದೂ ಅಥವಾ ಮುಸ್ಲಿಂ ಆಗಿ ಅಲ್ಲ ಎಂದು ಹೇಳುವಂತಿರಬೇಕು.

ಕೇಂದ್ರವೇ ಬಲಶಾಲಿಯಾಗಿದ್ದು ಎಲ್ಲ ಅಧಿಕಾರಗಳೂ ಕೇಂದ್ರದಲ್ಲೇ ನಿಹಿತವಾಗಿರಬೇಕಾದ ಅಗತ್ಯವೇನು? ಇದಕ್ಕೆ ಕಾರಣವೇನು? ನಿಮ್ಮ ಉದ್ದೇಶವೇನು?

ನೀವು ಪ್ರಾಂತ್ಯಗಳಿಗೆ ಯಾವ ಅಧಿಕಾರಗಳನ್ನೂ ಕೊಟ್ಟಿಲ್ಲದಿರುವುದರಿಂದ ನಾನು ಈ ಮಾತು ಹೇಳಬೇಕಾಯಿತು ಮತ್ತು ಈ ಸಂದೇಹವನ್ನು ತಿಳಿಸಬೇಕಾಯಿತು. ಏಕೆಂದರೆ ನೀವು ನಮ್ಮನ್ನು ಮೂರ್ಖರೆಂಬಂತೆ ನಡೆಸಿಕೊಳ್ಳುತ್ತೀರಿ.

ನಿಮಗೆ ಶಕ್ತಿಶಾಲಿ ಕೇಂದ್ರ ಬೇಕಾಗಿದೆ ಎಂದು ಹೇಳಿ ತಮ್ಮನ್ನು ತಾವು ಮೋಸ ಮಾಡಿಕೊಳ್ಳಬಾರದೆಂದು ನಾನು ನನ್ನ ಸ್ನೇಹಿತ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್‌ರನ್ನು ಕೇಳಿಕೊಳ್ಳುತ್ತೇನೆ. ಅದನ್ನು ನಾನು ಕೇಂದ್ರವೆಂದು ಮನ್ನಣೆ ನೀಡುವುದಿಲ್ಲ. ನಾನು ಮನ್ನಣೆ ನೀಡುವ ಕೇಂದ್ರವೆಂದರೆ ಸೋಷಿಯಲಿಸ್ಟ್ ರಿಪಬ್ಲಿಕ್ ಯೂನಿಯನ್]*

**ತಾಜಮಲ್ ಹುಸೇನ್ :** ಮೌಲಾನಾ ಅವರಿಗೆ ಕೇಂದ್ರ ದುರ್ಬಲವಾಗಿರಬೇಕೇ ಬಲಶಾಲಿಯಾಗಿರಬೇಕೆ?

**ಮಾನ್ಯ ಸಭಾಧ್ಯಕ್ಷರು :** *[ಮೌಲಾನಾ ಸಾಹೇಬರೇ ನೀವು ಮಂಡಿಸಲಾಗುತ್ತಿರುವ ಪ್ರಸ್ತಾವನೆ ಎಂದರೆ ಈ ಪ್ರಸ್ತಾವವನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೇ ಬೇಡವೇ ಎಂಬ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಲು ನಿಮಗೆ ಸ್ವಾತಂತ್ರ್ಯವಿದೆ.]

**ಮೌಲಾನಾ ಹಜರತ್ ಮೋಹಾನಿ :** *[ಪಾಕಿಸ್ತಾನ ಪ್ರತ್ಯೇಕಗೊಳ್ಳುವುದಕ್ಕೆ ಮುಂಚೆ ನಿಮಗೆ ಈ ಸಂದೇಹ ಉಂಟಾಗಬೇಕಿತ್ತು]*

**ಮಾನ್ಯ ಸಭಾಧ್ಯಕ್ಷರು :** ಸದ್ದು. ಮೌಲಾನಾ ನೀವು ಈಗಾಗಲೇ ಚರ್ಚೆಯ ವ್ಯಾಪ್ತಿಯ ಎಲ್ಲೆ ಮೀರಿದ್ದೀರಿ. ವರದಿಯ ಪರಿಶೀಲನೆಯನ್ನು ಮುಂದೂಡಬೇಕೆಂಬ ಗೊತ್ತುವಳಿಯನ್ನು ನೀವು ಮಂಡಿಸಿದ್ದೀರಿ. ಈಗ ವರದಿಯ ಗುಣಮಟ್ಟದ ಕುರಿತೇ ಮಾತನಾಡುತ್ತಿದ್ದೀರಿ. ಅಲ್ಲದೇ ನಿಮ್ಮ ಗೊತ್ತುವಳಿಗೆ ಪ್ರಸ್ತುತವಲ್ಲದ ಹಲವು ವಿಷಯಗಳನ್ನು ತರುತ್ತಿದ್ದೀರಿ.

**ಮೌಲಾನಾ ಹಜರತ್ ಮೋಹಾನಿ :** *[ರಕ್ಷಣೆ, ವಿದೇಶ ವ್ಯವಹಾರ ಸಂಪರ್ಕ ವಿಷಯಗಳನ್ನು ಹೊರತುಪಡಿಸಿ ಕೇಂದ್ರದ ಎಲ್ಲ ಅಧಿಕಾರಗಳನ್ನು ಮುಂಚಿನಂತೆಯೇ ಚಲಾಯಿಸಬಹುದು ಎಂದು ನಂಬಿಸಿ ನೀವು ರಾಜ್ಯಗಳನ್ನು ಸೇರಿಸಿಕೊಂಡಿದ್ದೀರಿ. ನಾನು ಇದನ್ನು ತೀವ್ರವಾಗಿ ವಿರೋಧಿಸುತ್ತೇನೆ. ಶ್ರೀಯುತರು (ಗೋಪಾಲಸ್ವಾಮಿ ಅಯ್ಯಂಗಾರ್) ತಾವೊಬ್ಬರೇ ಚತುರ ವಕೀಲರೆಂದು ಉಳಿದವರೆಲ್ಲರೂ ಮೂರ್ಖರೆಂದು ಭಾವಿಸಿದ್ದಾರೆ.

**ಮಾನ್ಯ ಸಭಾಧ್ಯಕ್ಷರು :** ಸದ್ದು. ಮೌಲಾನಾ ನೀವು ನಿಮ್ಮ ಪ್ರಸ್ತಾವದ ಮಿತಿಯೊಳಗೇ ಇದ್ದರೆ ಒಳ್ಳೆಯದಿತ್ತು.

**ಮೌಲಾನಾ ಹಜರತ್ ಮೋಹಾನಿ :** *[ಅವುಗಳಿಗೆ (ರಾಜ್ಯಗಳಿಗೆ) ಈ ಹಕ್ಕನ್ನು ನೀಡಿದರೆ ಕಡೇಪಕ್ಷ ಇಂಥವೇ ಅಥವಾ ಹೆಚ್ಚಿನ ಹಕ್ಕುಗಳನ್ನು ಪ್ರಾಂತ್ಯಗಳಿಗೆ ನೀಡಬೇಕು. ಇಲ್ಲವಾದರೆ ಇದೆಲ್ಲ ಮೋಸ. ಇಡೀ ವಿಷಯವನ್ನು ನೀವು ಸ್ಪಷ್ಟಗೊಳಿಸದಿದ್ದರೆ ಎಲ್ಲವೂ ವ್ಯರ್ಥ ಮತ್ತು ಪರಿಶೀಲನೆ ಅಗತ್ಯವೇ ಇಲ್ಲ.]*

**ಮಾನ್ಯ ಸಭಾಧ್ಯಕ್ಷರು :** ಸದನದ ಮುಂದಿರುವ ಪ್ರಸ್ತಾವದ ಪರಿಣಾಮವೇನೆಂದರೆ ಗೋಪಾಲಸ್ವಾಮಿ ಅಯ್ಯಂಗಾರ್ ಮಂಡಿಸಿದ ವರದಿಯ ಪರಿಶೀಲನೆಯನ್ನು ಪ್ರಸ್ತಾವದಲ್ಲಿ ತಿಳಿಸಿರುವ ನಿರ್ದಿಷ್ಟ ಅವಧಿಯವರೆಗೆ ಮುಂದೂಡಬೇಕೆಂಬುದು. ಆ ಬಗ್ಗೆ ಸದಸ್ಯರು ತಮ್ಮ ಅಭಿಪ್ರಾಯ ತಿಳಿಸಬಹುದು. ಈ ಹಂತದಲ್ಲಿ ವರದಿಯ ಗುಣಾವಗುಣ ವಿಮರ್ಶೆಗೆ ಸದಸ್ಯರು ತೊಡಗುವುದು ಬೇಡ. ಏಕೆಂದರೆ ವರದಿ ಪರಿಶೀಲನೆಯ ಮುಂದೂಡಿಕೆ ಮಾತ್ರ ಈಗಿರುವ ಪ್ರಶ್ನೆ.

**ಶ್ರೀ ಬಾಲಕೃಷ್ಣ ಶರ್ಮ :** ಮಾನ್ಯರೆ, ನನ್ನ ಮಾಹಿತಿಗಾಗಿ ನಾನು ಹೇಳುತ್ತಿದ್ದೇನೆ. ವರದಿಯ ಪ್ರಧಾನ ಲಕ್ಷಣಗಳನ್ನು ವಿವರಿಸದೇ ಯಾರೇ ಸದಸ್ಯ ಒಂದು ನಿರ್ದಿಷ್ಟ ಪ್ರಸ್ತಾವದ ಪರ ಅಥವಾ ವಿರೋಧವಾಗಿ ಮಾತನಾಡಲು ಸಾಧ್ಯವೇ? ಮತ್ತು ನಾವಿನ್ನೂ ಕೇಂದ್ರ ಸಂವಿಧಾನವನ್ನು ಪೂರ್ಣಗೊಳಿಸದಿರುವುದರಿಂದ ಆ ಬಗ್ಗೆ ಮುಂದುವರಿಯಬಾರದು.

**ಮಾನ್ಯ ಸಭಾಧ್ಯಕ್ಷರು :** ಸದಸ್ಯರು ಸದನದ ಮುಂದೆ ಪ್ರಸ್ತಾವವನ್ನು ಕುರಿತು ಸೀಮಿತಗೊಳಿಸಿಕೊಳ್ಳಲು ಸಾಧ್ಯ ಎಂದು ನನ್ನ ಭಾವನೆ. ತಮ್ಮ ಅಭಿಪ್ರಾಯಗಳ ಸಮರ್ಥನೆಗಾಗಿ ವರದಿಯಲ್ಲಿಯ ಯಾವುವೇ ಅಂಶಗಳ ಬಗ್ಗೆ ಪ್ರಸ್ತಾವಿಸಿದರೆ ನನ್ನ ಆಕ್ಷೇಪವಿಲ್ಲ. ಆದರೆ ಈ ಹಂತದಲ್ಲಿ ವರದಿಯ ಗುಣಮಟ್ಟ ಕುರಿತು ಚರ್ಚೆ ನನಗೆ ಇಷ್ಟವಾಗದಿರುವ ಅಂಶ.

**ದಿವಾನ್ ಚಮನ್‌ಲಾಲ್** (ಪೂರ್ವ ಪಂಜಾಬ್ : ಸಾಮಾನ್ಯ) : ಮಾನ್ಯರೇ, ಕ್ರಿಯಾಲೋಪದ ಕುರಿತು ನಮ್ಮ ಮುಂದಿರುವುದು ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರ್ ವರದಿಯನ್ನು ಪರಿಶೀಲನೆಗೆ ಎತ್ತಿಕೊಳ್ಳುವ ಕುರಿತು ಮಂಡಿಸಿದ ಪ್ರಸ್ತಾವ. ಅದಕ್ಕೆ ಮೌಲಾನಾ ತಿದ್ದುಪಡಿ ಮಂಡಿಸಿದರು. ಈಗ ನಾವು ತಿದ್ದುಪಡಿಯ ನಿಬಂಧನೆಗಳಿಗೆ ಸೀಮಿತಗೊಳಿಸೋಣವೇ? ಅಥವಾ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರ ಮೂಲ ಪ್ರಸ್ತಾವದ ಬಗ್ಗೆ ಚರ್ಚಿಸೋಣವೇ?

**ಮಾನ್ಯ ಸಭಾಧ್ಯಕ್ಷರು :** ನಾನು ಈಗ ತಿದ್ದುಪಡಿಯನ್ನು ಪರಿಶೀಲನೆಗೆ ತೆಗೆದುಕೊಳ್ಳುತ್ತೇನೆ. ಅದು ಇತ್ಯರ್ಥವಾದೊಡನೆ ಮೂಲ ನಿರ್ಣಯವನ್ನು ತೆಗೆದುಕೊಳ್ಳಬಹುದು. ನಾವು ಈಗ ಗುಣಮಟ್ಟದ ಬಗ್ಗೆ

ಚರ್ಚೆ ಕೈಗೊಂಡರೆ ಅದು ಅಸಂಬದ್ಧವಾಗುತ್ತದೆ. ಆದ್ದರಿಂದ ನಾನು ಚರ್ಚೆಯನ್ನು ಮುಂದೂಡಲು ಇರುವ ತಿದ್ದುಪಡಿಯತ್ತ ಗಮನ ಹರಿಸಲು ಇಚ್ಛಿಸುತ್ತೇನೆ.

**ಶ್ರೀ ಮಹಾವೀರ ತ್ಯಾಗಿ :** ಮಾನ್ಯರೇ ಕ್ರಿಯಾಲೋಪ ಕುರಿತು.

**ಮಾನ್ಯ ಸಭಾಧ್ಯಕ್ಷರು :** ಯಾವುದರ ಬಗ್ಗೆ ಕ್ರಿಯಾಲೋಪ?

**ಶ್ರೀ ಮಹವೀರ ತ್ಯಾಗಿ :** ಮೌಲಾನಾ ಹಜರತ್ ಮೋಹಾನಿಯವರು ಮಂಡಿಸಿದ ತಿದ್ದುಪಡಿ ಕುರಿತು.

**ಮಾನ್ಯ ಸಭಾಧ್ಯಕ್ಷರು :** ನಾನು ಆ ಬಗ್ಗೆ ಈಗಾಗಲೇ ನನ್ನ ತೀರ್ಮಾನವನ್ನು ತಿಳಿಸಿದ್ದೇನೆ. ಈಗ ಚರ್ಚಿತವಾಗಲಿರುವ ಪ್ರಶ್ನೆ ಮುಂದೂಡಿಕೆ ಪ್ರಸ್ತಾವ

**ಶ್ರೀ ಮಹಾವೀರ ತ್ಯಾಗಿ :** ಆ ಪ್ರಶ್ನೆಯ ಬಗ್ಗೆ ನಿಮ್ಮ ತೀರ್ಮಾನವೇನು? ಏಕೆಂದರೆ ಆ ತಿದ್ದುಪಡಿಯೇ ಕ್ರಮತಪ್ಪಿದೆ.

**ಮಾನ್ಯ ಸಭಾಧ್ಯಕ್ಷರು :** ಹೇಗೆ?

**ಶ್ರೀ ಮಹಾವೀರ ತ್ಯಾಗಿ :** ಸದನದ ಮುಂದಿರುವ ಮೂಲಪ್ರಶ್ನೆಯನ್ನು ಅಲ್ಲಗಳೆಯಲಾಗಿದೆ. ಆದ್ದರಿಂದ ಆ ತಿದ್ದುಪಡಿ ಕ್ರಮತಪ್ಪಿದೆ ಎಂದು ನಾನು ಹೇಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಅದು ಕ್ರಮತಪ್ಪಿದೆ ಎಂದು ನನಗೆ ತೋರುವುದಿಲ್ಲ. ಏಕೆಂದರೆ ಅದು ಮೂಲ ಪ್ರಸ್ತಾವದ ಚರ್ಚೆಯನ್ನು ಮುಂದೂಡುವುದಕ್ಕಾಗಿ ಮಂಡಿಸಿರುವ ಪ್ರಸ್ತಾವ.

**ಶ್ರೀ ಹಿಮ್ಮತ್‌ಸಿಂಗ್ ಆರ್. ಮಹೇಶ್ವರಿ** (ಸಿಕ್ಕಿಂ ಮತ್ತು ಕೂಚ್ ಬೇರಾರ್ : ಗುಂಪು) : ಮಾನ್ಯರೆ, ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಆದರೆ ಕಾರಣಗಳು ಮೌಲಾನಾ ಹಜರತ್ ಮೋಹಾನಿಯವರದಕ್ಕಿಂತ ಭಿನ್ನವಾಗಿವೆ. ನನ್ನ ಅಭಿಪ್ರಾಯವನ್ನು ತಿಳಿಸುವುದಕ್ಕೆ ಮುಂಚೆ ಮೌಲಾನಾ ಅವರ ಭಾಷಣವನ್ನು ಕೇಳಿದ ಮೇಲೆ ನನಗೆ ನೆನಪಾಗುತ್ತಿರುವ ಒಂದು ಪರ್ಶಿಯನ್ ದ್ವಿಪದಿಯನ್ನು ಸದನದ ಮುಂದೆ ಹೇಳಲು ಬಯಸುತ್ತೇನೆ.

ಮಾನ್ಯರೆ, ನಿಮ್ಮ ಅನುಮತಿ ಪಡೆದು ಅದರ ಅನುವಾದವನ್ನು ಹೇಳುತ್ತೇನೆ.

ನನ್ನ ಪ್ರಿಯಕರ ಟರ್ಕಿಷ್ ಮಾತನಾಡುತ್ತಾರೆ (ಇಲ್ಲಿ ಹಿಂದಿ-ಉರ್ದು ಮಿಶ್ರಣವಿರದೇ ಹಿಂದಿ-ಇಂಗ್ಲಿಷ್ ಮಿಶ್ರಣವಾಗಿದೆ)

ಅವನ ಭಾಷೆ ನನಗೂ ಬರುತ್ತಿದ್ದಿದ್ದರೆ ಉತ್ತಮವಾಗಿರುತ್ತಿತ್ತು. ಅವನು ನುಡಿದಂಥ ಟರ್ಕಿಷ್ ನನಗೆ ಬರುವುದಿಲ್ಲವೆಂದು ಖೇದವಾಗುತ್ತದೆ.

ವಿಷಯಕ್ಕೆ ಬರುವುದಾದರೆ ಸದನದ ಮುಂದಿರುವ ಜುಲೈ ೧೯೪೭ರ ವರದಿಯು ೨ ಕಾರಣಗಳಿಗಾಗಿ ಹಳೆಯದಾಗಿದೆ ಎಂದು ನನ್ನ ಅಭಿಪ್ರಾಯ. ಮೊದಲನೇ ಕಾರಣವೆಂದರೆ ವರದಿ ಸಿದ್ಧವಾದ ತರುವಾಯ ಭಾರತ ಸ್ವಾತಂತ್ರ್ಯ ಅಧಿನಿಯಮ ಅಂಗೀಕೃತವಾಯಿತು. ಎರಡನೇ ಕಾರಣವೆಂದರೆ ಜುಲೈ ಅಂತ್ಯದ ವೇಳೆಗೆ ಭಾರತ ಸರ್ಕಾರ ಹಾಗೂ ರಾಜ್ಯಗಳು ಕೈಗೊಂಡ ಕೆಲವು ತೀರ್ಮಾನಗಳಿಂದಾಗಿ ಬಹಳಷ್ಟು ಸಂಖ್ಯೆಯ ರಾಜ್ಯಗಳು ಪ್ರವೇಶ ಪಡೆದು, ಇನ್‌ಸ್ಟ್ರುಮೆಂಟ್ಸ್ ಆಫ್ ಆಕ್ಸೆಷನ್ ಹಾಗೂ ಸ್ಟ್ಯಾಂಡ್‌ಸ್ಟಿಲ್ ಅಗ್ರಿಮೆಂಟ್‌ಗಳಿಗೆ ಸಹಿ ಹಾಕಿದವು. ಈಗ ಸದನದ ಮುಂದಿರುವ ವರದಿಯನ್ನು ಆ ವೇಳೆಗಾಗಲೇ ಬರೆಯಲಾಗಿದ್ದುದರಿಂದ ಆ ತರುವಾಯ ಘಟಿಸಿದ ಕೆಲವು ಬದಲಾವಣೆಗಳು ಅದರಲ್ಲಿ ದಾಖಲಾಗಿಲ್ಲ. ಒಕ್ಕೂಟದ ಶಾಸನಾತ್ಮಕ ಪಟ್ಟಿಯಲ್ಲಿನ ವಿಷಯಗಳ ಬಗ್ಗೆ ಹೇಳುವುದಾದರೆ ಪ್ರಾಂತ್ಯಗಳು ಮತ್ತು ರಾಜ್ಯಗಳ ನಡುವೆ ಸ್ಪಷ್ಟ ಅಂತರ ಗೋಚರಿಸುತ್ತದೆ. ನನಗೆ ತಿಳಿದಂತೆ ಕಾನೂನು ರಚನೆ ಅಥವಾ ಕಾರ್ಯನೀತಿ ವಿನಿಯಮಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯಗಳು ೩ ವಿಷಯಗಳಿಗೆ ಮಾತ್ರ ಒಪ್ಪಿಗೆ ನೀಡಿದ್ದರೆ ಪ್ರಾಂತ್ಯಗಳು ಆಡಳಿತಕ್ಕೂ ಸಂಬಂಧಿಸಿದಂತೆ ಹಲವಾರು ವಿಷಯಗಳನ್ನು ಕೇಂದ್ರಕ್ಕೆ ಬಿಟ್ಟುಕೊಡಲು ಸಿದ್ಧವಾಗಿವೆ. ಭಾರತೀಯ ರಾಜ್ಯಗಳು ಡೊಮಿನಿಯನ್‌ಗೆ ಸಮ್ಮತಿಸಿದ ಅಥವಾ ಮುಂದೆ ಒಕ್ಕೂಟಕ್ಕೆ ಸಮ್ಮತಿಸಬಹುದಾದ ೩ ವಿಷಯಗಳ ಸಂಬಂಧದಲ್ಲಿ ಕೇಂದ್ರಕ್ಕೆ ತಗಲುವ ವೆಚ್ಚ

ಒಂದು ನಿರ್ದಿಷ್ಟ ಮೊತ್ತವಾಗಿರುತ್ತದೆ. ಇದಲ್ಲದೇ ಕೇಂದ್ರವು ಪ್ರಾಂತಗಳ ಪ್ರಯೋಜನಕ್ಕಾಗಿಯೆಂದೇ ಇತರ ವಿಷಯಗಳಿಗಾಗಿ ಹೇರಳವಾಗಿ ವೆಚ್ಚ ಮಾಡಬೇಕಾಗುತ್ತದೆ. ಆದ್ದರಿಂದ ಕೇಂದ್ರವು ವೆಚ್ಚವನ್ನು ಭರಿಸಲು ವಿಧಿಸುವ ತೆರಿಗೆಯ ಅಂಶಗಳನ್ನು ನಿರ್ಧರಿಸಲು ಈಗ ಇನ್ನೂ ಸಮಯ ಪಕ್ವವಾಗಿಲ್ಲ. ಆದರೆ ರಾಜ್ಯಗಳು ತಾವು ಪ್ರಯೋಜನ ಪಡೆಯದ ವಿಷಯಗಳಿಗಾಗಿ ವೆಚ್ಚ ಭರಿಸುವಂತೆ ಮಾಡಲಾಗದು.

**ಶ್ರೀ ಜಸಪತ್ ರಾಯ್ ಕಪೂರ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ನನಗೆ ಗೊತ್ತಿರುವಂತೆ ಶ್ರೀಯುತರು ಕೇಂದ್ರ ಅಧಿಕಾರಗಳ (ಯೂನಿಯನ್ ಪವರ್ಸ್) ಸಮಿತಿಯ (ಕಮಿಟಿಯ) ಸದಸ್ಯರು ಹಾಗಿದ್ದರೂ ತಾವೇ ಸದಸ್ಯರಾಗಿರುವ ಸಮಿತಿಯ ವರದಿಯ ಪರಿಶೀಲನೆಗೆ ಆಕ್ಷೇಪ ಎತ್ತಬಹುದೇ?

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ :** ನಾನು ಆ ಸಮಿತಿಯ ಸದಸ್ಯನಲ್ಲವಲ್ಲ.

**ಶ್ರೀ ಜಸಪತ್ ರಾಯ್ ಕಪೂರ್ :** ನಾನು ವಿಷಾದಿಸುತ್ತೇನೆ.

**ಶ್ರೀ ಹಿಮ್ಮತ್‌ಸಿಂಗ್ ಕೆ. ಮಹೇಶ್ವರಿ :** ಮಾನ್ಯರೆ, ಕೇಂದ್ರವು ಹೆಚ್ಚು ಬಲಶಾಲಿಯಾಗಿರಬೇಕೆಂಬ ಸದನದ ಇಚ್ಛೆ ನ್ಯಾಯಸಮ್ಮತವೇ; ಆದರೆ ಕೇಂದ್ರ ಬಲಶಾಲಿಯಾಗಿರಬೇಕಾದರೆ ಪ್ರಾಂತ್ಯವಾಗಲೀ ರಾಜ್ಯವಾಗಲೀ ದುರ್ಬಲವಾಗಿರಬೇಕಾದ ಅಗತ್ಯವಿಲ್ಲ. ಈ ಹಿಂದೆ ರಾಜ್ಯಗಳು ಪ್ರಾಂತ್ಯಗಳಿಗಿಂತ ಹೆಚ್ಚಿನ ಸ್ವಾಯತ್ತತೆಯನ್ನು ಅನುಭವಿಸಿವೆ. ಹೀಗಾಗಿ ನಮಗೆ ಇಷ್ಟವಿರಲಿ, ಇಲ್ಲದಿರಲಿ ಈ ಅಂತರ ಮುಂದುವರಿಯುವಂಥದೇ. ನಮ್ಮ ಮುಂದಿರುವ ಎರಡನೇ ವರದಿಯ ೩ನೇ ಕಂಡಿಕೆಯಲ್ಲಿ ತಿಳಿಸಿರುವಂತೆ ಮೇ ೧೬ರ ಹೇಳಿಕೆಯಾಚೆಗಿನ ವಿಷಯಗಳ ಒಕ್ಕೂಟ ಪಟ್ಟಿಯು ಸಾಮಾನ್ಯವಾಗಿ ರಾಜ್ಯಗಳಿಗೆ ಅನ್ವಯವಾಗುವುದು...

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ನಾನು ಕ್ರಿಯಾಲೋಪವನ್ನೆತ್ತಬಹುದೇ? ಏಕೆಂದರೆ ನೀವು ನಿರ್ಧರಿಸಿರುವ ಮೇರೆಗೆ ಪ್ರಸ್ತುತ ಚರ್ಚೆ ಮುಂದೂಡಿಕೆ ನಿಲುವಳಿಗೆ ಸೂಚನೆಗೆ ಮಾತ್ರ ಸೀಮಿತವಾಗಿರಬೇಕು.

**ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ :** ಒಂದು ಸಣ್ಣ ಅಂಶಕ್ಕೆ ಸಂಬಂಧಿಸಿದಂತೆ ನಾನು ಸದನದ ಗಮನವನ್ನು ಸೆಳೆಯುತ್ತಿದ್ದೇನೆ ಅಷ್ಟೇ. ಮೇ ೧೬ರ ಹೇಳಿಕೆಯಾಚೆಗಿನ ವಿಷಯಗಳ ಒಕ್ಕೂಟ ಪಟ್ಟಿಯು ರಾಜ್ಯಗಳಿಗೆ ಅವುಗಳ ಒಪ್ಪಿಗೆ ಇದ್ದರೆ ಮಾತ್ರ ಅನ್ವಯವಾಗುತ್ತದೆ. ಉಳಿದ ಅಧಿಕಾರ ಕುರಿತಂತೆ ಅವು ಕೇಂದ್ರದಲ್ಲಿ ಇರಬೇಕೆಂದು ರಾಜ್ಯಗಳು ಒಪ್ಪದಿದ್ದರೆ ರಾಜ್ಯಗಳಲ್ಲೇ ಇರುತ್ತವೆ ಎಂದು ಅರ್ಥ. ನಮ್ಮ ಮುಂದಿರುವ ಒಕ್ಕೂಟದ ಶಾಸನಾತ್ಮಕ ಪಟ್ಟಿಯಲ್ಲಿ ಅನುಬಂಧದಲ್ಲಿ ತೋರಿಸಿರುವ ಒಂದನೇ ಪಟ್ಟಿಯಲ್ಲಿ ಹಲವಾರು ವಿಷಯಗಳಿದ್ದು ಪ್ರಮುಖ ೩ ವಿಷಯಗಳ ಪೈಕಿ ರಾಜ್ಯಗಳು ಸಮ್ಮತಿಸಲು ಬಯಸುವ ಕೆಲವು ವಿಷಯಗಳು ಇಲ್ಲ. ಇದಕ್ಕೆ ತರ್ಕಬದ್ಧ ಮಾರ್ಗವೆಂದರೆ ಒಕ್ಕೂಟದ ಶಾಸನಾತ್ಮಕ ಪಟ್ಟಿಯನ್ನು ೨ ಪಟ್ಟಿಗಳಾಗಿ ವಿಂಗಡಿಸಬೇಕು.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನಾವು (ವರದಿಯ) ಗುಣಮಟ್ಟ ವಿಮರ್ಶೆಗೆ ತೊಡಗಿದ್ದೇವೆಯೇ?

**ಶ್ರೀ ಹಿಮ್ಮತ್‌ಸಿಂಗ್ ಕೆ. ಮಹೇಶ್ವರಿ :** ವರದಿಯು ಪರಿಶೀಲನೆಯ ಮುಂದೂಡುವಿಕೆಯನ್ನು ಬೆಂಬಲಿಸುವ ಅಂಶಗಳನ್ನು ಮಾತ್ರ ಹೇಳುತ್ತಿದ್ದೇನೆ.

**ಶ್ರೀ ಎ.ಪಿ. ಪಟ್ಟಾಣಿ** (ಪಶ್ಚಿಮ ಭಾರತದ ರಾಜ್ಯಗಳು) : ಮಾನ್ಯರೆ, ಈ ಅಧಿಕಾರಗಳ ಬಗ್ಗೆ ನಿರ್ಧಾರವಾಗದೇ ಸಂವಿಧಾನವನ್ನು ಸಿದ್ಧಪಡಿಸಲು ಆಗುವುದಿಲ್ಲ. ನಿಲುವಳಿಯಲ್ಲಿ ಸಂವಿಧಾನವನ್ನು ಮಾಡಿದ ಮೇಲೆ ಈ ಅಧಿಕಾರಗಳ ಬಗ್ಗೆ ಪರಿಶೀಲಿಸಬಹುದು ಎಂದು ಹೇಳಲಾಗಿದೆ. ಆದರೆ ಈ ಅಧಿಕಾರಗಳನ್ನು ಕುರಿತು ನಿರ್ಧಾರವಾಗದೇ ಸಂವಿಧಾನವನ್ನು ಸಿದ್ಧಪಡಿಸಲಾಗದು ಎಂಬುದು ನನ್ನ ಮನವಿ.

**ಶ್ರೀ ಹಿಮ್ಮತ್‌ಸಿಂಗ್ ಕೆ ಮಹೇಶ್ವರಿ :** ಒಕ್ಕೂಟದ ಶಾಸನಾತ್ಮಕ ಪಟ್ಟಿಯು ತುಂಬ ಪರಿಷ್ಕಾರಗೊಳ್ಳುವ ಹಾಗೂ ಎರಡು ಭಾಗಗಳಾಗಿ ವರ್ಗೀಕೃತವಾಗುವ ಸಾಧ್ಯತೆ ಇದೆ. ಈ ಪಟ್ಟಿಯ ಒಂದು ಭಾಗ ಕೇಂದ್ರಕ್ಕೆ

ಇನ್ನೊಂದು ಭಾಗ ಪ್ರಾಂತ್ಯಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಸದನವು ಈ ವರದಿಯ ಪರಿಶೀಲನೆಯನ್ನು ಮುಂದೂಡುವುದು ಸೂಕ್ತ.

ಕಳೆದ ನಾಲ್ಕು ವಾರಗಳಲ್ಲಿ ಘಟಿಸಿದ ಪ್ರಮುಖ ಬದಲಾವಣೆಗಳನ್ನಾಧರಿಸಿ ವರದಿಯನ್ನು ಹೊಸದಾಗಿ ಪರಿಶೀಲಿಸಬೇಕಾಗಿರುವುದರಿಂದ ಅಧ್ಯಕ್ಷರಾದ ನೀವು ಹೊಸ ವಿಸ್ತೃತ ಸಮಿತಿಯನ್ನು ರಚಿಸಿ ವರದಿಯನ್ನು ಮರುಪರೀಕ್ಷಿಸಲು ರಾಜ್ಯಗಳು, ಪ್ರತಿನಿಧಿಗಳ ಪ್ರಮಾಣವನ್ನು ಹೆಚ್ಚಿಸಿ, ಹೆಚ್ಚಿನ ವರದಿ ಸಾಧ್ಯವಾದಷ್ಟು ಬೇಗ ಸಲ್ಲಿಕೆಯಾಗುವಂತೆ ನೋಡಿಕೊಳ್ಳಬೇಕೆಂದು ಸೂಚಿಸುತ್ತೇನೆ.

ಈ ವರದಿಯನ್ನು ಪರಿಶೀಲಿಸುವಲ್ಲಿ ನಮ್ಮ ಮುಂದೆ ಇನ್ನೊಂದು ತೊಂದರೆಯಿದೆ. ಮೂಲ ವರದಿ ೧೯೪೭ರ ಏಪ್ರಿಲ್‌ನಲ್ಲಿ ಸಿದ್ಧವಾಗಿದ್ದು ೨ನೇ ವರದಿ ೧೯೪೭ರ ಜುಲೈನಲ್ಲಿ ಸಿದ್ಧವಾಗಿದೆ. ಏಪ್ರಿಲ್ ವರದಿಯ ಕೆಲವು ಭಾಗಗಳು ಉಚಿತವಾಗಿದ್ದರೆ ಕೆಲವು ಇಲ್ಲ. ಎರಡೂ ವರದಿಗಳಿಂದ ಸೂಕ್ತ ವಾಕ್ಯಗಳನ್ನು ಆಯ್ದುಕೊಳ್ಳುವುದು ಸದಸ್ಯರಿಗೆ ಕಷ್ಟವಾಗುತ್ತದೆ. ಏಪ್ರಿಲ್ ಮತ್ತು ಜುಲೈ ವರದಿಗಳಲ್ಲಿನ ವಿಷಯಗಳು ಹಾಗೂ ಭಾರತ ಸರ್ಕಾರ ಅಧಿನಿಯಮ ೧೯೩೫ರಲ್ಲಿ ನೀಡಲಾಗಿರುವ ಒಕ್ಕೂಟ ಶಾಸನಾತ್ಮಕ ಪಟ್ಟಿಯಲ್ಲಿನ ವಿಷಯಗಳನ್ನು ಹೋಲಿಕೆ ಮಾಡಿ ನೋಡಲು ನನಗೆ ೬ ಗಂಟೆ ಕಾಲಾವಕಾಶ ಬೇಕಾಯಿತು. ಈ ಹಂತದಲ್ಲಿ ವರದಿಯ ಪರಿಶೀಲನಾ ಕಾರ್ಯ ಸದನಕ್ಕೆ ತೊಂದರೆದಾಯಕ.

ನನ್ನ ಇಷ್ಟು ಮಾತುಗಳನ್ನು ಕೇಳಿದ ಮೇಲೆ ಸದನವು ಇಂಥ ಮಹತ್ವದ ಕೃತಿಯನ್ನು ಆತುರಾತುರವಾಗಿ ಪರಿಶೀಲಿಸುವ ಬದಲು ಇನ್ನಷ್ಟು ಏಕಾಗ್ರತೆ ಹಾಗೂ ಸಮಯವನ್ನು ಅದಕ್ಕಾಗಿ ವಿನಿಯೋಗಿಸಲು ಒಪ್ಪುವುದೆಂದು ಇದರಿಂದ ಪ್ರಾಂತ್ಯಗಳು ಹಾಗೂ ರಾಜ್ಯಗಳಿಗೆ ಹೆಚ್ಚಿನ ಪ್ರಯೋಜನವಾಗುವುದೆಂದು ಆಶಿಸುತ್ತೇನೆ.

**ಶ್ರೀ ಗೋಪಿಕೃಷ್ಣ ವಿಜಯವರ್ಗೀಯ** (ಗ್ವಾಲಿಯರ್ ರಾಜ್ಯ) : *[ಅಧ್ಯಕ್ಷರೆ, ಈಗಿನ ಸನ್ನಿವೇಶದಲ್ಲಿ ನಾವು ಈ ವಿಷಯಗಳನ್ನು ಅನಿರ್ಧಾರಕವಾಗಿ ಬಿಡಲಾಗುವುದಿಲ್ಲ. ಈ ವಿಷಯಗಳ ಮುಂದೂಡಿಕೆ ಕುರಿತಂತೆ ಮೌಲಾನಾ ಹಜರತ್ ಮೋಹಾನಿ ಮಂಡಿಸಿದ ತಿದ್ದುಪಡಿ ಅನುಚಿತ. ದೇಶದಲ್ಲಿ ಪರಿಸ್ಥಿತಿ ಎಷ್ಟು ವೇಗವಾಗಿ ಬದಲಾಗುತ್ತಿದೆಯೆಂದರೆ ನಾವು ಸಾಧ್ಯವಾದಷ್ಟು ಬೇಗ ಸಂವಿಧಾನ ರಚನಾ ಕಾರ್ಯವನ್ನು ಪೂರ್ಣಗೊಳಿಸಿ ಆಡಳಿತ ಹಾಗೂ ಯೋಜನಾಕಾರ್ಯಗಳನ್ನು ಕೈಗೊಂಡು ಜನರ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ನನ್ನ ಅನಿಸಿಕೆ. ಮೌಲಾನಾ ಸಾಹಿಬ್ ಅವರ ವಾದ ನಿರಾಧಾರವಾದುದು. ಮೌಲಾನಾ ಹಾಗೂ ಒಂದು ಭಾರತೀಯ ರಾಜ್ಯದ ಪ್ರಧಾನಿ ಇಬ್ಬರೂ ನಮಗೆ ಸೋಷಿಯಲಿಸ್ಟ್ ರಿಪಬ್ಲಿಕ್ ಸರ್ಕಾರ ಬೇಕು ಎಂಬ ಕಾರಣ ಹೇಳಿ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯ ಪರಿಶೀಲನೆಯನ್ನು ಮುಂದೂಡುವಂತೆ ಕೇಳುತ್ತಿರುವುದು ಕಾಕತಾಳೀಯ. ಅದರ ಮುಂದೂಡಿಕೆಗೆ ಇಬ್ಬರೂ ನೀಡುತ್ತಿರುವ ಕಾರಣ ಒಂದೇ. ಸಮಾಜವಾದವನ್ನು ಜಾರಿಗೊಳಿಸಲು ಇದು ಸರಿಯಾದ ಮಾರ್ಗವಲ್ಲ. ಇದೇ ಸಂವಿಧಾನದ ಅಡಿಯಲ್ಲಿ ಸೋಷಿಯಲಿಸ್ಟ್ ಪಕ್ಷವು ಕೆಲಸ ಮಾಡಬಲ್ಲದು. ನಮ್ಮ ದೇಶ ಒಗ್ಗೂಡಿರಬೇಕು, ಶ್ರೇಷ್ಠವಾಗಿರಬೇಕು ಎಂಬುದು ನಮ್ಮ ಇಚ್ಛೆ. ಇದಕ್ಕಾಗಿ ಕೇಂದ್ರಕ್ಕೆ ಯಾವ ಅಧಿಕಾರವೂ ಇರಬಾರದು, ಎಲ್ಲ ಅಧಿಕಾರ ಪ್ರಾಂತ್ಯಗಳ ಕೈಯಲ್ಲಿರಬೇಕು ಎಂಬ ವಾದದಲ್ಲಿ ಹುರುಳಿಲ್ಲ. ಮೌಲಾನಾ ಅವರ ಭಾಷಣವನ್ನು ನಾನು ಅರ್ಥಮಾಡಿಕೊಂಡಿರುವಂತೆ ಕೇಂದ್ರದಲ್ಲಿ ಯಾವ ಅಧಿಕಾರವೂ ಇರಬಾರದು. ಭಾರತ ತುಂಡುತುಂಡಾಗಿಯೇ ಇರಬೇಕು. ಭಾರತ ಬಲಶಾಲಿಯಾಗಿರಬೇಕಾದ ಅಗತ್ಯವಿದೆ. ಐತಿಹಾಸಿಕ ಕಾಲದಲ್ಲಿ ಭಾರತ ಹಲವಾರು ಕಾಲ ವಿಭಜಿತವಾಗಿತ್ತು. ಆದರೆ ಈಗ ಭಾರತಕ್ಕೆ ಬಲವಾದ ಕೇಂದ್ರ ಸರ್ಕಾರವಿರಬೇಕು.

ನಾನು ಒಂದು ರಾಜ್ಯದಿಂದ ಬಂದವನಾಗಿದ್ದು ಕೇಂದ್ರ ಬಲಶಾಲಿಯಾಗಿರಬೇಕೆಂದು ಒತ್ತಿ ಹೇಳುತ್ತೇನೆ ಮತ್ತು ಆಡಳಿತಗಾರರಿಗೆ ಮಂತ್ರಿಗಳಿಗೆ ಹಾಗೂ ಇಲ್ಲಿ ಇರುವ ರಾಜ್ಯಗಳ ಪ್ರತಿನಿಧಿಗಳಿಗೂ ಕೇಂದ್ರವನ್ನು ಬಲಶಾಲಿಗೊಳಿಸಬೇಕೆಂದು ಇದರಿಂದ ಭಾರತ ಬಲಶಾಲಿ ದೇಶವಾಗುವುದೆಂದು ವಿನಂತಿಸುತ್ತೇನೆ. ಆದ್ದರಿಂದ

ಇಲ್ಲಿ ನಡೆದ ವಾದಗಳು, ವರದಿ ಪರಿಶೀಲನೆಯ ಮುಂದೂಡಿಕೆ ತಪ್ಪು ಹಾಗೂ ವರದಿ ಪರಿಶೀಲನೆಯ ಮುಂದೂಡಿಕೆ ದೇಶಕ್ಕೆ ತೊಂದರೆದಾಯಕ. ವಿಳಂಬ ತರವಲ್ಲ. ಇದೀಗ ಶ್ರೀ ಪಟ್ಟಾನಿ ಹೇಳಿದಂತೆ ಕೇಂದ್ರದ ಅಧಿಕಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಇತ್ಯರ್ಥವಾಗುವವರೆಗೆ ಸಂವಿಧಾನದ ರೂಪುರೇಷೆ ಸಿದ್ಧತೆ ಸಾಧ್ಯವಾಗದು. ಆದ್ದರಿಂದ ನಾವು ಕೇಂದ್ರದ ಅಧಿಕಾರಕ್ಕೆ ಸಂಬಂಧಿಸಿದ ವಿಷಯಗಳ ಪರಿಶೀಲನೆಯನ್ನು ಮುಂದೂಡುವಂತಿಲ್ಲ.]*

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯರೆ, ನಾನು ಮುಂದೂಡಿಕೆ ಪ್ರಸ್ತಾವವನ್ನು ಬೆಂಬಲಿಸಲು ಇಚ್ಛಿಸುತ್ತೇನೆ. ಆದರೆ ತಿದ್ದುಪಡಿಯಲ್ಲಿ ತಿಳಿಸಿದಷ್ಟು ಅನಧಿಗಾಗಿ ಅಥವಾ ಮುಂದೂಡಿಕೆಯನ್ನು ಬೆಂಬಲಿಸಲು ನೀಡಿರುವ ಕಾರಣಗಳಿಗಾಗಿ ಅಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು ಸದಸ್ಯರಿಗಿರುವ ಕೆಲವು ತೊಂದರೆಗಳನ್ನು ಸದನಕ್ಕೆ ತಿಳಿಸಲು ಬಯಸುತ್ತೇನೆ. ಏಪ್ರಿಲ್ ೨೮ರ ಹಾಗೂ ಈಗ ಪರಿಶೀಲನೆಯಲ್ಲಿರುವ ಎರಡೂ ವರದಿಗಳನ್ನು ಒಗ್ಗೂಡಿಸಲು ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಸೂಚಿಸುತ್ತೇನೆ. ಅದರ ಸಿಬ್ಬಂದಿಯ ಕುರಿತು ನಾನು ಹೇಳುವಂಥದು ಏನೂ ಇಲ್ಲ. ೨ನೇ ವರದಿಯ ತರುವಾಯ ಉಂಟಾದ ಕೆಲ ಬದಲವಣೆಗಳನ್ನು ಪರಿಗಣಿಸಿ ಹೊಸ ಸಮಿತಿ ಹೊಸ ವರದಿ ನೀಡಬೇಕು.

ವಿದ್ಯುಚ್ಛಕ್ತಿಯಲ್ಲಿ ಪರ್ಯಾಯ ವಿದ್ಯುತ್ ಇರುವಂತೆ ಉರ್ದು ಹಾಗೂ ಇಂಗ್ಲಿಷಿನಲ್ಲಿ ಪರ್ಯಾಯವಾಗಿ ಮಾತನಾಡಿದ ಮಂಡನೆಕಾರರ ಅಭಿವ್ಯಕ್ತಿಯನ್ನು ಕುರಿತು ನಾನೇನು ಹೇಳುವುದಿಲ್ಲ. ಏಕೆಂದರೆ ಇದರಿಂದ ಕೆಲ ಸದಸ್ಯರಿಗೆ ತೊಂದರೆಯಾಗಿದೆ. ಕೇವಲ ಇಂಗ್ಲಿಷ್ ಅಥವಾ ಕೇವಲ ಉರ್ದು ಭಾಷಣಗಳನ್ನು ವರದಿ ಮಾಡಬಲ್ಲ ಕೆಲ ವರದಿಗಾರರಿಗೂ ತೊಂದರೆಯಾಗಿದೆ.

ಮಾನ್ಯರೇ ಏಪ್ರಿಲ್ ೨೮ರ ವರದಿಯಂತೂ ಹಳೆಯ ಮಾದರಿಯದಾಗಿದೆ. ವರದಿ ಮಂಡನೆಕಾರರಾದ ಶ್ರೀ ಅಯ್ಯಂಗಾರ್‌ರವರು ಆ ವರದಿಯ ಕೆಲವು ಭಾಗಗಳು ಸದ್ಯ ಪರಿಶೀಲನೆಯಲ್ಲಿರುವ ವರದಿಗೆ ಸುಸಂಗತವಾಗಿವೆ ಎಂದು ಹೇಳಿರುವುದರಿಂದ ಅದನ್ನು ಪರಿಗಣಿಸಬಹುದು. ಜೂನ್ ೩ರ ಹೇಳಿಕೆಯ ಮೇಲೆ ಚುನಾಯಿತರಾದ ಸದಸ್ಯರ ಪರವಾಗಿ ನಾನು ಹೇಳುವುದೇನೆಂದರೆ ಮೊದಲನೇ ವರದಿ ನಮ್ಮ ಎದುರಿಗಿಲ್ಲ ಹಾಗೂ ೨ನೇ ವರದಿ ಪ್ರಕಟವಾದ ಅನಂತರ ಸ್ವಾತಂತ್ರ್ಯ ಅಧಿನಿಯಮ ಅಸ್ತಿತ್ವಕ್ಕೆ ಬಂದಿರುವ ಕಾರಣಕ್ಕಾಗಿ ೨ನೇ ವರದಿಯು ಹಳೆಯ ಮಾದರಿಯದೆಂದು ಹೇಳಲಾಗಿರುವುದರಿಂದ ಹೊಸದೊಂದು ವರದಿ ಅಗತ್ಯವಾಗಿದೆ.

ಇನ್ನೊಂದು ಅಡ್ಡಿ ಎದುರಾಗಿದೆ. ರಾಜ್ಯಗಳು ರಕ್ಷಣೆ, ವಿದೇಶ ವ್ಯವಹಾರ ಹಾಗೂ ಸಂಪರ್ಕ ಈ ಮೂರು ವಿಷಯಗಳನ್ನು ಕುರಿತು ಸಮ್ಮತಿಸಿವೆ ಎಂದು ಪತ್ರಿಕಾ ವರದಿಗಳಿಂದ ತಿಳಿದುಬಂದಿದೆ. ಆದರೆ ಅಯ್ಯಂಗಾರರು ಸಮ್ಮತಿ ಒಡಂಬಡಿಕೆಯಲ್ಲಿ ೧೮ ರಿಂದ ೨೦ ವಿವಿಧ ವಿಷಯಗಳಿವೆ ಎಂದು ತಿಳಿಸಿದ್ದಾರೆ.

**ಶ್ರೀ ಮಹಮ್ಮದ್ ಷರೀಫ್ :** *[ಮಾನ್ಯ ಅಧ್ಯಕ್ಷರೆ, ಮೌಲಾನಾ ಹಜರತ್ ಮೊಹಾನಿ ಅವರ ಭಾಷಣವನ್ನು ನಾನು ಗಮನವಿಟ್ಟು ಕೇಳಿದ್ದೇನೆ. ನಿರ್ಣಯವನ್ನು ಮುಂದೂಡಲು ಅವರು ಅನೇಕ ಕಾರಣಗಳನ್ನು ನೀಡಿದ್ದಾರೆ. ಮೌಲಾನಾ ಸಾಹೇಬ್ ಹಾಗೆ ಭಾಷಣ ಮಾಡಲು ಅವರಿಗಿದ್ದ ಭಾವನೆಗಳ ಬಗ್ಗೆ ನನಗೆ ಮೆಚ್ಚುಗೆ ಇದೆ. ಸೋಷಿಯಲಿಸ್ಟ್ ರಿಪಬ್ಲಿಕ್ ಬಗ್ಗೆ ಅವರು ಮಾತನಾಡಿದ್ದು ನನಗೆ ಸಂಪೂರ್ಣವಾಗಿ ಒಪ್ಪಿಗೆಯಾಗದಿದ್ದರೂ ನಿರ್ಣಯ ಮುಂದೂಡಿಕೆ ಒಳ್ಳೆಯದು ಎಂದು ನನ್ನ ಅನಿಸಿಕೆ. ಕೇಂದ್ರದ ಅಧಿಕಾರಗಳಿಗೆ ಸಂಬಂಧಿಸಿದಂತೆ ವರದಿಗೆ ಲಗತ್ತಿಸಲಾದ ಮೂರು ಪಟ್ಟಿಗಳನ್ನು ನೋಡಿದಾಗ ಕೇಂದ್ರವು ರಾಜ್ಯಗಳ ಎಲ್ಲ ಅಧಿಕಾರಗಳನ್ನು ಮೊಟಕುಗೊಳಿಸುತ್ತದೆಂದು ಕಂಡುಬರುತ್ತದೆ. ಹದಿನೈದು ದಿನಗಳ ಮುಂಚೆ ವೈಸರಾಯ್ ಅವರು, ಒಂದು ಹೇಳಿಕೆ ನೀಡಿ ರಾಜ್ಯಗಳು ಹಾಗೂ ಸಂವಿಧಾನ ರಚನಾಸಭೆಯ ನಡುವಣ ಸಂಬಂಧ ಕುರಿತಂತೆ ತಾನು ರಾಜ್ಯಗಳ ಆಂತರಿಕ ವಿಷಯಗಳಲ್ಲಿ ಮಧ್ಯೆ ಪ್ರವೇಶಿಸುವುದಿಲ್ಲವೆಂದು ತಿಳಿಸಿದ್ದರು. ಆದರೆ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯನ್ನು ನೋಡಿದಾಗ ಕೇಂದ್ರವು ಮೇಲೆ ತಿಳಿಸಿದ ೩ ವಿಷಯಗಳಷ್ಟೇ ಅಲ್ಲದೇ ಇತರ

ಅಧಿಕಾರಗಳನ್ನೂ ಮೊಟಕುಗೊಳಿಸಿರುವುದು ಕಂಡುಬರುತ್ತದೆ. ನಮ್ಮ ಕೇಂದ್ರ ಕಾಂಗ್ರೆಸ್ ಪಕ್ಷವು ಅತ್ಯಂತ ಶಕ್ತಿಯುತ ಪಕ್ಷವಾಗಿದ್ದು, ರಾಜ್ಯದ ಆಂತರಿಕ ಆಡಳಿತದಲ್ಲಿ ಮಧ್ಯೆ ಪ್ರವೇಶಿಸಲು ಇಷ್ಟಪಡುವುದಿಲ್ಲವೆಂದು ತಿಳಿಸಿದೆ. ಆದರೆ ವರದಿಯಲ್ಲಿ ಈ ಹೇಳಿಕೆಗೆ ವಿರುದ್ಧವಾದುದು ಕಂಡುಬರುತ್ತದೆ. ಆದ್ದರಿಂದ ವರದಿಯ ಪರಿಶೀಲನೆಯನ್ನು ಸದ್ಯಕ್ಕೆ ಮುಂದೂಡಬೇಕೆಂದು ಸೂಚಿಸುತ್ತೇನೆ. ಈ ಮುಂಚೆ ಮಾತನಾಡಿದವರೂ ಇದನ್ನೇ ತಿಳಿಸಿದ್ದಾರೆ. ರಾಜ್ಯಗಳ ಪ್ರತಿನಿಧಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿ ಆ ಸಮಿತಿಗೆ ಈ ವರದಿಯನ್ನು ಪರಿಶೀಲನೆಗಾಗಿ ಸಲ್ಲಿಸಿ, ಆ ಸಮಿತಿಯ ತೀರ್ಮಾನವನ್ನು ಮರುಪರಿಶೀಲನೆಗಾಗಿ ನಮ್ಮ ಮುಂದೆ ಮಂಡಿಸಬೇಕು.]*

**ಶ್ರೀ ನಜಿರುದ್ದೀನ್ ಅಹ್ಮದ್ :** ಕೆಲವು ಮಹತ್ತ್ವದ ದಾಖಲೆಗಳಿರುವ ಬಗ್ಗೆ ಹಾಗೂ ಅವುಗಳ ಪ್ರತಿಗಳನ್ನು ಕೂಡಲೇ ನಮಗೆ ಒದಗಿಸಬೇಕಾದ ಬಗ್ಗೆ ನಮಗೆ ಅರಿವೇ ಇಲ್ಲ ಎಂದು ನನ್ನ ಅನಿಸಿಕೆ. ಪಟ್ಟಿಯಲ್ಲಿರುವ ಕೆಲವು ವಿಷಯಗಳು ರಾಜ್ಯಗಳಿಗೆ ಸಂಬಂಧಿಸಿವೆ ಎಂಬ ಅಂಶದ ಹಿನ್ನೆಲೆಯಲ್ಲಿ ಅದು (ಆ ದಾಖಲೆಗಳ ಅರಿವು) ಮಹತ್ತ್ವದ್ದಾಗುತ್ತದೆ. ಆ ಮಹತ್ತ್ವದ ದಾಖಲೆಗಳಿಲ್ಲದಿರುವುದರಿಂದ ಆ ಪಟ್ಟಿಗಳು ಎಷ್ಟರಮಟ್ಟಿಗೆ ರಾಜ್ಯಗಳಿಗೆ ಸಂಬಂಧಿಸಿವೆ ಎಂಬುದನ್ನು ನಿರ್ಧರಿಸುವುದು ನಮಗೆ ಸಾಧ್ಯವಾಗುವುದಿಲ್ಲ.

ಇಂದು ಬೆಳಗ್ಗೆ ಭಾಷಣಕಾರರೊಬ್ಬರು ಪ್ರಾಂತ್ಯಗಳಿಗೆ ಹಾಗೂ ರಾಜ್ಯಗಳಿಗೆ ಅನ್ವಯವಾಗುವ ಪಟ್ಟಿಗಳನ್ನು ಪ್ರತ್ಯೇಕಿಸಿ ನೋಡಬೇಕೆಂದು ಹೇಳಿದರು. ಎರಡೂ ಮಿಶ್ರವಾಗಿರುವುದರಿಂದ ಅವುಗಳನ್ನು ಬೇರ್ಪಡಿಸುವುದು ಹಾಗೂ ಯಾವ ತಿದ್ದುಪಡಿಗಳನ್ನು ಸೂಚಿಸಬೇಕೆಂದು ಯೋಚಿಸುವುದು ಕಷ್ಟವಾಗುತ್ತದೆ.

ಇದಲ್ಲದೇ ಇನ್ನೂ ಕೆಲವು ಅಡ್ಡಿಗಳಿವೆ. ಅವುಗಳನ್ನು ಮೂಲ ಪ್ರಸ್ತಾವದ ಮಂಡನೆಕಾರರು ವಿವರಿಸಿದ್ದಾರೆ. ಆದರೆ ವಿಷಯ ತಾಂತ್ರಿಕ ಸ್ವರೂಪದ್ದಾಗಿರುವುದರಿಂದ ವಿವಿಧ ಪಟ್ಟಿಗಳ ಹಾಗೂ ಪರಿಶೀಲನೆಯಲ್ಲಿರುವ ವಿಷಯಗಳ ಪರಿಣಾಮಗಳನ್ನು ಪೂರ್ಣವಾಗಿ ವಿಶ್ಲೇಷಿಸಲು ಸದಸ್ಯರು ಪೂರ್ಣಗಮನವಹಿಸಿ ಅದನ್ನು ಪರಿಶೀಲಿಸಬೇಕಾಗುತ್ತದೆ. ಆದ್ದರಿಂದ ಈ ಎಲ್ಲ ಕಾರಣಗಳಿಗಾಗಿ ವರದಿ ಪರಿಶೀಲನೆಯನ್ನು ಸ್ವಲ್ಪಕಾಲದ ವರೆಗಾದರೂ ಮುಂದೂಡಬೇಕಾಗುತ್ತದೆ ಎಂಬುದು ನನ್ನ ವಿನಂತಿ. ಮೂಲಪ್ರಸ್ತಾವದ ಮಂಡನೆಕಾರರು ಸಮಿತಿಯ ರಚನೆಗೆ ಹಾಗೂ ಅದು ಸಭೆ ಸೇರಿ ಬದಲಾವಣೆಗಳ ಹಿನ್ನೆಲೆಯಲ್ಲಿ ಇಡೀ ವರದಿಯನ್ನು ಪರಿಶೀಲಿಸಿ ರಾಜ್ಯ ಪ್ರಾಂತ ಹಾಗೂ ಕೇಂದ್ರ ಪಟ್ಟಿಗಳ ನಡುವಣ ವ್ಯತ್ಯಾಸವನ್ನು ಸ್ಪಷ್ಟಗೊಳಿಸಿ ನಮಗೆ ಒಂದು ಸಮನ್ವಯಗೊಂಡ ವರದಿಯನ್ನು ಕೊಡುವುದಕ್ಕೆ ಸಮ್ಮತಿಸಬೇಕು. ಇದು ಸಮಂಜಸ ವಿನಂತಿ ಎನ್ನಿಸುತ್ತದೆ. ಇದು ವಿಷಯಗಳನ್ನು ವಿಳಂಬಗೊಳಿಸುವುದಕ್ಕೆ ಎಂದು ಅರ್ಥವಲ್ಲ. ವಿಷಯಗಳನ್ನು ತ್ವರಿತಗೊಳಿಸಲು ಇತರರಷ್ಟೇ ನಮಗೂ ಕಾತರ ಇದೆ. ಆದ್ದರಿಂದ ನನ್ನ ಸಲಹೆಯನ್ನು ಅಳವಡಿಸಿಕೊಂಡು ವಿಷಯಗಳನ್ನು ನಿರ್ವಹಿಸಬಹುದಾಗಿದೆ. ನಮಗೆ ಸ್ವಲ್ಪ ಸಮಯ ನೀಡಿ ವಿಷಯ ಸಂಪೂರ್ಣ ಅರ್ಥವಾಗುವಂತೆ ಸಮಗ್ರ ವರದಿಯನ್ನು ನಮಗೆ ನೀಡಬೇಕೆಂದು ವಿನಂತಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಈಗ ದಿವಾನ್ ಚಮನ್‌ಲಾಲ್ ಮಾತನಾಡುತ್ತಾರೆ.

**ಶ್ರೀ ಅಲಗು ರೈಶಾಸ್ತ್ರಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಅಧ್ಯಕ್ಷರೆ, ಈ ತಿದ್ದುಪಡಿಯನ್ನು ಈಗ ಮತಕ್ಕೆ ಹಾಕಬೇಕು. ಈಗಾಗಲೇ ಸಾಕಷ್ಟು ಸಮಯವನ್ನು ಅದಕ್ಕೆ ನೀಡಿರುವುದರಿಂದ ಇನ್ನಷ್ಟು ಚರ್ಚೆಯ ಅಗತ್ಯವಿಲ್ಲ.]*

**ಮಾನ್ಯ ಸಭಾಧ್ಯಕ್ಷರು :** ನಾನು ಈಗಾಗಲೇ ದಿವಾನ್ ಚಮನ್ ಲಾಲರನ್ನು ಮಾತನಾಡುವಂತೆ ಕೇಳಿರುವುದರಿಂದ ಅವರ ಭಾಷಣದ ಅನಂತರ ವಿಷಯ ಮುಕ್ತಾಯಗೊಳಿಸುತ್ತೇನೆ.

**ದಿವಾನ್ ಚಮನ್ ಲಾಲ್ :** ನಾನು ಚರ್ಚೆಯನ್ನು ಆಲಿಸಿದೆ. ನಮ್ಮ ದೇಶದ ಅತ್ಯಂತ ಸಮರ್ಥ ಹಾಗೂ ಬುದ್ಧಿವಂತ ನಾಯಕರು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಮಂಡಿಸಿದ ಪ್ರಸ್ತಾವದ ಬಗ್ಗೆ ಕೆಲವು

ಸಂದೇಹಗಳನ್ನು ಹೊಂದಿರುವುದು ಆಶ್ಚರ್ಯವೆನಿಸುತ್ತದೆ. ಪರಿಶೀಲನೆಯನ್ನು ಮುಂದೂಡಲು ಪ್ರಸ್ತಾವವನ್ನು ಮಂಡಿಸುವುದಕ್ಕೆ ಮುಂಚೆ ಅವರು ವರದಿಯನ್ನು ಓದಿಯೇ ಇಲ್ಲವೆಂದು ನನ್ನ ಭಾವನೆ.

ಸದನದ ಮುಂದಿರುವ ಮುಖ್ಯ ಪ್ರಸ್ತಾವ ಹೀಗಿದೆ: ವರದಿಯನ್ನು ಸದನದ ಮುಂದೆ ಎರಡು ಭಾಗಗಳಲ್ಲಿ ಎಂದರೆ ಏಪ್ರಿಲ್‌ನಲ್ಲಿ ಒಂದು ಆಗಸ್ಟ್‌ನಲ್ಲಿ ಒಂದು ಮಂಡಿಸಲಾಗಿದೆ. ಎಂದರೆ ಮೂರನೇ ಜೂನ್‌ರ ಪ್ರಕಟಣೆಗೆ ಮುಂಚೆ ಒಂದು ಪ್ರಕಟಣೆಯ ತರುವಾಯ ಇನ್ನೊಂದು ಮಂಡಿಸಲಾಗಿದೆ. ವರದಿಯ ಎರಡೂ ಭಾಗಗಳನ್ನು ಪರಿಶೀಲನೆಗಾಗಿ ಕೈಗೆತ್ತಿಕೊಳ್ಳಬೇಕೆಂದು ಕೋರಲಾಗಿದೆ.

ಈಗ ಮೌಲಾನಾ ಹಜರತ್ ಮೋಹಾನಿಯವರು ಕೇಂದ್ರ ಸಂವಿಧಾನ ಸಮಿತಿಯ ಅಂತಿಮ ವರದಿಯನ್ನು ಸದನದ ಮುಂದೆ ಮಂಡಿಸುವವರೆಗೆ ಆ ವರದಿಯ ಪರಿಶೀಲನೆಯನ್ನು ಮಾಡಬಾರದೆಂಬ ಅಂಶವನ್ನು ಎತ್ತಿದ್ದಾರೆ. ಇದು ಸಾಮಾನ್ಯ ಜ್ಞಾನದ ವಿಷಯ ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಕೇಂದ್ರ ಸಂವಿಧಾನ ಸಮಿತಿಯ ಹೊಂದಿರುವ ಅಧಿಕಾರಗಳನ್ನು ಕುರಿತು ಸಂಬಂಧಪಟ್ಟವರಿಗೆ ನೀವು ತಿಳಿಸುವವರೆಗೆ ಮತ್ತು ಪ್ರಾಂತ್ಯ ಹಾಗೂ ಕೇಂದ್ರಗಳಿಗೆ ನೀವು ಅಧಿಕಾರ ವಿತರಣೆ ಮಾಡುವವರೆಗೆ ಕೇಂದ್ರ ಸಂವಿಧಾನ ಸಮಿತಿಯು ಈ ಸದನದ ಮುಂದೆ ಅಂತಿಮ ವರದಿ ಸಲ್ಲಿಸಲು ಆಗುವುದಿಲ್ಲ. ನಿಮಗಿರುವ ಅಧಿಕಾರಗಳ ಬಗ್ಗೆ ಪ್ರಾಂತ್ಯಗಳು ಪಡೆಯುವ ಅಧಿಕಾರಗಳ ಬಗ್ಗೆ ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳ ಬಗ್ಗೆ ನಿಮಗೆ ಸ್ಪಷ್ಟವಾಗುವವರೆಗೂ ನೀವು ಅಂತಿಮ ವರದಿಯನ್ನು ಸಲ್ಲಿಸಲು ಆಗುವುದಿಲ್ಲ. ಆದ್ದರಿಂದ ಮೌಲಾನಾ ಹಜರತ್ ಮೋಹಾನಿಯವರ ವಾದದಲ್ಲಿ ತಾರ್ಕಿಕ ದೋಷವಿದೆ ಎಂದು ನಾನು ತಿಳಿಸಬಯಸುತ್ತೇನೆ.

ವರದಿ ಪರಿಶೀಲನೆಯ ಮುಂದೂಡಿಕೆಯ ನಿಲುವಳಿಯನ್ನು ಬೆಂಬಲಿಸಿದ ಇನ್ನೊಬ್ಬ ಭಾಷಣಕಾರರು ಕೂಚ್ ಬೆಹಾರ್ ರಾಜ್ಯದ ಪ್ರತಿನಿಧಿ ಇರಬಹುದು. ಅವರು ಆ ರಾಜ್ಯದ ದಿವಾನ್. ಆತ ರಾಜಕೀಯ ತಜ್ಞ, ರಾಜ್ಯದ ಜನತೆಯ ಅದೃಷ್ಟ ಅವರ ಕೈಯಲ್ಲಿದೆ. ಅವರು ಅಸಾಮಾನ್ಯ ಆಕ್ಷೇಪಣೆಯನ್ನೆತ್ತಿದ್ದಾರೆ. ಅದೇನೆಂದರೆ ನೀವು ನಮಗೆ ಮೊದಲನೆಯ ವರದಿ, ಎರಡನೆಯ ವರದಿ ನೀಡಿದ್ದೀರಿ. ಎರಡೂ ವರದಿಗಳು ನಮಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ಮೂರನೆಯ ವರದಿಯನ್ನು ನೀಡಿದರೆ ಮೊದಲ ಹಾಗೂ ಎರಡನೆಯ ವರದಿಗಳನ್ನು ಅರ್ಥಮಾಡಿಕೊಳ್ಳಲು ಅದು ಸಹಾಯಕವಾಗಬಹುದು. (ನಗು). ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರ ಪ್ರಸ್ತಾವ ಸರಳವಾಗಿದೆ. ಒಂದು ಒಕ್ಕೂಟವಿರಬೇಕೆಂದು ಈ ಸದನ ಒಪ್ಪಿದೆ. ಈ ಒಕ್ಕೂಟಕ್ಕೆ ಇರಬೇಕಾದ ಅಧಿಕಾರಗಳೇನು ಎಂದು ನಿರ್ಧರಿಸಬೇಕೆಂದು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ನಮ್ಮನ್ನು ಕೇಳಿದ್ದಾರೆ. ಈ ಹಂತದಲ್ಲಿ ನಿಮಗೆ ಬೇಕಾಗಿರುವ ಅಧಿಕಾರಿಗಳ ಗುಣಮಟ್ಟ ಹಾಗೂ ಪ್ರಮಾಣವನ್ನು ಕುರಿತು ಚರ್ಚಿಸಲು ನಿಮಗೆ ಹಕ್ಕಿದೆ. ಕೆಲವರು ಈಗಾಗಲೇ ಹೇಳಿರುವಂತೆ ಒಕ್ಕೂಟದ ಅಧಿಕಾರವು ಈಗಾಗಲೇ ತಿಳಿಸಿರುವ ಮೂರು ವಿಷಯಗಳಿಗೆ ಸೀಮಿತವಾಗಿರಬೇಕೆಂದು ನೀವೂ ತಿಳಿಸಬಹುದು. ಮೊದಲನೇ ವರದಿಯಲ್ಲಿ ಈಗಾಗಲೇ ಹೇಳಿರುವ ಮೂರು ವಿಷಯಗಳ ವಿವರಗಳಿವೆ. ಆ ವರದಿಯಲ್ಲಿ ಕೇಂದ್ರದ ಅಧಿಕಾರಗಳು ಪ್ರಾಂತಗಳ ಅಧಿಕಾರಗಳು ಮುಂತಾದ ವಿವರಗಳಿವೆ. ವರದಿಯಲ್ಲಿ ಅವರ ಅಭಿಪ್ರಾಯದ ಮೇರೆಗೆ ಕೆಲವು ಮಿಕ್ಕ ಅಧಿಕಾರಗಳಿದ್ದು ಅವುಗಳನ್ನು ಕೇಂದ್ರಕ್ಕೆ ಕೊಡಬಹುದಾಗಿದೆ. ಇನ್ನೂ ಕೆಲವು ಅಧಿಕಾರಗಳು ಮೇ ೧೬ರ ಯೋಜನೆಯ ನಿಬಂಧನೆಗಳಡಿ ಉದ್ಭವಿಸಿದವುಗಳಾಗಿದ್ದು, ಅವೂ ಕೇಂದ್ರಕ್ಕೆ ಸೇರಬಹುದಾಗಿದೆ. ಇದು ಮೊದಲನೇ ವರದಿಯ ಮರ್ಮ. ಇದರಲ್ಲಿ ಯಾವುದೇ ಸಂದಿಗ್ಧತೆ ಇಲ್ಲ. ವಿವರಗಳನ್ನೂ ನೀಡಲಾಗಿದೆ.

ಜೂನ್ ೩ರ ಹೇಳಿಕೆಯ ತರುವಾಯ ಎರಡನೇ ವರದಿ ಬಂದಿದ್ದು, ಆಗ, ಕೇಂದ್ರವು ಬಲಶಾಲಿಯಾಗಿರಬೇಕೆಂದು ಸದನವು ತೀರ್ಮಾನಿಸಿತು. ಇದರಲ್ಲಿ ಕೇಂದ್ರ ಹಾಗೂ ಪ್ರಾಂತ್ಯಗಳ ನಡುವೆ ಅಧಿಕಾರ ಹಂಚಿಕೆಯ ವಿವರಗಳು ಹಾಗೂ ಒಕ್ಕೂಟ ಪಟ್ಟಿ ಪ್ರಾಂತ್ಯಪಟ್ಟಿ ಹಾಗೂ ಸಮವರ್ತಿ ಪಟ್ಟಿ ನಮ್ಮ

ಮುಂದಿವೆ. ಯಾರಾದರೂ ಯಾವುದೇ ಆಕ್ಷೇಪ ಎತ್ತುವಂಥದೇನಾದರೂ ಈ ಪಟ್ಟಿಯಲ್ಲಿದೆಯೇ? ಆಕ್ಷೇಪಣೆಗಳೇನಾದರೂ ಇದ್ದರೆ ಈ ಸಮಯದಲ್ಲಿ ಹೇಳಬಹುದು. ರಾಜ್ಯಗಳಿಂದ ಅಥವಾ ಪ್ರಾಂತ್ಯಗಳಿಂದ ಕೇಂದ್ರಕ್ಕೆ ಕೆಲವು ಅಧಿಕಾರಗಳು ಹಂಚಿಕೆಯಾಗಬಾರದೆಂದು ನೀವು ಬಯಸಿದರೆ ಆ ವಿಷಯವನ್ನು ಈಗ ಚರ್ಚಿಸಬಹುದು. ಈ ವಿಷಯದ ಮುಂದೂಡಿಕೆಗಾಗಿ ಮಾಡಿರುವ ಬೇಡಿಕೆಗೆ ಯಾವುದೇ ಕಾರಣ ಅಥವಾ ತರ್ಕ ನನಗೆ ಗೋಚರಿಸುತ್ತಿಲ್ಲ. ಇದು ವಿಷಯವನ್ನು ಹಗುರಗೊಳಿಸುವ ಪ್ರಸ್ತಾವವಾಗಿದ್ದು, ಯಾವುದೇ ತಾರ್ಕಿಕ ವಾದದಿಂದಲೂ ಇದನ್ನು ಸಮರ್ಥಿಸಲಾಗದು ಮತ್ತು ವರದಿಯಲ್ಲಿನ ಇನ್ನಿತರ ಹಲವು ವಿಷಯಗಳನ್ನು ಕುರಿತ ಚರ್ಚೆಯನ್ನು ಮುಂದುವರಿಸಬಹುದು ಎಂದು ನಾನೂ ತಿಳಿಸಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಮುಕ್ತಾಯಕ್ಕಾಗಿ ಕೋರಲಾಗಿದೆ. ನಾನು ಮುಕ್ತಾಯದ ಪ್ರಸ್ತಾವವನ್ನು ಸದನದ ಮುಂದಿಡುತ್ತೇನೆ. ಮುಂದಿಟ್ಟಿರುವ ವಿಷಯ :

"ವಿಷಯವನ್ನು ಈಗ ಮತಕ್ಕೆ ಹಾಕಬಹುದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮುಂದೂಡಿಕೆ ಪ್ರಸ್ತಾವದ ಮೇಲಿನ ಚರ್ಚೆಗೆ ಉತ್ತರಿಸಲು ಅವಕಾಶ ನೀಡುತ್ತಿರುವುದಕ್ಕಾಗಿ ಸದನಕ್ಕೆ ಧನ್ಯವಾದಗಳು. ನಾನು ಯಾವುದೇ ಉತ್ತರ ನೀಡುವ ಅಗತ್ಯವಿಲ್ಲ ಎಂದು ನನ್ನ ಭಾವನೆಯಾಗಿತ್ತು. ಮುಂದೂಡಿಕೆ ಪ್ರಸ್ತಾವದ ಪರವಾಗಿ ನಡೆದ ವಾದಗಳಿಗೆ ದಿವಾನ್ ಚಮನ್ ಲಾಲರ ಭಾಷಣದಲ್ಲಿ ಸಂಪೂರ್ಣ ಉತ್ತರವಿದೆ. ದಿವಾನ್ ಚಮನ್ ಲಾಲರ ಭಾಷಣದಲ್ಲಿನ ಅಂಶಗಳನ್ನು ನಾನು ಅಂಗೀಕರಿಸುತ್ತೇನೆ. ನಾನು ಹೇಳಬೇಕಾಗಿರುವುದು ಏನೂ ಇಲ್ಲ. ಮಾನ್ಯರೆ, ಪ್ರಸ್ತಾವವನ್ನು ಮತಕ್ಕೆ ಹಾಕಬೇಕೆಂದು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಮೌಲಾನಾ ಹಜರತ್ ಮೋಹಾನಿ ಮಂಡಿಸಿದ ಮುಂದೂಡಿಕೆ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಅದರ ಪಾಠ ಮುಂದಿನಂತಿದೆ:

"ಪಂಡಿತ್ ಜವಾಹರಲಾಲ್ ನೆಹರು ಅವರೇ ಸೂಚಿಸಿರುವಂತೆ ಸಂವಿಧಾನ ರಚನಾಸಭೆಯ ಮುಂದಿನ ಅಧಿವೇಶನದಲ್ಲಿ ಕೇಂದ್ರ ಸಂವಿಧಾನದ ಪರಿಷ್ಕೃತ ಹಾಗೂ ಅಂತಿಮ ವರದಿ ಹಾಗೂ ಮಾರ್ಪಟ್ಟ ಧ್ಯೇಯಗಳ ಗೊತ್ತುವಳಿ ಪರಿಶೀಲನೆಯಾಗದೇ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯ ಪರಿಶೀಲನೆಯನ್ನು ಕೈಗೊಳ್ಳುವುದಿಲ್ಲ."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ನನಗೆ ಸೂಚನೆ ನೀಡಲಾಗಿರುವ ತಿದ್ದುಪಡಿಗಳನ್ನು ಕೈಗೆತ್ತಿಕೊಳ್ಳೋಣ. ಮೊದಲನೇ ತಿದ್ದುಪಡಿ ಮಂಡನೆ ಶ್ರೀ ಡಿ.ಪಿ. ಖೈತಾನ್ ಅವರಿಂದ ಪಟ್ಟಿ ೨ರ ಸಂಖ್ಯೆ ೧.

**ಶ್ರೀ ಡಿ.ಪಿ. ಖೈತಾನ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಮಂಡಿಸಿದ ಪ್ರಸ್ತಾವದಲ್ಲಿ ಎರಡನೇ ವರದಿಯ ಬಗ್ಗೆ ಮಾತ್ರ ತಿಳಿಸಲಾಗಿದ್ದುದರಿಂದ ನಾನು ತಿದ್ದುಪಡಿ ಸೂಚನೆ ನೀಡಿದೆ.

**ಶ್ರೀ ತಾಜಮಲ್ ಹುಸೇನ್ :** ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಮಂಡಿಸಿದ ಮೂಲ ಪ್ರಸ್ತಾವದ ಬಗ್ಗೆ ಚರ್ಚೆಯಾಗಿಲ್ಲ. ನಾವು ಕೇವಲ ಮುಂದೂಡಿಕೆ ಪ್ರಸ್ತಾವದ ಬಗ್ಗೆ ಚರ್ಚಿಸಿದ್ದೇವೆ. ಅದು ಬಿದ್ದು ಹೋಯಿತು. ಈಗ ನಾವು ಮೂಲ ಪ್ರಸ್ತಾವವನ್ನು ಎತ್ತಿಕೊಳ್ಳಬೇಕು.

**ಮಾನ್ಯ ಸಭಾಧ್ಯಕ್ಷರು :** ಮೂಲ ಪ್ರಸ್ತಾವವನ್ನು ಚರ್ಚಿಸುವಾಗ ಈ ತಿದ್ದುಪಡಿಗಳು ಉದ್ಭವಿಸುತ್ತವೆ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಮಂಡಿಸಿದ ಮೂಲ ಪ್ರಸ್ತಾವಕ್ಕೆ ಇದು ಒಂದು ತಿದ್ದುಪಡಿ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ವರದಿಯನ್ನು ಪರಿಶೀಲನೆಗೆ ಎತ್ತಿಕೊಳ್ಳುವ ಬಗೆಗಿನ ಪ್ರಸ್ತಾವವನ್ನು ಮತಕ್ಕೆ ಹಾಕುವುದು ಹಾಗೂ ತದನಂತರ ತಿದ್ದುಪಡಿಗಳನ್ನು ಒಂದಾದ ಅನಂತರ ಇನ್ನೊಂದನ್ನು

ತೆಗೆದುಕೊಳ್ಳುವುದು ಪ್ರಾಯಃ ಸರಿಯಾದ ಸಂವಿಧಾನ ಕಾರ್ಯವಿಧಾನ. ಮಾನ್ಯ ಸದಸ್ಯರು ಹೇಳಿದ್ದು ಸರಿ ಇದೆ.

**ಮಾನ್ಯ ಸಭಾಧ್ಯಕ್ಷರು :** ವರದಿಯನ್ನು ಪರಿಶೀಲನೆಗೆ ಎತ್ತಿಕೊಳ್ಳಬೇಕೆಂಬ ಮೂಲ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಆ ಪ್ರಸ್ತಾವದ ಬಗ್ಗೆ ಯಾರೇ ಸದಸ್ಯರು ಮಾತನಾಡಲು ಇಚ್ಛಿಸುತ್ತಾರೆಯೇ?

**ಶ್ರೀ ಹುಸೇನ್ ಇಮಾಮ್ :** ಮಾನ್ಯ ಸಭಾಧ್ಯಕ್ಷರೆ, ಅತ್ಯಂತ ಮಹತ್ತ್ವದ ವಿಷಯದ ಬಗ್ಗೆ ನಾವು ಮಹತ್ತ್ವದ ನಿರ್ಧಾರ ಕೈಗೊಳ್ಳುತ್ತಿದ್ದೇವೆ. ಆದ್ದರಿಂದ ಈ ವರದಿಯ ಎಲ್ಲ ಪರಿಣಾಮಗಳನ್ನು ಶಾಂತ ಮನಸ್ಸಿನಿಂದ ಪರಿಶೀಲಿಸಬೇಕಾದುದು ಅಗತ್ಯ. ನಾನು ಇದನ್ನು ಮುಸ್ಲಿಂ ಲೀಗ್ ಪಕ್ಷದ ಪರವಾಗಿ ಮಾತನಾಡುತ್ತಿಲ್ಲ. ಭಾರತೀಯ ನಾಗರಿಕನಾಗಿ ಹೇಳುತ್ತಿದ್ದೇನೆ. ಸಂವಿಧಾನ ರಚನಾಸಭೆಯ ನಿಲುವು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್‌ರ ನಿಲುವಿಗಿಂತ ಬೇರೆಯಾಗಿರಬೇಕಾದ ಅಗತ್ಯವಿದೆ ಎಂದು ನನ್ನ ಭಾವನೆ. ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಲು ಬಡವರು ಇನ್ನಷ್ಟು ಬಡತನದತ್ತ ಸಾಗುವುದಕ್ಕೆ ಅವಕಾಶವಾಗಬಾರದು. ಎಂದರೆ ನಮ್ಮ ಪೈಕಿ ಭಾರತೀಯ ರಾಜ್ಯಗಳಲ್ಲಿರುವವರಿಗೆ ಸುದೈವದಿಂದಲೋ ದುರ್ದೈವದಿಂದಲೋ ರಾಜ್ಯದ ಆಡಳಿತವನ್ನು ಕುರಿತು ಶಾಸನಾತ್ಮಕ ವಿಷಯಗಳನ್ನು ಕುರಿತು ದನಿಯೆತ್ತಲು ಅವಕಾಶವಿಲ್ಲದೇ ಮೊದಲಿಗಿಂತ ಅವರು ದುಃಸ್ಥಿತಿಗೆ ಹೋಗುವಂತಾಗಬಾರದು. ಈಗಿನ ಪರಿಸ್ಥಿತಿ ಹೇಗಿದೆಯೆಂದರೆ ಮುಂಚೆ ಬ್ರಿಟಿಷ್ ಭಾರತವಿದ್ದುದರಲ್ಲಿ ವಿಧಾನಮಂಡಲಗಳಿವೆ, ಪ್ರಜಾಪ್ರಭುತ್ವವಿದೆ ಅದನ್ನು ನೋಡಿಕೊಳ್ಳಲು ಪ್ರತಿನಿಧಿಗಳಿದ್ದಾರೆ. ರಾಜ್ಯಗಳಲ್ಲಿ ಈ ಮೂರೂ ಇಲ್ಲ. ಹಾಗಿದ್ದರೂ ೩ನೇ ಕಂಡಿಕೆಯಲ್ಲಿ ಭಾರತೀಯ ರಾಜ್ಯಗಳು ಕೇಂದ್ರಕ್ಕೆ ಬಿಟ್ಟುಕೊಟ್ಟಷ್ಟರ ಮಟ್ಟಿಗೆ ಅವು ಕೇಂದ್ರದ ನಿಯಂತ್ರಣದಲ್ಲಿರುತ್ತವೆ ಎಂದು ಹೇಳಲಾಗಿದೆ. ಈಗ ಈ ನಿರ್ಧಾರವನ್ನು ಮಾಡಿದವರು ಯಾರು? ರಾಜ್ಯದ ಆಳ್ವಿಕೆದಾರರಿಗೆ ಅವರ ಇಷ್ಟದಂತೆ ಆಡಳಿತ ನಡೆಸಲು ಸ್ವಾಯತ್ತತೆ ನೀಡಲಾಗಿದೆ. ಕೆಲವು ಆಧುನಿಕ ರಾಜ್ಯಗಳ ಬಗ್ಗೆ ನನಗೆ ತುಂಬ ಗೌರವವಿದೆ. ಕೆಲವು ರಾಜ್ಯಗಳಲ್ಲಿ ಬ್ರಿಟಿಷ್ ಭಾರತಕ್ಕಿಂತ ಉತ್ತಮ ಆಡಳಿತವಿದ್ದು ಸಾಮಾಜಿಕ ನ್ಯಾಯ ಹಾಗೂ ಸಮಾನತೆಯ ವಿಷಯದಲ್ಲಿ ಬ್ರಿಟಿಷ್ ಭಾರತಕ್ಕೆ ಅವು ಮೇಲ್ಪಂಕ್ತಿಯಾಗಬಲ್ಲವು. ಕೆಲವು ರಾಜ್ಯಗಳು ಗಾತ್ರದಲ್ಲಿ ಸಣ್ಣ ಪ್ರಾಂತ್ಯಗಳಷ್ಟು ಹಾಗೂ ಚೀಫ್ ಕಮೀಷನರ್ ಪ್ರದೇಶಗಳನ್ನು ಹೋಲುತ್ತವೆ. ಆದರೆ ೫೦೦ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ರಾಜ್ಯಗಳ ಪೈಕಿ ಬಹುಪಾಲು, ಹಳೆಯ ಭಾರತ ಸರ್ಕಾರದ ರಾಜಕೀಯ ಇಲಾಖೆಯ ಕೃಪೆಯಿಂದ ರಾಜ್ಯಗಳೆಂದು ಪರಿಗಣಿತವಾಗಿವೆ. ಮಾನ್ಯರೆ, ಭಾರತೀಯ ರಾಜ್ಯಗಳಿಗೆ ನೀಡಲಾದ ಹಕ್ಕು ಹಾಗೂ ಸವಲತ್ತುಗಳನ್ನು ೫೬೨ ರಾಜ್ಯಗಳಿಗೆ ನೀಡಬಾರದು. ಎರಡು ಅಥವಾ ಮೂರು ಡಝನ್ ರಾಜ್ಯಗಳು ಆರ್ಥಿಕ ದೃಷ್ಟಿಯಿಂದ ಪ್ರಾಂತೀಯ ಸ್ವಾಯತ್ತತೆಯ ಸ್ವರೂಪದವುಗಳಾಗಿವೆ. ಕೆಲವು ರಾಜ್ಯಗಳಿಗೆ ಮಾತ್ರ ಪ್ರಾಂತೀಯ ಸ್ವಾಯತ್ತತೆ ನೀಡಬೇಕು. ಇತರ ಬಹುಪಾಲು ಸಂಖ್ಯೆಯ ರಾಜ್ಯಗಳು ಬೇರೆ ರಾಜ್ಯಗಳೊಂದಿಗೆ ಸೇರಿ ತಮ್ಮವೇ ಘಟಕಗಳನ್ನು ಮಾಡಿಕೊಳ್ಳಬೇಕು. ಇಲ್ಲವೇ ಅವುಗಳನ್ನು ಬ್ರಿಟಿಷ್ ಭಾರತದೊಂದಿಗೆ ಜೋಡಿಸಬೇಕು. ಈ ನಿರಂಕುಶಾಧಿಕಾರಿಗಳಿಗೆ ಬಾಂಬೆ ವಿಧಾನಮಂಡಲ ಅಥವಾ ಕೇಂದ್ರ ಪ್ರಾಂತೀಯ ಸಚಿವಾಲಯಕ್ಕಿಂತ ಹೆಚ್ಚಿನ ಅಧಿಕಾರ ಚಲಾವಣೆಗೆ ಅವಕಾಶ ನಿಡಬಾರದು. ಇವರು ಜನಪ್ರತಿನಿಧಿಗಳು ಆದರೂ ರಾಜ್ಯಗಳ ನಿರಂಕುಶಾಧಿಕಾರಿಗಳಿಗಿಂತ ಹೆಚ್ಚಿನ ಅಧಿಕಾರವನ್ನು ಚಲಾಯಿಸುವಂತಿಲ್ಲ.

ಕೇಂದ್ರ ಸರ್ಕಾರವು ದೇಶದ ರಕ್ಷಣೆಗೆ ವೆಚ್ಚವನ್ನು ಭರಿಸಬೇಕು. ಭಾರತೀಯ ರಾಜ್ಯಗಳು ರಕ್ಷಣಾ ವೆಚ್ಚಕ್ಕಾಗಿ ಪರ್‌ಕ್ಯಾಪಿಟಾ ಆಧರಿಸಿ ಅಥವಾ ವರಮಾನವನ್ನಾಧರಿಸಿ ಎಷ್ಟು ಕೊಡುಗೆ ನೀಡಬಲ್ಲವು? ಪ್ರಾಂತ್ಯಗಳು ಯಾವುದೇ ಕೊಡುಗೆ ನೀಡುತ್ತಿಲ್ಲವೆಂದು ಅವು ಹೇಳುತ್ತವೆ. ಪ್ರಾಂತ್ಯಗಳು ಒಕ್ಕೂಟ ತೆರಿಗೆ ನೀಡುತ್ತಿದ್ದು, ಅದನ್ನು ತಾವು ವಿನಿಯೋಗಿಸಿಕೊಳ್ಳಲು (ನಗದುಗೊಳಿಸಿಕೊಳ್ಳಲು) ರಾಜ್ಯಗಳು ಬಯಸುತ್ತವೆ. ಒಕ್ಕೂಟ ತೆರಿಗೆ ವಿಧಿಸುವ ರಾಜ್ಯಗಳ ಹಕ್ಕನ್ನು ಹಿಂದಕ್ಕೆ ಪಡೆಯಬೇಕು. ಈ ವರದಿಯನ್ನು ಕುರಿತು ನನಗಿರುವ

ಮೊದಲನೆಯ ಮತ್ತು ಮೂಲಭೂತ ಮತಭೇದ ಇದೇ ಒಕ್ಕೂಟ ಪ್ರಾಧಿಕಾರದ  ಹೊರತಾಗಿ ಬ್ರಿಟಿಷ್ ರಾಜ್ಯ ಅಥವಾ ಭಾರತೀಯ ರಾಜ್ಯಗಳಾವುವು ಒಕ್ಕೂಟ ತೆರಿಗೆ ವಿಧಿಸಬಾರದು? ೨ನೇ ಪಟ್ಟಿ ಅಡಿಯಲ್ಲಿ ನೀವು ಪ್ರಾಂತ್ಯಗಳಿಗೆ ನೀಡಿದ ಅಧಿಕಾರಗಳನ್ನೇ ಭಾರತೀಯ ರಾಜ್ಯಗಳಿಗೂ ನೀಡಬೇಕು. ಇದಕ್ಕೆ ಹೊರತಾಗಿ ಯಾವ ಹೆಚ್ಚಿನದನ್ನೂ ಯಾವುದೇ ಭಾರತೀಯ ರಾಜ್ಯಕ್ಕೆ ನೀಡಬಾರದು. ಸಮವರ್ತಿ ಪಟ್ಟಿಯು ಹಳೆಯ ಬ್ರಿಟಿಷ್ ಭಾರತ ಹಾಗೂ ಭಾರತೀಯ ರಾಜ್ಯಗಳು ಎರಡಕ್ಕೂ ಸಮಾನವಾಗಿ ಅನ್ವಯವಾಗಬೇಕು. ಇಂದು ಬ್ರಿಟಿಷ್ ಭಾರತ ಅಸ್ತಿತ್ವದಲ್ಲಿಲ್ಲ. ಆದರೆ ಅದರ ಎಲ್ಲ ಕೆಡಕುಗಳು ನಮಗೆ ಮೈಗೂಡಿವೆ. ಅಸ್ತಿತ್ವವಿಲ್ಲದವುಗಳಿಗೆ ಹೆಚ್ಚಿನ ಅಧಿಕಾರ ನೀಡಿದ್ದರಿಂದ ಉಂಟಾದ ಕೆಡಕುಗಳಿಗೆ ಈ ಸದನ ಅನುಮೋದನೆ ನೀಡಿ ಸಮರ್ಥಿಸುವುದು ಬೇಡ. ೩ನೇ ಕಂಡಿಕೆಗೆ ತಿದ್ದುಪಡಿ ಮಾಡುವ ಮೂಲಕ ಎಲ್ಲ ಘಟಕಗಳ ಮೇಲೆ ಒಕ್ಕೂಟ ತೆರಿಗೆ ವಿಧಿಸುವ ಕೇಂದ್ರದ ಹೆಚ್ಚಿನ ಅಧಿಕಾರವನ್ನು ಅದರ ವ್ಯಾಪ್ತಿಗೆ ತರಬೇಕು.

ಮಾನ್ಯರೆ, ಈ ಬಗ್ಗೆ ನಾನು ಇನ್ನೊಂದು ಮಹತ್ತ್ವದ ಅಂಶವನ್ನು ತಿಳಿಸಬೇಕು. (ಇನ್‌ಸ್ಟ್ರುಮೆಂಟ್ ಆಫ್ ಆಕ್ಸೆಷನ್) ಪ್ರವೇಶಾವಕಾಶ ಲಿಖಿತದಲ್ಲಿ ಮೇ ೧೬ರ ಹೇಳಿಕೆಯಾಚೆ ಹೋಗುವುದಾದರೆ ಅದಕ್ಕೆ ರಾಜ್ಯಗಳ ಒಪ್ಪಿಗೆ ಇರಬೇಕು ಎಂಬುದಕ್ಕೆ ಒತ್ತು ನೀಡಲಾಗಿದೆ. ಮೇ ೧೬ರ ಹೇಳಿಕೆ ಈಗ ಅಸ್ತಿತ್ವದಲ್ಲಿಲ್ಲ. ಜೂನ್ ೩ರ ಹೇಳಿಕೆ ಮಾಡುವುದಕ್ಕೆ ಇದೂ ಒಂದು ಕಾರಣ. ಎಲ್ಲ ಉದ್ದೇಶಗಳ ಸಂಬಂಧದಲ್ಲೂ ನೀವು ಮೇ ೧೬ರ ಹೇಳಿಕೆಯನ್ನು ರದ್ದುಗೊಳಿಸಿದ್ದೀರಿ. ಭಾರತೀಯ ರಾಜ್ಯಗಳ ಕಾರಣಕ್ಕಾಗಿ ಮಾತ್ರ ಅದನ್ನು ಉಳಿಸಿಕೊಂಡಿದ್ದೀರಿ. ಗುಂಪುಗಳನ್ನು ಕಿತ್ತುಹಾಕಲಾಗಿದೆ. ಕೇಂದ್ರದ ಅಧಿಕಾರಗಳನ್ನು ಕೇಂದ್ರ ಹಾಗೂ ಗುಂಪುಗಳಲ್ಲಿ ಮಾಡಿದ ವಿಂಗಡನೆಯನ್ನು ಕಿತ್ತುಹಾಕಲಾಗಿದೆ. ಕೆಲವು ಘಟಕಗಳನ್ನು ಕಿತ್ತುಹಾಕಲಾಗಿದೆ. ಪ್ರತಿಯೊಂದನ್ನೂ ರದ್ದುಗೊಳಿಸಲಾಗಿದೆ. ಪರಮಾಧಿಕಾರ ನಿಕಾಯವಾಗಿರುವ ನಾವು ಮೇ ೧೬ರ ಹೇಳಿಕೆಯಿಂದ ನಿರ್ಬಂಧಿತರಾಗಿಲ್ಲ. ಮೇ ೧೬ರ ಹೇಳಿಕೆಯಡಿ ಇದಕ್ಕೆ ಉಪಬಂಧ ಕಲ್ಪಿಸಲಾಗಿತ್ತು ಹಾಗೂ ನೀವು ಯಾವುದಕ್ಕೆ ಅವಕಾಶ ಕಲ್ಪಿಸಿದ್ದರೂ ೧೫ರ ಮಧ್ಯರಾತ್ರಿಯಿಂದ ಅದು ಅಳಿಸಿಹೋಯಿತು ಎಂಬ ಮಾತನ್ನು ಆಸರೆಯಾಗಿ ಬಳಸಿಕೊಳ್ಳುವುದು ತಪ್ಪು. ಈಗ ಯಾವುದೇ ದೋಷಗಳಿಲ್ಲ. ಬ್ರಿಟಿಷ್ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಂಗೀಕೃತವಾದ ಸ್ವಾತಂತ್ರ್ಯ ಅಧಿನಿಯಮವು ನಮ್ಮ ಮುಂದಿದೆ ಅದಕ್ಕೆ ನಾವು ತಿದ್ದುಪಡಿ ತರಬಹುದು. ನಿಮಗೆ ಹಕ್ಕನ್ನು ಕೊಡಮಾಡಲಾಗಿದೆ. ಮಾನ್ಯರೆ, ನಾವು ಮೇ ೧೬ರ ಹೇಳಿಕೆಯಡಿ ಆಸರೆ ತೆಗೆದುಕೊಳ್ಳುವುದು ತಪ್ಪು. ರಾಜ್ಯಗಳು ಒಳಬರುವುದಕ್ಕೆ ಸಿದ್ಧವಿಲ್ಲದಿದ್ದರೆ ಅವು ಹೊರಗೇ ಉಳಿಯಲಿ. ಆರ್ಥಿಕ ಒತ್ತಡ ಅಥವಾ ಇತರ ಮನವೊಲಿಸುವ ಕ್ರಮಗಳನ್ನು ಕೇಂದ್ರ ಸರ್ಕಾರವು ಬಳಸಿದರೆ ನಾವು ಅವುಗಳನ್ನು ಒಳಗೆ ತರಬಹುದು. ಆದರೆ ರಾಜ್ಯಗಳು ಏನು ಮಾಡಬೇಕೆಂದು ನಮ್ಮ ಬಯಕೆ? ನಾವು ಅವುಗಳ ಅಧಿಕಾರವನ್ನು ಕಿತ್ತುಕೊಳ್ಳಲು ಬಯಸುವುದಿಲ್ಲ. ಒಕ್ಕೂಟದ ಘಟಕಗಳಾಗಿರುವ ಅವುಗಳನ್ನು ಹಾಗೇ ಮಾಡಲು ನಾವು ಬಯಸುತ್ತೇವೆ ಘಟಕಗಳು ಬೇರೆ ಅಧಿಕಾರಗಳು ಪ್ರಕಾರ್ಯಗಳು ಹಾಗೂ ತೆರಿಗೆ ನಿರ್ವಹಣೆಯನ್ನು ಚಲಾಯಿಸುವುದನ್ನು ನಾವೆಲ್ಲಿಯೂ ಕೇಳಿಲ್ಲ. ಇದು ನಿಜವಾಗಿಯೂ ಪ್ರಜಾಪ್ರಭುತ್ವದ ನಿಲುವಿಗೆ ತಕ್ಕುದಾಗಿದ್ದು ಈ ಕುರಿತು ಶಾಂತವಾಗಿ ಯೋಚಿಸಿ ನಿರ್ಧರಿಸಬೇಕೆಂದು ಭಾರತೀಯ ರಾಜ್ಯಗಳ ಬಗ್ಗೆ ಯಾವುದೇ ದುರುದ್ದೇಶವನ್ನಿರಿಸಿಕೊಳ್ಳಬಾರದೆಂದು ನಾನು ಸಂವಿಧಾನ ರಚನಾ ಸಭೆಯ ಸ್ನೇಹಿತರನ್ನು ವಿನಂತಿಸುತ್ತೇನೆ. ಈ ಬಗ್ಗೆ ನಾವು ಮುಕ್ತಮನಸ್ಸಿನಿಂದ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು ಹಾಗೂ ಭಾರತೀಯ ರಾಜ್ಯಗಳೂ ಪ್ರಾಮಾಣಿಕತೆಯಿಂದ ಇರಬೇಕು. ನನ್ನ ಸ್ನೇಹಿತರಾದ ಪಂಡಿತ್ ಶುಕ್ಲ ಮಧ್ಯಪ್ರಾಂತ್ಯಗಳ ಬಗ್ಗೆ ಹಕ್ಕನ್ನು ಕೇಳದಿರುವಾಗ ರಾಜ್ಯಗಳೇಕೆ ಕೇಳಬೇಕು? ಅವರು ಅಷ್ಟು ಅಧಿಕಾರದಿಂದ ತೃಪ್ತರಾಗಿದ್ದರೆ ಮಧ್ಯಪ್ರಾಂತ್ಯದಲ್ಲಿರುವ ರೇವಾ ಮತ್ತಿತರ ರಾಜ್ಯಗಳು ಹೆಚ್ಚಿನ ಹಕ್ಕಿಗಾಗಿ ಏಕೆ ಕೇಳಬೇಕು? ಇದು ಕೇವಲ ಸಮಾನತೆ ಹಾಗೂ ನ್ಯಾಯದ ಅಂಶ. ಎಂದರೆ ಈ ಎರಡು ವಿಷಯಗಳಲ್ಲಿ ಏಕರೂಪತೆ ಇರಬೇಕು. ತೆರಿಗೆ

ಅಥವಾ ಶಾಸನ ಎರಡೂ ವಿಷಯಗಳಲ್ಲಿಯೂ ಭಾರತೀಯ ರಾಜ್ಯಗಳಿಗೆ ಘಟಕಗಳಿಗಿಂತ ಯಾವುದೇ ಹೆಚ್ಚಿನ ಅಧಿಕಾರವಿರಬಾರದು.

**ಮಾನ್ಯ ಸಭಾಧ್ಯಕ್ಷರು :** ಬೇರೆ ಯಾರೂ ಮಾತನಾಡಲು ಬಯಸುವುದಿಲ್ಲವೆಂದು ತೋರುತ್ತದೆ ನಾನು ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಈಗ ೧ ಗಂಟೆಗೆ ೫ ನಿಮಿಷವಿದೆ.

**ಒಬ್ಬ ಗೌರವಾನ್ವಿತ ಸದಸ್ಯರು :** ಮುಕ್ತಾಯ.

**ಇನ್ನೊಬ್ಬ ಗೌರವಾನ್ವಿತ ಸದಸ್ಯರು :** ಮಾನ್ಯರೆ, ಇದು ಅನುಚಿತ

**ಮಾನ್ಯ ಸಭಾಧ್ಯಕ್ಷರು :** ಒಬ್ಬರು ಈ ಕುರಿತು ಮಾತನಾಡಿದ್ದಾರೆ. ಈ ಬಗ್ಗೆ ಇನ್ನಷ್ಟು ಚರ್ಚೆಯಾಗಬೇಕೆಂದು ಸದನ ಬಯಸುತ್ತದೆಯೇ?

**ಅನೇಕ ಗೌರವಾನ್ವಿತ ಸದಸ್ಯರು :** ಹೌದು ಮಾನ್ಯರೆ.

**ಮಾನ್ಯ ಸಭಾಧ್ಯಕ್ಷರು :** ಯಾರಾದರೂ ಮಾತನಾಡುವವರಿದ್ದರೆ ಐದು ನಿಮಿಷ ಮಾತನಾಡಬಹುದು. ಇನ್ನೂ ಐದು ನಿಮಿಷ ಇದೆ.

**ಶ್ರೀ ಕೆ. ಸಂತಾನಮ್ :** ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಅಧಿಕಾರಗಳ ಸಮಿತಿ ಮಂಡಿಸಿದಂತೆ ಅಧಿಕಾರಗಳ ವಿತರಣೆಯ ವಿವರಗಳ ಕುರಿತು ನಾನು ಮಾತನಾಡುವುದಿಲ್ಲ. ವಿಷಯ ಚರ್ಚೆಗೆ ಬಂದಾಗ ಪ್ರತಿಯೊಂದು ಅಂಶದ ಬಗ್ಗೆ ನನಗೆ ನನ್ನದೇ ಆದ ವಿಚಾರಗಳಿವೆ. ಆದರೆ ಈ ಅಂಶಗಳು ಚರ್ಚೆಗೆ ಬಂದಾಗ ನಾವು ಬೇರೆ ಕೆಲವು ವಿಚಾರಗಳನ್ನು ಪರಿಗಣಿಸಬೇಕಾಗುತ್ತದೆ. ಕಳೆದ ಆರು ತಿಂಗಳಲ್ಲಿ ರಾಜಕೀಯದಲ್ಲಿ ಬಹಳ ಹೊಯ್ದಾಟಗಳಾಗಿದ್ದು ನಮ್ಮ ನಾಯಕರ ಮನಸ್ಸೂ ಸಾಕಷ್ಟು ಅಲ್ಲೋಲಕಲ್ಲೋಲವಾಗಿದೆ. ಕ್ಯಾಬಿನೆಟ್ ಮಿಷನ್ ಯೋಜನೆಯಲ್ಲಿ ಘಟಕಗಳು ಪೂರ್ಣಸ್ವಾಯತ್ತತೆ ಹಾಗೂ ಪರಮಾಧಿಕಾರ ಹೊಂದಿದ್ದು ಕೇಂದ್ರಕ್ಕೆ ಸ್ವಲ್ಪ ಅಧಿಕಾರವನ್ನು ಬಿಟ್ಟುಕೊಡಬೇಕು ಎಂದು ಯೋಚನೆ ಮಾಡಲಾಗಿತ್ತು. ಗುಂಪು ರಚನೆಯೊಂದು ಗೊಂದಲದ ವಿಷಯವಾಗಿದ್ದು ಪ್ರತಿಯೊಂದು ಸಂದಿಗ್ಧಮಯವಾಗಿತ್ತು. ಆದರೆ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಅದರ ಅಧಿಕಾರಗಳು ಸೀಮಿತವಾಗಿದ್ದವು. ನಮ್ಮ ಪೈಕಿ ಕೆಲವು ನಾಯಕರನ್ನೊಳಗೊಂಡ ಒಂದು ಸಮಿತಿಗೆ ಆ ಅಧಿಕಾರಗಳನ್ನು ಪರಿಭಾಷಿಸುವಂತೆ ತಿಳಿಸಲಾಯಿತು. ಅವರೂ ಆ ಅಧಿಕಾರಗಳನ್ನು ವಿಸ್ತೃತಗೊಳಿಸಲು ಸಾಧ್ಯವಾದಷ್ಟು ಯತ್ನಿಸಿದರು. ಕ್ಯಾಬಿನೆಟ್ ಮಿಷನ್ ಯೋಜನೆಯ ಕಾರ್ಯಾಚರಣೆ ಪ್ರಾರಂಭವಾಗಿದ್ದಿದ್ದರೆ ವಿಸ್ತೃತಗೊಳಿಸುವ ಪ್ರಯತ್ನದ ಪರಿಶೀಲನೆಯಾಗುತ್ತಿತ್ತೇನೊ. ಆದರೆ ಜೂನ್ ೩ರ ಯೋಜನೆಯಿಂದ ಈ ಸ್ಥಿತಿ ಬದಲಾಗಿ, ಸ್ವಾತಂತ್ರ್ಯ ಅಧಿನಿಯಮ ರಚಿತವಾಯಿತು. ನಾವು ಈಗ ಏಕಾತ್ಮಕ ಕೇಂದ್ರ(ಸರ್ಕಾರ)ವನ್ನು ಹೊಂದಿದ್ದು ಅದೂ ಕೆಲವು ಅಧಿಕಾರಗಳನ್ನು ಪ್ರಾಂತ್ಯಗಳಿಗೆ ಬಿಟ್ಟುಕೊಡಲು ಪ್ರಯತ್ನಿಸುತ್ತಿದೆ ಮತ್ತು ಕೇಂದ್ರ ಅಧಿಕಾರಗಳ ಸಮಿತಿಯ ಯೋಜನೆಯೂ ಅದೇ ಕಾರ್ಯವಿಧಾನವನ್ನೇ ಆಧರಿಸಿದೆ. ಅವರು ಭಾರತ ಸರ್ಕಾರದ ಅಧಿನಿಯಮವನ್ನು ಆಧಾರವಾಗಿರಿಸಿಕೊಂಡು ಯಾವ ವಿಷಯಗಳನ್ನು ಪ್ರಾಂತೀಯ ಪಟ್ಟಿಯಿಂದ ಸಮವರ್ತಿ ಪಟ್ಟಿಗೆ ಹಾಗೂ ಪ್ರಾಂತೀಯ ಪಟ್ಟಿಯಿಂದ ಒಕ್ಕೂಟ ಪಟ್ಟಿಗೆ ವರ್ಗಾಯಿಸಬಹುದೆಂಬುದನ್ನು ಪರಿಶೀಲಿಸಿದ್ದಾರೆ. ಅವರು ಸಮಸ್ಯೆಯ ಬಗ್ಗೆ ತಳೆದಿರುವ ನಿಲುವು ತಪ್ಪಾಗಿದೆ ಎಂದು ನನ್ನ ಭಾವನೆ. ಈ ದೇಶಕ್ಕೆ ಬಲಶಾಲಿ ಸರ್ಕಾರ ಬೇಕು ಎಂಬ ಕಾತರತೆ ನನ್ನಲ್ಲಿಯೂ ಇದೆ. ಆದರೆ ಕೇಂದ್ರದ ಬಲ ಕುರಿತಂತೆ ನನ್ನ ಪರಿಕಲ್ಪನೆ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯಲ್ಲಿರುವುದಕ್ಕಿಂತ ಭಿನ್ನವಾಗಿದೆ. ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರವನ್ನೇ ಹೊಣೆಯಾಗಿಸಬೇಕೆಂದು ನಾನು ಬಯಸುವುದಿಲ್ಲ. ಪ್ರಾಂತ್ಯಗಳ ಜನತೆಯ ಒಳಿತಿಗೆ ಪ್ರಾಥಮಿಕ ಜವಾಬ್ದಾರಿ ಪ್ರಾಂತೀಯ ಸರ್ಕಾರಗಳದೇ ಆಗಿರಬೇಕು. ಇಡೀ ಭಾರತಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರ ಹೊಣೆವಹಿಸಿ ಮುಖ್ಯರಂಗಕ್ಕೆ ಬರಬೇಕು. ಆದ್ದರಿಂದ ಕೇಂದ್ರದ ಬಲ, ಅಖಿಲ ಭಾರತ ವಿಷಯಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಅಧಿಕಾರವನ್ನು

ಹೊಂದಿರುವುದರಲ್ಲಿ ಇದೆಯಷ್ಟೇ ಅಲ್ಲ ಅಖಿಲ ಭಾರತಕ್ಕೆ ಸಂಬಂಧಿಸಿರದ ವಿಷಯಗಳ ಹೊಣೆಯಿಂದ ಮುಕ್ತವಾಗಿದ್ದು, ಅದು ಪ್ರಾಂತೀಯ ಮಿತಿಗೆ ಸಂಬಂಧಪಟ್ಟಿರುವಂತೆ ಮಾಡುವುದರಲ್ಲಿ ಇರಬೇಕು. ಹೀಗೆ ನಿಜವಾದ ಒಕ್ಕೂಟ ವ್ಯವಸ್ಥೆ ಎಂದರೆ ಅಧಿಕಾರಗಳ ಸಕಾರಾತ್ಮಕ ಹಾಗೂ ನಕಾರಾತ್ಮಕ ಪರಿಮಿತಿ ನಿರ್ಣಯ, ಸಮಿತಿ ವರದಿಯಲ್ಲಿ ಒಕ್ಕೂಟದ ಅಧಿಕಾರಗಳನ್ನು ತಪ್ಪು ರೀತಿಯಲ್ಲಿ ಪರಿಭಾಷಿಸಲಾಗಿದೆ ಎಂದು ನನ್ನ ಭಾವನೆ. ಅದು ಕೇಂದ್ರದ ಮೇಲೆ ಎಲ್ಲ ರೀತಿಯ ಅಧಿಕಾರಗಳ ಭಾರವನ್ನು ಹೇರಲು ಯತ್ನಿಸಿದೆ. ಆದರೆ ಅದು ಹಾಗಿರಬಾರದು. ಉದಾಹರಣೆಗೆ, ಅಲೆಮಾರಿ ಜೀವನವನ್ನು ಪ್ರಾಂತೀಯ ಪಟ್ಟಿಯಿಂದ ತೆಗೆದು ಸಮವರ್ತಿ ಪಟ್ಟಿಗೆ ಏಕೆ ಹಾಕಲಾಗಿದೆ ನನಗೆ ತಿಳಿಯದು. ಅಲೆಮಾರಿಗಳ ಬಗ್ಗೆ ತಲೆಕೆಡಿಸಿಕೊಳ್ಳುವಂಥದು ಅಖಿಲ ಭಾರತ ವಿಷಯವೇ? ಎಲ್ಲ ವಿಧದ ಅಧಿಕಾರಗಳನ್ನು ಕೇಂದ್ರಕ್ಕೆ ವಹಿಸಿದರೆ ಅದನ್ನು ಬಲಗೊಳಿಸಬಹುದು ಎಂಬ ವ್ಯಾಮೋಹ ಇರುವಂತೆ ತೋರುತ್ತದೆ. ಮಾನ್ಯರೆ, ಇನ್ನೊಂದು ವಿಷಯ ಹಣಕಾಸು ಯೋಜನೆ. ಇದನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಯೋಜನೆ ಎಂಬುದು ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಮೊದಲ ಆದ್ಯತೆಯಾಗಿದ್ದು, ನಾವು ಕೇಂದ್ರ ಹಾಗೂ ಪ್ರಾಂತ್ಯಗಳ ಕಾರ್ಯನೀತಿಗಳನ್ನು ಸಮನ್ವಯಗೊಳಿಸಲು ಪ್ರಯತ್ನಿಸಬೇಕು. ಹೀಗಿರುವಾಗ ಅದನ್ನು ಸಮವರ್ತಿಪಟ್ಟಿಗೆ ಹಾಕಿರುವುದು ಸರಿಯೇ? ಕೇಂದ್ರವು ಯಾವುದೇ ಅಧಿಕಾರವನ್ನು ವಹಿಸಿಕೊಂಡು, ಕೃಷಿಯಂಥ ಪ್ರಾಂತೀಯ ವಿಷಯಗಳಲ್ಲೂ ಯಾವುದೇ ಘಟಕವು ತನ್ನದೇ ರೀತಿಯಲ್ಲಿ ಯೋಜಿಸುವುದನ್ನು ತಡೆಯುವುದೇ? ಹೈನುಗಾರಿಕೆ ವಿಷಯದಲ್ಲಿಯೂ ಕೇಂದ್ರವು ಒಂದು ವಿಧೇಯಕವನ್ನು ಅಂಗೀಕರಿಸಿ ತನ್ನ ವಿವೇಚನಾನುಸಾರ ತಾನೇ ಅಧಿಕಾರ ತೆಗೆದುಕೊಳ್ಳುತ್ತದೆ. ನಾನು ಹೇಳುವುದಿಷ್ಟೇ, ಯೋಜನೆಯಂಥ ಮಹತ್ತ್ವದ ವಿಷಯುವನ್ನು ಸಮವರ್ತಿ ಪಟ್ಟಿಯ ವಿಷಯಗಳಲ್ಲೊಂದಾಗಿ ಸೇರಿಸಿದ್ದೇವೆ ಎಂದು ಕೇವಲ ಹೇಳದೇ ಪ್ರಾಂತೀಯ ಸರ್ಕಾರಗಳಿಗೆ ಯಾವ ಯೋಜನಾಧಿಕಾರಗಳನ್ನು ನೀಡಬೇಕು ಹಾಗೂ ಸಮಾಲೋಚನೆ ಹಾಗೂ ಸಮ್ಮತಿಯ ಮೂಲಕ ಹೇಗೆ ಅಧಿಕಾರಗಳನ್ನು ಸಮನ್ವಯಗೊಳಿಸಬೇಕು ಎಂಬುದನ್ನು ನಿರ್ಧರಿಸಲು ಇದನ್ನು ಕೇಂದ್ರ ಸಂರಚನೆಯ ಪ್ರತ್ಯೇಕ ಭಾಗವಾಗಿ ಪರಿಗಣಿಸಬೇಕು.

ಮುಂದಿನದು ಹಣಕಾಸಿನ ವಿತರಣೆ. ಭೂಕಂದಾಯ ಮತ್ತು ಮಾದಕ ಪಾನೀಯದ ಮೇಲಿನ ಸುಂಕ ಮತ್ತಿತರ ಒಂದೆರಡು ವಿಷಯಗಳನ್ನು ಹೊರತುಪಡಿಸಿ ಮಿಕ್ಕೆಲ್ಲ ತೆರಿಗೆ ವಿಷಯವನ್ನು ಒಕ್ಕೂಟ ಪಟ್ಟಿಯಲ್ಲಿ ಸೇರಿಸಲಾಗಿದೆ. ವಹಿಸಿಕೊಡುವಿಕೆಗೆ ಉಪಬಂಧ ಕಲ್ಪಿಸಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ. ಕೆಲವು ವಿಷಯಗಳೊಂದಿಗೆ ಉತ್ಪನ್ನಗಳ ಪಾಲನ್ನು ಹಂಚುವ ವಿಧಾನಕ್ಕೆ ಏರ್ಪಾಡು ಕಲ್ಪಿಸದಿದ್ದರೆ ಪ್ರಾಂತ್ಯಗಳು ಕೇಂದ್ರದೆದುರಿಗೆ ದೀನವಾಗಿ ಕೈಯೊಡ್ಡಿ ನಿಲ್ಲಬೇಕಾಗುತ್ತದೆ. ಯಾವ ಘಟಕವೂ ಕೇಂದ್ರದ ಮುಂದೆ 'ನಾನು ನನ್ನ ಜನತೆಗೆ ಶಿಕ್ಷಣ ಒದಗಿಸಲಾರೆ, ನೈರ್ಮಲ್ಯ ಒದಗಿಸಲಾರೆ ರಸ್ತೆ, ಕೈಗಾರಿಕೆ, ಪ್ರಾಥಮಿಕ ಶಿಕ್ಷಣ ಸುಧಾರಣೆಗೆ ಭಿಕ್ಷೆ ನೀಡಿ' ಎಂದು ಕೇಳುವ ಸ್ಥಿತಿ ಇರುವ ಸಂವಿಧಾನ ನಮಗೆ ಬೇಡ. ನಾವು ಒಕ್ಕೂಟ ವ್ಯವಸ್ಥೆಯನ್ನು ಕಿತ್ತುಹಾಕಿ (ಏಕಾತ್ಮಕ) (ಯೂನಿಟರಿ) ವ್ಯವಸ್ಥೆಯನ್ನು ಸ್ವೀಕರಿಸೋಣ. ಇಂದು ನಮ್ಮ ಹಣಕಾಸು ಸ್ಥಿತಿ ಹೇಗಿದೆ ಎಂದರೆ ತೆರಿಗೆ ವಿಧಿಸುವಿಕೆಯ ಎಲ್ಲ ಅಧಿಕಾರವನ್ನೂ ಕೇಂದ್ರಕ್ಕೆ ಕೊಟ್ಟರೂ ಕೇಂದ್ರಕ್ಕೆ ಸಾಕಷ್ಟು ಆದಾಯ ಸಿಗುವುದಿಲ್ಲ. ತೆರಿಗೆಯ ಎಲ್ಲ ಅಧಿಕಾರವನ್ನು ಪ್ರಾಂತ್ಯಗಳಿಗೆ ನೀಡಿದರೂ ಪ್ರಾಂತ್ಯಗಳಿಗೂ ಸಾಕಷ್ಟು ಹಣ ಸಿಗುವುದಿಲ್ಲ. ಸಾರ್ಜಂಟ್ ಸಮಿತಿ ವರದಿ ಮೇರೆಗೆ ಪ್ರಾಂತ್ಯ ಹಾಗೂ ಕೇಂದ್ರಗಳೆರಡರ ಒಗ್ಗೂಡಿಸಿದ ಹಣಕಾಸು ಪ್ರಾಥಮಿಕ ಶಿಕ್ಷಣ ಅಂಶವೊಂದಕ್ಕೇ ಬೇಕಾಗುತ್ತದೆ. ಅಂತೆಯೇ ಭೋರ್ ಸಮಿತಿಯ ವರದಿ ಪ್ರಕಾರ, ಪ್ರಾಂತ್ಯ ಕೇಂದ್ರಗಳೆರಡರ ಒಟ್ಟು ತೆರಿಗೆ ಹಣಕಾಸು ೩೦೦ ಕೋಟಿ ರೂ. ಸಾರ್ವಜನಿಕ ಆರೋಗ್ಯಕ್ಕೆ ಬೇಕಾಗುತ್ತದೆ. ರಕ್ಷಣಾ ವಿಷಯವನ್ನು ನೋಡಿದರೆ ನೌಕಾದಳ, ವಾಯುದಳ, ಭೂದಳ ಇವುಗಳಲ್ಲಿ ಯಾವ ಒಂದು ಅಂಶಕ್ಕೆ ಎಷ್ಟು ಹಣ ವೆಚ್ಚ ಮಾಡಲಾದೀತು? ಇವುಗಳಲ್ಲಿ ಒಂದೊಂದು ಅಂಶಕ್ಕೆ ಸಾಕಾಗುವಷ್ಟು

ಹಣ ನಮ್ಮಲ್ಲಿಲ್ಲ. ಆದ್ದರಿಂದ ನಾವು ಇನ್ನು ಮುಂದೆ ಒಂದು ಶಾಸನದ ಮೂಲಕ ನ್ಯಾಯ ಸಮ್ಮತ ರೀತಿಯಲ್ಲಿ ಹಂಚಿಕೆ ಮಾಡಬೇಕೇ ಹೊರತು ಯಾವುದೋ ತಪ್ಪಿಸಿಕೊಳ್ಳುವ ವಿಧಾನವನ್ನು ಆಧರಿಸಬಾರದು. ನಾವು ಈಗ ಇರುವ ಹಣಕಾಸನ್ನು ನ್ಯಾಯಸಮ್ಮತವಾಗಿ ವಿನಿಯೋಗಿಸುವುದಕ್ಕೆ ತೊಡಗಿ ಅನಂತರ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸೋಣ. ಹೆಚ್ಚಿನ ಪರಿಶೀಲನೆ ಜಾಗರೂಕ ಹೊಂದಾಣಿಕೆ ಇಲ್ಲದೇ ಅಧಿಕಾರಗಳ ಹಂಚಿಕೆಯೆಂದರೆ ಮೂರು ವರ್ಷಗಳಲ್ಲಿ ಪ್ರಾಂತಗಳು ಕೇಂದ್ರದ ವಿರುದ್ಧ ಬಂಡೇಳುವಂತಾಗಿ ಕೇಂದ್ರ ಮಂತ್ರಾಲಯವು ದಯನೀಯ ಸ್ಥಿತಿ ತಲಪುತ್ತದೆ. ನಮ್ಮ ಸಂರಚನೆಯ ಹೇಗಿರಬೇಕೆಂದರೆ ಆ ವ್ಯವಸ್ಥೆಯಲ್ಲಿ ಕೇಂದ್ರವು ಇದು ನನ್ನ ಕೆಲಸವಲ್ಲ, ಪ್ರೌಢ ಮಾತದಾನದ ಮೂಲಕ ಚುನಾಯಿತರಾದ ರಾಜ್ಯಪಾಲರಿದ್ದಾರೆ. ಸಚಿವರಿದ್ದಾರೆ. ಅವರನ್ನು ಸಂಪರ್ಕಿಸಿ, ಅವರಿಗೆ ನಾವು ಆದಾಯವನ್ನು ವರ್ಧಿಸಬಲ್ಲ ಸಂಪನ್ಮೂಲಗಳನ್ನು ನೀಡಿದ್ದೇವೆ ಎಂದು ಹೇಳುವಂತಾಗಬೇಕು. ಅಮೆರಿಕೆಯಲ್ಲಿ ಏನಾಗುತ್ತಿದೆ? ಕೇಂದ್ರ ಹಾಗೂ ರಾಜ್ಯಗಳೆರಡೂ ಎಲ್ಲ ವಿಧದ ತೆರಿಗೆ ವಿಧಿಸಬಹುದು. ವರಮಾನ ತೆರಿಗೆ ವಿಧಿಸಬಹುದು. ಜನತೆಯ ಇಚ್ಛೆಯಿದ್ದ ಹೊರತು ಯಾರೂ ಅವರನ್ನು ತಡೆಯಲಾರರು. ಸಚಿವರು ಅಥವಾ ರಾಜ್ಯಪಾಲರು ಜನತೆಯ ಬಳಿ ಹೋಗಿ ನಮಗೆ ತೆರಿಗೆ ವಿಧಿಸುವ ಅಧಿಕಾರವಿದೆ. ತೆರಿಗೆ ಸಂದಾಯ ಮಾಡಿರಿ, ನಾವು ನಿಮಗೆ ಮನರಂಜನೆ, ಸರ್ಕಸ್ ನಿಮಗೆ ಬೇಕಾದುದನ್ನೆಲ್ಲ ಕೊಡುತ್ತೇವೆ ಎಂದು ಹೇಳಬಹುದು. ಇದಕ್ಕೆ ವಿರುದ್ಧವಾಗಿ ಇಲ್ಲಿ ಕೇಂದ್ರ ನಮಗೆ ಹಣಕೊಟ್ಟರೆ ನಾವು ನಿಮಗೆ ಮನರಂಜನೆ ಕೊಡುತ್ತೇನೆ ಎಂದು ಹೇಳಬೇಕಾಗುತ್ತದೆ. ಅದು ಖೇದಕರ ಸ್ಥಿತಿ; ಕೇಂದ್ರದ ಪರಿಸ್ಥಿತಿ ದುರ್ಬಲವಾಗಿರುತ್ತದೆ. ಈ ವರದಿಯನ್ನು ನೀಡುತ್ತಿರುವ ನಾಯಕರಿಗೆ ನಾನು ಎಲ್ಲ ವಿಷಯಗಳನ್ನು ಕೇಂದ್ರಕ್ಕೆ ಸೇರಿಸದೆ ಜಾಗರೂಕರಾಗಿರುವಂತೆ ಎಚ್ಚರಿಕೆ ನೀಡಲು ಬಯಸುತ್ತೇನೆ.

ಕೈಗಾರಿಕೆಗಳ ವಿಷಯ ತೆಗೆದುಕೊಳ್ಳಿ. ರಕ್ಷಣಾ ಕೈಗಾರಿಕೆ ಕೇಂದ್ರದ ವಿಷಯ. ಒಕ್ಕೂಟ ಕೈಗಾರಿಕೆ ಎಂದು ಒಕ್ಕೂಟ ಶಾಸನ ಸಭೆಯು ಘೋಷಿಸುವ ಯಾವುದೇ ಕೈಗಾರಿಕೆ ಇನ್ನೊಂದು ವಿಷಯ. ಒಕ್ಕೂಟ ಶಾಸನ ಸಭೆಯು ತಾನು ತೆಗೆದುಕೊಳ್ಳದ ಇತರ ಬೇರೆ ಕೈಗಾರಿಕೆಯನ್ನು ಇತರ ಯಾವುದೇ ಕೈಗಾರಿಕೆ ವಿಷಯದ ಅಡಿ ರಕ್ಷಣೆಗಾಗಿ ಸಿದ್ಧತೆ ವಿಷಯದ ಅಡಿ ಪ್ರಾಂತೀಯ ಪಟ್ಟಿಗೆ ಸೇರಿಸಲಾಗುತ್ತದೆ. ಪ್ರಾಂತ್ಯಗಳೇನು ಮಾಡುತ್ತವೆ? ಆಗ ಪ್ರಾಂತ್ಯಗಳು ಆ ವಿಷಯವು ರಕ್ಷಣೆಗಾಗಿ ಮಾಡುವ ಸಿದ್ಧತೆಯ ವಿಷಯದ ಅಡಿ ಅಥವಾ ರಕ್ಷಣಾ ಕೈಗಾರಿಕಾ ವಿಷಯದ ಅಡಿ ಅಥವಾ ಒಕ್ಕೂಟ ಕೈಗಾರಿಕೆ ಎಂದು ಒಕ್ಕೂಟ ಕಾನೂನು ಘೋಷಿಸಿರುವ ಇತರ ಕೈಗಾರಿಕೆ ಎಂದು ಹೇಳಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವ ಹೊಣೆ ವಹಿಸಿಕೊಳ್ಳುವುದಿಲ್ಲ. ಕೇಂದ್ರವನ್ನು ಸಂಪರ್ಕಿಸಿ ಎಂದು ಹೇಳುತ್ತವೆ. ಇದು ನಾವು ಕೆಲಸ ಮಾಡಲು ಬಯಸುವ ರೀತಿಯೇ? ಮಾನ್ಯರೇ ಆಗದು. ಕಲ್ಲಿದ್ದಲು, ಉಕ್ಕು, ಅಂಥ ಇತರ ಉದ್ದಿಮೆಗಳು ಕೇಂದ್ರಕ್ಕೆ ಹಂಚಿಕೆಯಾಗಲಿ ಗುಡಿಕೈಗಾರಿಕೆ, ಮಧ್ಯಮ ಕೈಗಾರಿಕೆ ಆಹಾರ ಕೈಗಾರಿಕೆಯಂಥ ಇತರ ಕೈಗಾರಿಕೆಗಳು ಪ್ರಾಂತ್ಯಗಳಿಗೆ ಹಂಚಿಕೆಯಾಗಲಿ ಅದು ಸ್ವೀಕಾರಾರ್ಹವೆನಿಸುತ್ತದೆ.

ಒಂದು ವಾದ ಇದೆ: ಕೇಂದ್ರದಲ್ಲಿ ಯಾರಿದ್ದಾರೆ? ಅವರು ನಿಮ್ಮ ಪ್ರತಿನಿಧಿಗಳೇ. ನೀವು ಮಾಡಲು ಇಚ್ಛಿಸದಿರುವುದನ್ನು ಅವರು ಮಾಡಲಿ ಎಂದು ಏಕೆ ಬಯಸುತ್ತೀರಿ? ಇದು ನನಗೆ ತಪ್ಪಾಗಿ ತೋರುತ್ತದೆ. ಕೇಂದ್ರ ಶಾಸನಸಭೆಯ ಸದಸ್ಯನಾಗಿ ನಾನು ಯಾವಾಗಲೂ ಕೇಂದ್ರಕ್ಕೆ ಹೆಚ್ಚು ಹಣಬೇಕೆಂದು ಬಯಸಿದ್ದೇನೆ. ನನ್ನನ್ನು ಪ್ರಾಂತೀಯ ಶಾಸನಸಭೆಗೆ ಹಾಕಿದರೆ ನಾನು ಪ್ರಾಂತ್ಯಗಳಿಗೆ ಹೆಚ್ಚಿನ ಹಣವನ್ನು ಬಯಸುತ್ತೇನೆ. ನಾವು ಯಾವ ಅಂಗಕ್ಕೆ ಸೇರುತ್ತೇವೊ ಅದು ನೀಡುವ ಸ್ಫೂರ್ತಿ ಅಂಥದು. ಅದು ನಮ್ಮ ಶಕ್ತಿ ಮೀರಿದ್ದು, ಕೇಂದ್ರವು ಕೇಂದ್ರದ ಅಧಿಕಾರಗಳನ್ನು ಮೊಟಕುಗೊಳಿಸದಂತೆ ನೋಡಿಕೊಳ್ಳಬೇಕು. ವಿಷಯಗಳು ಸುಸ್ಪಷ್ಟವಾಗಿರುವಂತೆ ಮಾಡುವ ಮೂಲಕ ಹಾಗೂ ವಿಷಯಗಳು ನ್ಯಾಯಾಲಯಗಳಿಂದ ನಿರ್ಧಾರವಾಗುವಂತೆ ಮಾಡುವ ಮೂಲಕ ನೀವು ಒಕ್ಕೂಟ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡಬಹುದು. ಎಲ್ಲ ಕೈಗಾರಿಕೆಗಳನ್ನು

ಕೇಂದ್ರದ ಕೈಯಲ್ಲಿ ಇರಿಸುವುದರಿಂದ ರಕ್ಷಣಾ ಕೈಗಾರಿಕೆಗಳನ್ನು ಒಕ್ಕೂಟ ಕೈಗಾರಿಕೆಗಳೆಂದು ಒಕ್ಕೂಟ ಕಾನೂನಿನ ಮೂಲಕ ಘೋಷಿತವಾದ ಕೈಗಾರಿಕೆಗಳನ್ನು ಕೇಂದ್ರಕ್ಕೆ ವಹಿಸುವುದರಿಂದ ಪ್ರಗತಿಗೆ ಅಡ್ಡಿಯಾಗುತ್ತದೆ.

ಭಾರತ ಸರ್ಕಾರ ಅಧಿನಿಯಮ ೧೯೩೫ನ್ನು ಅಂಗೀಕರಿಸುವಾಗ ಹಾಗೂ ೧೯೨೧ರ ಅಧಿನಿಯಮದಲ್ಲಿ ಸಂಸತ್ತು ನಾವು ವಿಶೇಷ ಅಧಿಕಾರಗಳನ್ನು ಹಾಗೂ ವಿವೇಚನಾಧಿಕಾರಗಳನ್ನು ನೀಡಿದ್ದೇವೆ ಆದರೆ ಅವು ಕಾರ್ಯಾಚರಣೆಗೆ ಬರುತ್ತವೆ ಎಂದು ತೋರುವುದಿಲ್ಲ ಎಂದು ಹೇಳಿತು. ಯಾವುದೇ ಒಂದು ಅಧಿಕಾರವನ್ನು ಪೂರ್ಣ ಪ್ರಮಾಣದಲ್ಲಿ ಚಲಾಯಿಸದಿರುವ ಉದಾಹರಣೆ ಇದೆಯೇ? ೯೩ನೇ ಪ್ರಕರಣವನ್ನು ಪರಾಕಾಷ್ಠೆಯ ಪ್ರಕರಣವೆಂದು ಪರಿಗಣಿಸಲಾಗಿತ್ತು. ಸಂವಿಧಾನವನ್ನು ಯಾರೂ ಅಮಾನತ್ತುಗೊಳಿಸಲಾರರೆಂದು ಸಂಸತ್ತಿನಲ್ಲಿ ಹೇಳಲಾಗಿತ್ತು. ಆದರೆ ಮೊದಲನೆಯ ದಿನವೇ ತಾಂತ್ರಿಕ ಕಾರಣಗಳಿಗಾಗಿ ಗವರ್ನರ್‌ರು ಆದೇಶಕ್ಕೆ ಸಹಿ ಹಾಕಿ ಸರ್ಕಾರವನ್ನು ತಮ್ಮ ಕೈಗೆ ತೆಗೆದುಕೊಂಡರು.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಕಳೆದ ಕೆಲವು ವರ್ಷಗಳಲ್ಲಿ ಕೇಂದ್ರವು ಯಾವುದೇ ಬೃಹತ್ ಉದ್ದಿಮೆಯನ್ನು ವಹಿಸಿಕೊಂಡಿದೆಯೇ ಎಂಬುದು ಮಾನ್ಯ ಸದಸ್ಯರಿಗೆ ನನ್ನ ಪ್ರಶ್ನೆ.

**ಶ್ರೀ ಕೆ. ಸಂತಾನಮ್ :** ಕಳೆದ ಕೆಲವು ವರ್ಷಗಳಿಂದ ಕೇಂದ್ರ ಸರ್ಕಾರವು ಪಾರ್ಶ್ವವಾಯು ಪೀಡಿತವಾದಂತಿದೆ. ಕಾರ್ಯನೀತಿ ಸಮಿತಿ ವರದಿಯಲ್ಲಿ ಎಲ್ಲ ಕೈಗಾರಿಕೆಗಳು ಕೇಂದ್ರದ ಅಧೀನದಲ್ಲಿರಬೇಕೆಂದು ಶಿಫಾರಸು ಮಾಡಲಾಗಿತ್ತು. ಯಾವುದೇ ಶಾಸನವನ್ನು ಮಂಡಿಸಿರಲಿಲ್ಲ. ಕೇಂದ್ರವು ಯಾವುವೇ ಕೈಗಾರಿಕೆಗಳನ್ನು ವಹಿಸಿಕೊಳ್ಳದಿರುವುದಕ್ಕೆ ಈ ರೀತಿ ಪಾರ್ಶ್ವವಾಯು ಪೀಡಿತರಂತೆ ಬಳಲುತ್ತಿದ್ದ ಸ್ಥಿತಿಯೇ ಕಾರಣ. ಹೊಸ ಸರ್ಕಾರವು ಹಲವು ಉದ್ದಿಮೆಗಳನ್ನು ವಹಿಸಿಕೊಂಡಿಲ್ಲವೆಂದರೆ ಅದಕ್ಕೆ ಪಾರ್ಶ್ವವಾಯು ತಗುಲಿದಂತಿದೆ ಎನಿಸುತ್ತದೆ. ಬಾಂಬೆಯು ಜವಳಿ ಉದ್ದಿಮೆಯನ್ನು ವಹಿಸಿಕೊಳ್ಳಬಹುದು ಎಂದು ಯಾರಾದರೂ ಹೇಳಿದರೆ ಅದನ್ನು ವಹಿಸಿಕೊಳ್ಳಲಾಗುತ್ತದೆ. ಹಾಲು ಕಲಬೆರಕೆಯಾಗುತ್ತದೆ ಎಂದು ಯಾರೋ ಹೇಳುತ್ತಾರೆ, ಹೈನು ಉದ್ದಿಮೆಯನ್ನು ವಹಿಸಿಕೊಳ್ಳೋಣ. ಅಧಿಕಾರಕ್ಕೆ ಮಿತಿಯೇ ಇಲ್ಲ. ಅಮೆರಿಕೆಯಲ್ಲಿಯೂ ಒಕ್ಕೂಟ ಸರ್ಕಾರವು ಹೆಚ್ಚು ಹೆಚ್ಚು ಅಧಿಕಾರವನ್ನು ವಹಿಸಿಕೊಳ್ಳುತ್ತ ನಡೆದಿದೆ.

ಆದ್ದರಿಂದ ಮಾನ್ಯರೇ ನಾವು ಎಚ್ಚರಿಕೆಯಿಂದಿರಬೇಕು. ಎಲ್ಲ ಅಧಿಕಾರವನ್ನು ಕೇಂದ್ರಕ್ಕೆ ಕೊಡುವುದು ಬೇಡ. ಘಟಕಗಳಿಗೂ ಸ್ವಲ್ಪ ಕೆಲಸ, ಕೆಲವು ಜವಾಬ್ದಾರಿಗಳು ಕೆಲವು ಸಂಪನ್ಮೂಲಗಳು ಇರಲಿ. ನಾವು ಹೀಗೆ ಮಾಡದಿದ್ದರೆ ನಮ್ಮ ಸಂವಿಧಾನಕ್ಕೆ ಭದ್ರ ಅಡಿಪಾಯ ಇರುವುದಿಲ್ಲ. ಎಲ್ಲವೂ ಮುರಿದು ಬೀಳುತ್ತದೆ. ನಾನು ನೀಡಲು ಬಯಸುತ್ತಿರುವ ಎಚ್ಚರಿಕೆ ಇದೇ.

**ಮಾನ್ಯ ಸಭಾಧ್ಯಕ್ಷರು :** ನಾಳೆ ಈ ಬಗ್ಗೆ ಇನ್ನಷ್ಟು ಚರ್ಚೆ ಇರುತ್ತದೆ.

**ಸ್ವಾತಂತ್ರ್ಯ ಅಧಿನಿಯಮ ಅಳವಡಿಕೆ ನಿಯಮಗಳು ಮುಂತಾದವುಗಳ ಪರಿಶೀಲನೆಗಾಗಿ ಮಾಡುವ ಸಮಿತಿಯ ಸಿಬ್ಬಂದಿಯ ಕುರಿತ ಪ್ರಕಟಣೆ.**

**ಮಾನ್ಯ ಸಭಾಧ್ಯಕ್ಷರು :** ಈ ಬಗ್ಗೆ ಮುಂದಿನ ಚರ್ಚೆ ನಾಳೆ ನಡೆಯುತ್ತದೆ. ನಾವು ಸಭೆಯನ್ನು ಮುಂದೂಡುವುದಕ್ಕೆ ಮುಂಚೆ ನಾನು ಒಂದು ಪ್ರಕಟಣೆಯನ್ನು ತಿಳಿಸಲು ಬಯಸುತ್ತೇನೆ.

ಶ್ರೀ ಮಾವಳಣಕರ್, ಶ್ರೀ ಹುಸೇನ್ ಇಮಾಮ್, ಶ್ರೀ ಪುರುಷೋತ್ತಮ ದಾಸ್ ಟಂಡನ್, ಡಾ. ಅಂಬೇಡ್ಕರ್, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್, ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್, ಹಾಗೂ ಶ್ರೀ ಬಿ.ಎಲ್.ಮಿಟ್ಟರ್ ಅವರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಆ ಸಮಿತಿಯು ಭಾರತ ಸ್ವಾತಂತ್ರ್ಯ ಅಧಿನಿಯಮ ಭಾರತ ಸರ್ಕಾರದ ಅಧಿನಿಯಮ ೧೯೩೫ರ ಅಳವಡಿಕೆಗಳು, ಶಾಸನಸಭೆಯ ನಿಯಮಗಳು ಹಾಗೂ ಸ್ಥಾಯೀ ಆದೇಶಗಳು, ಸಂವಿಧಾನ ರಚನಾಸಭೆಯಲ್ಲಿ ಜಾರಿಯಲ್ಲಿರುವ ನಿಯಮಗಳು ಹಾಗೂ ಸ್ಥಾಯಿ ಆದೇಶಗಳು ಮುಂತಾದವುಗಳನ್ನು ಪರಿಶೀಲಿಸಿ ಈ ಮುಂದಿನ ವಿಷಯಗಳ ಬಗ್ಗೆ ವರದಿ ಮಾಡುತ್ತದೆ:

(೧) ಭಾರತ ಸ್ವಾತಂತ್ರ್ಯ ಅಧಿನಿಯಮದಡಿ ಸಂವಿಧಾನ ರಚನಾಸಭೆಯ ಸ್ಪಷ್ಟ ಪ್ರಕಾರ್ಯಗಳಾವುವು?

(೨) ಸಂವಿಧಾನ ರಚನಾ ನಿಕಾಯವಾಗಿ ಸಂವಿಧಾನ ರಚನಾಸಭೆಯ ವ್ಯವಹಾರಗಳು ಹಾಗೂ ಅದರ ಇತರ ವ್ಯವಹಾರಗಳ ನಡುವೆ ಪ್ರತ್ಯೇಕತೆ ಕಲ್ಪಿಸಲು ಸಾಧ್ಯವೇ? ಸಂವಿಧಾನ ರಚನಾಸಭೆಯು ತನ್ನ ಮೊದಲನೇ ಪ್ರಕಾರ್ಯಕ್ಕಾಗಿಯೆಂದರೆ ಕೆಲವು ದಿನ ಅಥವಾ ಕಾಲವನ್ನು ಮೀಸಲಿಡಬಹುದೇ?

(೩) ಸಂವಿಧಾನ ರಚನಾಸಭೆಯಲ್ಲಿ ಭಾರತೀಯ ರಾಜ್ಯಗಳನ್ನು ಪ್ರತಿನಿಧಿಸುವ ಸದಸ್ಯರು ಸಂವಿಧಾನ ರಚನೆಗೆ ಸಂಬಂಧಿಸಿದ್ದರ ಅಥವಾ ಅವರು ಸಮ್ಮತಿಸಿದ ವಿಷಯಗಳಿಗೆ ಸಂಬಂಧಿಸಿದ ನಡವಳಿಗಳಲ್ಲಿ ಭಾಗವಹಿಸುವ ಹಕ್ಕನ್ನು ಅವರಿಗೆ ನೀಡಬಹುದೇ?

(೪) ಸಂವಿಧಾನ ರಚನಾಸಭೆ ಅಥವಾ ಅದರ ಸಭಾಧ್ಯಕ್ಷರು ಯಾವುದಾದರೂ ಹೊಸ ನಿಯಮಗಳು ಅಥವಾ ಸ್ಥಾಯಿ ಆದೇಶಗಳು ಇದ್ದರೆ ಅವುಗಳನ್ನು ಅಥವಾ ಈಗಿರುವ ನಿಯಮಗಳು ಅಥವಾ ಸ್ಥಾಯೀ ಆದೇಶಗಳಿಗೆ ಯಾವುವೇ ತಿದ್ದುಪಡಿಗಳಿದ್ದರೆ ಅವುಗಳನ್ನು ಮಾಡಬಹುದೇ?

ಇಂದು ಪ್ರಾತಃಕಾಲ ಚರ್ಚಿಸಿದ ಎಲ್ಲ ಅಂಶಗಳು ಇದರಲ್ಲಿ ಸೇರಿವೆ ಎಂದು ಭಾವಿಸುತ್ತೇನೆ. ನಾನು ಈ ಸಮಿತಿಯನ್ನು ರಚಿಸುತ್ತಿದ್ದು, ಅದು ಬೇಗನೆ ವರದಿ ನೀಡುತ್ತದೆಂದು ಭಾವಿಸುತ್ತೇನೆ.

**ಡಾ. ಪಿ.ಎಸ್. ದೇಶಮುಖ್ :** ಮಾನ್ಯರೆ ನಾನು ಒಂದು ಅಂಶವನ್ನು ಸೂಚಿಸಬಯಸುತ್ತೇನೆ. ಒಬ್ಬನೇ ಸದಸ್ಯ ಎರಡು ವಿಧಾನ ಮಂಡಲಗಳ ಸದಸ್ಯನಾಗಿರುವುದಕ್ಕೆ ಅನುಮತಿ ಇದೆಯೇ ಇಲ್ಲವೇ ಎಂಬುದರ ಪರೀಕ್ಷೆ. ಇನ್ನು ಮುಂದೆ ನಾವು...

**ಮಾನ್ಯ ಸಭಾಧ್ಯಕ್ಷರು :** ಇದು ಅಳವಡಿಕೆಗಳಲ್ಲಿ ಸೇರುತ್ತದೆಂದು ತೋರುತ್ತದೆ. ಸದನವನ್ನು ನಾಳೆ ಬೆಳಗಿನ ೧೦ ಗಂಟೆವರೆಗೆ ಮುಂದೂಡಲಾಗಿದೆ.

ಸದನವನ್ನು ೨೧ ಆಗಸ್ಟ್ ೧೯೪೭ರ ಗುರುವಾರದ ಬೆಳಗ್ಗೆ ೧೦ ಗಂಟೆಗೆವರೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ]*

**ಗೋಪ್ಯ**

**ಅನುಬಂಧ 'ಎ'**

ಸಂ. ಸಿಎ/೨೩/ಸಿಓಎಂ/೪೭

ಭಾರತದ ಸಂವಿಧಾನ ರಚನಾಸಭೆ

ಕೇಂದ್ರ ಅಧಿಕಾರಗಳ ಸಮಿತಿಯ ವರದಿ

ಇದರಿಂದ

ಪಂಡಿತ್ ಜವಾಹರಲಾಲ್ ನೆಹರು

ಅಧ್ಯಕ್ಷರು, ಕೇಂದ್ರ ಅಧಿಕಾರಗಳ ಸಮಿತಿ

ಇವರಿಗೆ

ಸಭಾಧ್ಯಕ್ಷರು

ಭಾರತದ ಸಂವಿಧಾನ ರಚನಾಸಭೆ

ಮಾನ್ಯರೆ,

೨೮ ಏಪ್ರಿಲ್ ೧೯೪೭ ರಂದು ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರೂ ನಮ್ಮ ಸಮಿತಿಯ ಪರವಾಗಿ ಸಂವಿಧಾನ ರಚನಾಸಭೆಗೆ ನಮ್ಮ ಮೊದಲನೇ ವರದಿಯನ್ನು ಸಲ್ಲಿಸಿದರು. ಹಾಗೆ ಮಾಡುವಾಗ ಅವರು ರಾಜಕೀಯ ಸ್ಥಿತಿಯಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ಮತ್ತು ಅದರಿಂದ ಸಮಿತಿಯ ಶಿಫಾರಸುಗಳ ಸ್ವರೂಪ ಹಾಗೂ ವ್ಯಾಪ್ತಿಯ ಮೇಲೆ ಆಗಬಹುದಾದ ಪರಿಣಾಮಗಳನ್ನು ಉಲ್ಲೇಖಿಸಿ ಮುಂದಿನ ಒಂದು ದಿನಾಂಕದಂದು ಪೂರಕ ವರದಿಯನ್ನು ಸಲ್ಲಿಸಲು ಅನುಮತಿ ಕೋರಿದರು. ಸದನವು ಅನುಮತಿ ನೀಡಿತು.

೨. ಆಗಿನಿಂದ ಬಹುಮುಖ್ಯ ಬದಲಾವಣೆಗಳಾಗಿವೆ. ದೇಶದ ಕೆಲವು ಭಾಗಗಳು ಪ್ರತ್ಯೇಕ ರಾಜ್ಯವನ್ನು ರಚಿಸಲು ಹವಣಿಸುತ್ತಿವೆ. ಮೇ ೧೬ರ ಹೇಳಿಕೆಯಲ್ಲಿ ಮಂಡಿಸಿದ ಯೋಜನೆಯನ್ನಾಧರಿಸಿ ಸಮಿತಿಯು ಕಾರ್ಯ ಮಾಡುತ್ತಿದ್ದು ಆ ಯೋಜನೆ ಕಾರ್ಯಗತವಾಗಿಲ್ಲ. ಅದರಲ್ಲೂ ವಿಶೇಷವಾಗಿ ನಾವು ಕೇಂದ್ರ ಅಧಿಕಾರಗಳ ವ್ಯಾಪ್ತಿಯ ಪರಿಮಿತಿಯಿಂದ ಬದ್ಧರಾಗಿಲ್ಲ ಆಗ ನಾವು ಪರಿಗಣಿಸಿದ ಮೊದಲನೇ ಅಂಶವೆಂದರೆ ಬದಲಾದ ಪರಿಸ್ಥಿತಿಯಲ್ಲಿ ಈ ಅಧಿಕಾರಗಳ ವ್ಯಾಪ್ತಿಯನ್ನು ವಿಸ್ತರಿಸಲು ಆಗುವುದಿಲ್ಲವೇ? ಈ ಅಂಶವನ್ನು ಕುರಿತು ನಿರ್ಧಾರ ಕೈಗೊಳ್ಳಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ಕ್ಯಾಬಿನೆಟ್ ಮಿಷನ್ ಯೋಜನೆಯಲ್ಲಿ ಕೇಂದ್ರ ಅಧಿಕಾರದ ವ್ಯಾಪ್ತಿಯ ಮೇಲೆ ಇದ್ದ ತೀವ್ರ ಪರಿಮಿತಿ ಎಂದರೆ ಕೇಂದ್ರದ ಆಡಳಿತದ ಅಗತ್ಯಗಳನ್ನು ಕುರಿತ ತನ್ನ ನಿರ್ಣಯಕ್ಕೆ ವ್ಯತಿರಿಕ್ತವಾಗಿ ಸಭೆಯು, ಮುಸ್ಲಿಂ ಲೀಗ್‌ಗೆ ಅವಕಾಶ ಕಲ್ಪಿಸುವುದಕ್ಕಾಗಿ ಹೊಂದಾಣಿಕೆ ಮಾಡಿಕೊಳ್ಳಲು ಸಿದ್ಧವಾಗಬೇಕಾಯಿತು. ಈಗ ವಿಭಜನೆಯ ಅಂಶ ನಿರ್ಧಾರವಾಗಿರುವುದರಿಂದ ದೇಶದಲ್ಲಿ ಶಾಂತಿಯನ್ನು ಕಾಪಾಡಲು, ಎಲ್ಲರಿಗೂ ಸಂಬಂಧಪಡುವ ಮಹತ್ತ್ವದ ವಿಷಯಗಳನ್ನು ಸಮನ್ವಯಗೊಳಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಡೀ ದೇಶದ ಬಗ್ಗೆ ಪರಿಣಾಮಕಾರಿಯಾಗಿ ಮಾತನಾಡುವ ಸಾಮರ್ಥ್ಯವಿಲ್ಲದ ದುರ್ಬಲ ಸರ್ಕಾರವನ್ನು ಕೇಂದ್ರದಲ್ಲಿ ರಚಿಸುವುದು ದೇಶದ ಹಿತದ ದೃಷ್ಟಿಯಿಂದ ಅಪಾಯಕರ ಎಂಬುದು ನಮ್ಮೆಲ್ಲರ ಒಮ್ಮತದ ಅಭಿಪ್ರಾಯವಾಗಿದೆ. ಅಲ್ಲದೇ ಘಟಕಗಳನ್ನೊಳಗೊಂಡ ಏಕಾತ್ಮಕ ದೇಶದ ಆಧಾರದ ಮೇಲೆ ಸಂವಿಧಾನವನ್ನು ರಚಿಸುವುದು ರಾಜಕೀಯವಾಗಿಯೂ ಆಡಳಿತಾತ್ಮಕವಾಗಿಯೂ ದೇಶದ ಹಿನ್ನಡೆಗೆ ಕಾರಣವಾಗುತ್ತದೆ ಎಂಬುದು ನಮ್ಮೆಲ್ಲರಿಗೂ ಸ್ಪಷ್ಟವಾಗಿ ಅರಿವಿದೆ. ಆದ್ದರಿಂದ ಕೇಂದ್ರದಲ್ಲಿ ಬಲಶಾಲಿ ಸರ್ಕಾರವುಳ್ಳ

ಒಕ್ಕೂಟ ವ್ಯವಸ್ಥೆಯೇ ನಮ್ಮ ದೇಶಕ್ಕೆ ತಕ್ಕುದಾದುದು ಎಂಬುದು ನಮ್ಮೆಲ್ಲರ ಹಾಗೂ ಕೇಂದ್ರ ಸಂವಿಧಾನ ಸಮಿತಿಯ ನಿರ್ಧಾರವಾಗಿದೆ. ಕೇಂದ್ರ ಹಾಗೂ ಘಟಕಗಳ ಮಧ್ಯೆ ಅಧಿಕಾರವನ್ನು ವಿತರಿಸುವ ವಿಷಯದಲ್ಲಿ ಭಾರತ ಸರ್ಕಾರ ಅಧಿನಿಯಮ ೧೯೩೫ರಲ್ಲಿ ಅನುಸರಿಸಿದ ರೀತಿಯಲ್ಲೇ ಎಂದರೆ ಒಕ್ಕೂಟ, ಪ್ರಾಂತೀಯ ಹಾಗೂ ಸಮವರ್ತಿ ಎಂದು ೩ ಪಟ್ಟಿಗಳನ್ನು ತಯಾರಿಸುವುದೇ ಸೂಕ್ತ ಮಾರ್ಗವೆನಿಸುತ್ತದೆ. ತದನುಸಾರವಾಗಿ ನಾವು ೩ ಪಟ್ಟಿಗಳನ್ನು ಸಿದ್ಧಪಡಿಸಿದ್ದು ಅವನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಮಿಕ್ಕ ಅಧಿಕಾರಗಳು ಕೇಂದ್ರದಲ್ಲೇ ಇರುತ್ತವೆ. ನಾವು ತಯಾರಿಸಿರುವ ಮೂರು ಪಟ್ಟಿಗಳ ಸ್ವರೂಪದ ದೃಷ್ಟಿಯಿಂದ ನೋಡಿದಾಗ ಮಿಕ್ಕ ವಿಷಯಗಳು ಎಂದರೆ ಭವಿಷ್ಯದಲ್ಲಿ ಮನ್ನಣೆ ಪಡೆಯಬಹುದಾದರೂ ಆದರೆ ಈಗ ಪಟ್ಟಿಯಲ್ಲಿ ತೋರಿಸಲಾಗದಿರುವುದರಿಂದ ಅವುಗಳನ್ನು ಪಟ್ಟಿಯಲ್ಲಿ ಸೇರಿಸಿಲ್ಲ.

೩. ನಾವು ಪ್ರಸ್ತಾವಿಸಿರುವ ಯೋಜನೆಯಲ್ಲಿ ರಾಜ್ಯಗಳ ಸ್ಥಾನವನ್ನು ಕುರಿತು ಹೇಳಲೇಬೇಕಾಗುತ್ತದೆ. ಸಂವಿಧಾನ ರಚನಾಸಭೆಗೆ ಸೇರ್ಪಡೆಯಾದ ರಾಜ್ಯಗಳು ಮೇ ೧೬ರ ಹೇಳಿಕೆಯನ್ನಾಧರಿಸಿ ಹಾಗೆ ಮಾಡಿವೆ. ಆ ಪೈಕಿ ಕೆಲವು ಹೇಳಿಕೆಗಳು ಉದ್ದೇಶಿಸಿದ್ದಕ್ಕಿಂತ ಹೆಚ್ಚು ಅಧಿಕಾರಗಳನ್ನು ಕೇಂದ್ರಕ್ಕೆ ಬಿಟ್ಟುಕೊಡುವ ಬಗ್ಗೆ ತಮ್ಮ ಸಮ್ಮತಿ ತಿಳಿಸಿವೆ. ಒಕ್ಕೂಟ ಪಟ್ಟಿಯ ವಿಷಯಗಳ ಅನ್ವಯವಾಗುವಿಕೆಯು ಮೇ ೧೬ರ ಹೇಳಿಕೆಯಾಚೆ ಎಲ್ಲ ರಾಜ್ಯಗಳಿಗೆ ಸಾಮಾನ್ಯವಾಗಿ ಅವುಗಳ ಒಪ್ಪಿಗೆಯಿಂದಲೇ ಆಗುವುದು ಅಗತ್ಯ ಎಂದು ನಾವು ಪರಿಗಣಿಸಿದ್ದೇವೆ. ಮಿಕ್ಕ ಅಧಿಕಾರಗಳ ಸಂಬಂಧದಲ್ಲಿ ಅವು ಕೇಂದ್ರದಲ್ಲಿ ನಿಹಿತವಾಗಿರುವುದು ರಾಜ್ಯಗಳಿಗೆ ಒಪ್ಪಿಗೆಯಿಲ್ಲವಾದರೆ ರಾಜ್ಯಗಳಲ್ಲೇ ನಿಹಿತವಾಗಿರುತ್ತವೆ ಎಂದರ್ಥ.

೪. ಕೇಂದ್ರಕ್ಕೆ ಹೆಚ್ಚಿನ ಅಧಿಕಾರವನ್ನು ಬಿಟ್ಟುಕೊಡುವುದು ಪ್ರಾಂತ್ಯಗಳಿಗೆ ಯುಕ್ತವೆಂದು ತೋರಿದರೆ ಅವುಗಳ ಸಂಬಂಧದಲ್ಲಿ ಮತ್ತು ಒಂದು ಅಥವಾ ಹೆಚ್ಚು ಘಟಕಗಳು ತಿಳಿಸಿದ ವಿಷಯಗಳಿಗೆ ಕಾನೂನು ಅನ್ವಯವಾಗುತ್ತದೆ ಅಥವಾ ತರುವಾಯದಲ್ಲಿ ಕಾನೂನನ್ನು ಅಳವಡಿಸಿಕೊಳ್ಳಲಾಗುತ್ತದೆ ಎಂದು ತಿಳಿದು ರಾಜ್ಯಗಳ ಸಂಬಂಧದಲ್ಲಿ ಒಕ್ಕೂಟ ಪ್ರದೇಶದೊಳಗೆ ಅಧಿಕಾರ ಚಲಾಯಿಸಲು ಒಕ್ಕೂಟ ಸರ್ಕಾರಕ್ಕೆ ಅಧಿಕಾರ ನೀಡಬೇಕೆಂದು ಶಿಫಾರಸು ಮಾಡುತ್ತೇವೆ. ಆಸ್ಟ್ರೇಲಿಯನ್ ಸಂವಿಧಾನ ಅಧಿನಿಯಮದ ೫೧(xxxvii) ನೇ ಪ್ರಕರಣದಲ್ಲಿ ವಿಧಿಸಲಾದಂತೆ ಆಸ್ಟ್ರೇಲಿಯನ್ ಮಾದರಿಯಲ್ಲಿ ಈ ವಿಧಾನವನ್ನು ರೂಪಿಸಲಾಗಿದೆ.

೫. ಭಾರತೀಯ ರಾಜ್ಯಗಳಲ್ಲಿ ಪೋಷಿಸಿ ನಿಯೋಜಿಸಿಕೊಳ್ಳಲಾದ ಸಶಸ್ತ್ರ ದಳಗಳ ಸಂಖ್ಯಾಬಲ, ಸಂಘಟನೆ ಹಾಗೂ ನಿಯಂತ್ರಣದ ಅಂಶವನ್ನು ಒಕ್ಕೂಟ ಪಟ್ಟಿಯಲ್ಲಿ ಸೇರಿಸಿದ್ದೇವೆ. ಹಾಗೆ ಮಾಡಲು ನಮಗಿರುವ ಉದ್ದೇಶವೇನೆಂದರೆ ಅಂಥ ದಳಗಳ ಸಮನ್ವಯ ಹಾಗೂ ನಿಯಂತ್ರಣದ ಸಂಬಂಧದಲ್ಲಿ ಈಗಿರುವ ಅಧಿಕಾರಗಳನ್ನು ಕಾಪಾಡಿಕೊಳ್ಳುವುದು.

೬. ಒಕ್ಕೂಟ ತೆರಿಗೆ ವಿಷಯದಲ್ಲಿ ನಮ್ಮ ಮೊದಲಿನ ವರದಿಯ ೨ ಡಿ ಕಂಡಿಕೆಯಲ್ಲಿನ ಪ್ರಸ್ತಾವಗಳ ಬಗ್ಗೆ ಸಭೆಗೆ ಶಿಫಾರಸು ಮಾಡುತ್ತೇವೆ. ನಾವು ನಿರ್ದಿಷ್ಟಪಡಿಸಿದ ಎಲ್ಲ ತೆರಿಗೆಗಳ ಉತ್ಪತ್ತಿಗಳನ್ನು ಒಕ್ಕೂಟವೇ ಉಳಿಸಿಕೊಳ್ಳುವುದರಿಂದ ಕೆಲವು ಸಲ ಘಟಕಗಳ ಆರ್ಥಿಕ ಸ್ಥಿರತೆಗೆ ತೀವ್ರ ತೊಂದರೆ ಉಂಟಾಗುವುದರಿಂದ ಒಕ್ಕೂಟವು ಕಾಲಕಾಲಕ್ಕೆ ಮಾಡುವ ನಿರ್ಧರಣೆಯನ್ನಾಧರಿಸಿ ಕೆಲವು ತೆರಿಗೆಗಳ ಉತ್ಪತ್ತಿಗಳ ಹಸ್ತಾಂತರ ಹಾಗೂ ಪಾಲು ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂದು ಶಿಫಾರಸು ಮಾಡುತ್ತೇವೆ.

ನವದೆಹಲಿ
ಜುಲೈ ೫, ೧೯೪೭

ತಮ್ಮ ವಿಧೇಯ
ಜವಾಹರಲಾಲ್ ನೆಹರು
ಅಧ್ಯಕ್ಷರು

## ಅನುಬಂಧ

### ಪಟ್ಟಿ–೧ ಒಕ್ಕೂಟ ವಿಧಾಯೀ ಪಟ್ಟಿ

೧. ರಕ್ಷಣೆಗಾಗಿ ಸಾಮಾನ್ಯವಾಗಿ ಎಲ್ಲ ಸಿದ್ಧತೆ ಮತ್ತು ಯುದ್ಧಕಾಲದಲ್ಲಿ ಯುದ್ಧ ನಡೆಸುವುದಕ್ಕಾಗಿ ಮತ್ತು ಯುದ್ಧವು ಕೊನೆಗೊಂಡ ಅನಂತರ ಪರಿಣಾಮಕಾರಿಯಾಗಿ ಸೈನ್ಯವನ್ನು ವಿಸರ್ಜನೆ ಮಾಡುವುದಕ್ಕಾಗಿ ಸಹಾಯಕವಾಗಬಹುದಾದ ಎಲ್ಲ ಕಾರ್ಯಗಳು ಸೇರಿದಂತೆ ಭಾರತದ ಮತ್ತು ಅದರ ಪ್ರತಿಯೊಂದು ಭಾಗದ ರಕ್ಷಣೆ.

೨. ತರಬೇತಿ ಮತ್ತು ದಳ ನಿಯೋಜನೆ ಸೇರಿದಂತೆ ರಕ್ಷಣಾ ಉದ್ದೇಶಗಳಿಗಾಗಿ ಭೂಮಿಗಾಗಿ ಕೋರಿಕೆ.

೩. ಕೇಂದ್ರ ಗುಪ್ತ ವಾರ್ತಾ ವಿಭಾಗ.

೪. ರಾಜ್ಯದ ಕಾರಣಗಳಿಗಾಗಿ ಅದರ ಪ್ರದೇಶಗಳಲ್ಲಿ ಪ್ರತಿಬಂಧಕ ಸ್ಥಾನಬದ್ಧತೆ.

೫. ಒಕ್ಕೂಟದ ಪ್ರದೇಶಗಳ ರಕ್ಷಣೆಗಾಗಿ, ಒಕ್ಕೂಟದ ಹಾಗೂ ಅದರ ಘಟಕಗಳ ಕಾನೂನುಗಳನ್ನು ಕಾರ್ಯಗತಗೊಳಿಸಲು ನೌಕಾ, ಭೂ ಹಾಗೂ ವಾಯುದಳಗಳ ಸೃಜನೆ, ತರಬೇತಿ, ನಿರ್ವಹಣೆ ಹಾಗೂ ನಿಯಂತ್ರಣ, ಭಾರತದ ರಾಜ್ಯಗಳಲ್ಲಿ ಸೃಜಿಸಿ, ನಿಯೋಜಿಸಲಾದ ಸಶಸ್ತ್ರ ದಳಗಳ ಬಲ, ಸಂಘಟನೆ ಮತ್ತು ನಿಯಂತ್ರಣ.

೬. ರಕ್ಷಣಾ ಉದ್ದಿಮೆಗಳು.

೭. ನೌಕಾ, ಭೂ, ವಾಯುದಳದ ಕಾಮಗಾರಿಗಳು.

೮. ದಂಡು ಪ್ರದೇಶಗಳ ಸೀಮಾ ನಿರ್ಣಯ, ಅಂಥ ಪ್ರದೇಶಗಳಲ್ಲಿ ಸ್ಥಳೀಯ ಸ್ವಯಂ ಆಡಳಿತ, ಅಂಥ ಪ್ರದೇಶಗಳೊಳಗೆ ದಂಡು ಪ್ರಾಧಿಕಾರಗಳ ರಚನೆ ಮತ್ತು ಅವುಗಳ ಅಧಿಕಾರಗಳು ಮತ್ತು ಅಂಥ ಪ್ರದೇಶಗಳಲ್ಲಿ ವಸತಿ ಸೌಕರ್ಯದ ವಿನಿಮಯ.

೯. ಶಸ್ತ್ರಗಳು, ಅಗ್ನಿ ಶಸ್ತ್ರಗಳು, ಮದ್ದುಗುಂಡುಗಳು ಮತ್ತು ಸ್ಫೋಟಕಗಳು.

೧೦. ಅಣುಶಕ್ತಿ, ಮತ್ತು ಅದರ ಉತ್ಪಾದನೆಗೆ ಅಗತ್ಯವಾದ ಖನಿಜ ಸಂಪತ್ತು.

೧೧. ವಿದೇಶ ವ್ಯವಹಾರಗಳು, ಒಕ್ಕೂಟ ಮತ್ತು ಯಾವುದೇ ವಿದೇಶದ ನಡುವೆ ಸಂಬಂಧವನ್ನುಂಟು ಮಾಡುವ ಎಲ್ಲ ವಿಷಯಗಳು.

೧೨. ರಾಜತಾಂತ್ರಿಕ, ಕೌನ್ಸ್ಯುಲರ್ ಮತ್ತು ವ್ಯಾಪಾರ ಪ್ರಾತಿನಿಧ್ಯ.

೧೩. ವಿಶ್ವಸಂಸ್ಥೆ.

೧೪. ಅಂತಾರಾಷ್ಟ್ರೀಯ ಸಮ್ಮೇಳನಗಳು, ಸಂಘಟನೆಗಳು ಮತ್ತು ಇತರ ನಿಕಾಯಗಳಲ್ಲಿ ಭಾಗವಹಿಸುವುದು ಮತ್ತು ಅಲ್ಲಿ ಕೈಗೊಂಡ ತೀರ್ಮಾನಗಳನ್ನು ಕಾರ್ಯಗತಗೊಳಿಸುವುದು.

೧೫. ಯುದ್ಧ ಮತ್ತು ಶಾಂತಿ.

೧೬. ವಿದೇಶಗಳೊಡನೆ ಕೌಲುಗಳನ್ನು ಮತ್ತು ಒಪ್ಪಂದಗಳನ್ನು ಮಾಡಿಕೊಳ್ಳುವುದು ಮತ್ತು ಕಾರ್ಯಗತಗೊಳಿಸುವುದು.

೧೭. ವಿದೇಶಗಳೊಡನೆ ವ್ಯಾಪಾರ ಮತ್ತು ವಾಣಿಜ್ಯ.

೧೮. ವಿದೇಶಿ ಸಾಲಗಳು.

೧೯. ನಾಗರಿಕತ್ವ, ದೇಶೀಕರಣ ಮತ್ತು ಅನ್ಯದೇಶೀಯರು.

೨೦. ಪ್ರತ್ಯರ್ಪಣ.

೨೧. ಪಾಸ್‌ಪೋರ್ಟ್‌ಗಳು ಮತ್ತು ವೀಸಾಗಳು.

೨೨. ವಿದೇಶೀಯ ಅಧಿಕಾರ ವ್ಯಾಪ್ತಿ.

೨೩. ರಾಷ್ಟ್ರಗಳ ಕಾನೂನಿಗೆ ವಿರುದ್ಧವಾಗಿ ಸಮುದ್ರ ಮಧ್ಯದಲ್ಲಿ ಮಾಡಿದ ಕಡಲುಗಳ್ಳತನ ಅಥವಾ ಘೋರ ಅಪರಾಧಗಳು ಅಥವಾ ವಾಯುಮಾರ್ಗದಲ್ಲಿ ಎಸಗಿದ ಅಪರಾಧಗಳು.

೨೪. ಒಕ್ಕೂಟದ ಪ್ರದೇಶದೊಳಗೆ ಪ್ರವೇಶ ನೀಡುವುದು ಮತ್ತು ಅದರಿಂದಾಚೆ ವಲಸೆ ಹೋಗುವುದು ಮತ್ತು ಹೊರಹಾಕುವುದು; ಭಾರತದ ಹೊರಗಿನ ಸ್ಥಳಗಳಿಗೆ ತೀರ್ಥಯಾತ್ರೆಗಳು.

೨೫. ಬಂದರಿನಲ್ಲಿ ಸಂಸರ್ಗ ನಿಷೇಧ ಸ್ಥಳಗಳು ಮತ್ತು ತತ್ಸಂಬಂಧೀ ಆಸ್ಪತ್ರೆಗಳು, ನಾವಿಕರ ಮತ್ತು ಸಮುದ್ರದ ಬಳಿ ಇರುವ ಆಸ್ಪತ್ರೆಗಳು.

೨೬. ಒಕ್ಕೂಟ ಸರ್ಕಾರವು ಪರಿಭಾಷಿಸಿದಂತೆ ಸುಂಕ ಸರಹದ್ದುಗಳಾಚೆ ಆಮದು ಮತ್ತು ರಫ್ತು.

೨೭. ೧೫ನೇ ಆಗಸ್ಟ್ ೧೯೪೭ರಂದು ಇಂಪೀರಿಯಲ್ ಗ್ರಂಥಾಲಯ, ಭಾರತೀಯ ವಸ್ತುಸಂಗ್ರಹಾಲಯ, ಇಂಪೀರಿಯಲ್ ಯುದ್ಧವಸ್ತು ಸಂಗ್ರಹಾಲಯ, ವಿಕ್ಟೋರಿಯ ಸ್ಮಾರಕ ಎಂದು ಹೆಸರುವಾಸಿಯಾಗಿದ್ದ ಸಂಸ್ಥೆಗಳು ಮತ್ತು ರಾಷ್ಟ್ರೀಯ ಮಹತ್ವದ ಸಂಸ್ಥೆ ಎಂದು ಒಕ್ಕೂಟ ಕಾನೂನಿನಿಂದ ಘೋಷಿಸಲಾದ ಇತರ ಯಾವುದೇ ಸಂಸ್ಥೆ.

೨೮. ೧೫ನೇ ಆಗಸ್ಟ್ ೧೯೪೭ರಂದು ಬನಾರಸ್ ಹಿಂದೂ ವಿಶ್ವವಿದ್ಯಾಲಯ ಮತ್ತು ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯ ಎಂದು ಹೆಸರಾಗಿದ್ದ ಸಂಸ್ಥೆಗಳು.

೨೯. ವಾಯುಮಾರ್ಗಗಳು.

೩೦. ಒಕ್ಕೂಟ ಸರ್ಕಾರವು ಒಕ್ಕೂಟ ರಾಷ್ಟ್ರೀಯ ಹೆದ್ದಾರಿಗಳು ಮತ್ತು ಜಲಮಾರ್ಗಗಳು ಎಂದು ಘೋಷಿಸಲಾದಂಥವು.

೩೧. ಯಂತ್ರಚಾಲಿತ ನೌಕೆಗಳ ಸಂಬಂಧದಲ್ಲಿ ರಾಷ್ಟ್ರೀಯ ಜಲಮಾರ್ಗಗಳೆಂದು ಒಕ್ಕೂಟ ಸರ್ಕಾರವು ಘೋಷಿಸಿದ ಒಳನಾಡು ಜಲಮಾರ್ಗಗಳ ಮೇಲೆ ಹಡಗುಯಾನ ಮತ್ತು ನೌಕಾ ಸಂಚಾರ, ಅಂಥ ಜಲ–ಮಾರ್ಗಗಳ ಮೇಲಿನ ಮಾರ್ಗನಿಯಮ; ಅಂಥ ಜಲಮಾರ್ಗಗಳ ಮೇಲೆ ಪ್ರಯಾಣಿಕರ ಹಾಗೂ ಸರಕುಗಳ ಸಾಗಣೆ.

೩೨. (ಎ) ಅಂಚೆ ಮತ್ತು ತಂತಿ, ಪರಂತು ಈ ಸಂವಿಧಾನವು ಪ್ರಾರಂಭವಾದಾಗ ಒಂದು ರಾಜ್ಯ ಘಟಕದ ಪರವಾಗಿ ಇರುವ ಹಕ್ಕುಗಳನ್ನು, ಒಕ್ಕೂಟ ಮತ್ತು ಸಂಬಂಧಪಟ್ಟ ರಾಜ್ಯ ಘಟಕದ ನಡುವಣ ಒಡಂಬಡಿಕೆಯ ಮೂಲಕ ಅವು ಮಾರ್ಪಾಡಾಗುವವರೆಗೆ ಅಥವಾ ರದ್ದಾಗುವವರೆಗೆ ಅಥವಾ ಒಕ್ಕೂಟವು ಅರ್ಜಿಸುವವರೆಗೆ ಕಾಯ್ದುಕೊಳ್ಳಬೇಕು. ಹಾಗಿದ್ದರೂ ಇದು ಅವುಗಳ ವಿನಿಮಯ ಹಾಗೂ ನಿಯಂತ್ರಣದ ಬಗ್ಗೆ ಕಾನೂನು ರಚಿಸುವ ಒಕ್ಕೂಟ ಸಂಸತ್ತಿನ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

(ಬಿ) ಒಕ್ಕೂಟದ ಒಡೆತನದಲ್ಲಿರಲಿ ಅಥವಾ ಇಲ್ಲದಿರಲಿ ದೂರವಾಣಿ, ವೈರ್‌ಲೆಸ್, ಪ್ರಸಾರ ಮತ್ತು ಅದೇ ಬಗೆಯ ಇತರ ಸಂಪರ್ಕ ಸಾಧನಗಳು.

(ಸಿ) ಅಂಚೆ ಕಚೇರಿ ಉಳಿತಾಯ ಬ್ಯಾಂಕ್.

೩೩. ಒಕ್ಕೂಟ ರೈಲು ಮಾರ್ಗಗಳು: ಸುರಕ್ಷತೆ, ಗರಿಷ್ಠ ಮತ್ತು ಕನಿಷ್ಠ ದರಗಳು ಮತ್ತು ಬೆಲೆಗಳು, ನಿಲ್ದಾಣ ಮತ್ತು ಸೇವಾ ಸೀಮಾ ಶುಲ್ಕಗಳು, ಸಂಚಾರದ ಆಂತರಿಕ ಬದಲಾವಣೆ ಮತ್ತು ಸರಕು ಹಾಗೂ ಪ್ರಯಾಣಿಕರ ಸಾಗಣೆಯ ರೈಲು ಆಡಳಿತದ ಹೊಣೆ–ಇದಕ್ಕೆ ಸಂಬಂಧಿಸಿದಂತೆ ಎಲ್ಲ ರೈಲುಮಾರ್ಗಗಳ (ಸಣ್ಣ ರೈಲುಮಾರ್ಗಗಳನ್ನು ಬಿಟ್ಟು) ನಿಯಂತ್ರಣ; ಸುರಕ್ಷತೆ ಹಾಗೂ ಸರಕು ಮತ್ತು ಪ್ರಯಾಣಿಕರ ಸಾಗಣೆಯ ರೈಲುಮಾರ್ಗಗಳ ಆಡಳಿತದ ಹೊಣೆಗೆ ಸಂಬಂಧಿಸಿದಂತೆ ಸಣ್ಣರೈಲು ಮಾರ್ಗಗಳ ನಿಯಂತ್ರಣ.

೩೪. ಉಬ್ಬರವಿಳಿತ ಜಲದ ಮೇಲಿನ ಹಡಗುಯಾನ ಮತ್ತು ನೌಕಾಸಂಚಾರ ಸೇರಿದಂತೆ ಹಡಗುಯಾನ ಮತ್ತು ನೌಕಾಸಂಚಾರ.

೩೫. ನೌಕಾಧಿಪತಿಯ ಅಧಿಕಾರ ವ್ಯಾಪ್ತಿ.

೩೬. ಬಂದರುಗಳ ಸೀಮಾನಿರ್ಣಯ ಸೇರಿದಂತೆ ಒಕ್ಕೂಟ ಕಾನೂನು ಅಥವಾ ಅಸ್ತಿತ್ವದಲ್ಲಿರುವ ಭಾರತೀಯ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಪ್ರಮುಖ ಬಂದರುಗಳೆಂದು ಘೋಷಿಸಲಾದ ಬಂದರುಗಳು.

೩೭. ವಿಮಾನ ಮತ್ತು ವಿಮಾನಯಾನ, ವಿಮಾನ ನಿಲ್ದಾಣಗಳ ಏರ್ಪಾಡು; ವಿಮಾನಸಂಚಾರ ಮತ್ತು ವಿಮಾನ ನಿಲ್ದಾಣಗಳ ನಿಯಂತ್ರಣ ಮತ್ತು ಸಂಘಟನೆ.

೩೮. ಹಡಗುಸಂಚಾರ ಮತ್ತು ವಿಮಾನದ ಸುರಕ್ಷತೆಗಾಗಿ ದೀಪದ ಹಡಗುಗಳು, ಗುರುತುದೀಪಗಳು ಮತ್ತು ಇತರ ವ್ಯವಸ್ಥೆ ಸೇರಿದಂತೆ ದೀಪಗೃಹಗಳು.

೩೯. ಸಮುದ್ರ ಮತ್ತು ವಾಯುಮಾರ್ಗದ ಮೂಲಕ ಪ್ರಯಾಣಿಕರ ಮತ್ತು ಸರಕುಗಳ ಸಾಗಣೆ.

೪೦. ಭಾರತದ ಭೂಮಾಪನ, ಭಾರತದ ಭೂಗರ್ಭ ವಿಜ್ಞಾನ, ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ ಸಮೀಕ್ಷೆಗಳು, ಹವಾಮಾನ ಸಂಸ್ಥೆಗಳು.

೪೧. ಅಂತರ ಘಟಕ ಸಂಪರ್ಕ ನಿಷೇಧ.

೪೨. ಒಕ್ಕೂಟ ನ್ಯಾಯಾಂಗ.

೪೩. ಒಕ್ಕೂಟದ ಉದ್ದೇಶಗಳಿಗಾಗಿ ಸ್ವತ್ತಿನ ಅರ್ಜನೆ.

೪೪. ಸಂಶೋಧನೆ, ವೃತ್ತಿಪರ ಅಥವಾ ತಾಂತ್ರಿಕ ತರಬೇತಿ, ವಿಶೇಷ ಅಧ್ಯಯನಗಳ ಅಭಿವೃದ್ಧಿ–ಈ ಉದ್ದೇಶಗಳಿಗಾಗಿ ಒಕ್ಕೂಟದ ಏಜೆನ್ಸಿಗಳು ಮತ್ತು ಸಂಸ್ಥೆಗಳು.

೪೫. ಜನಗಣತಿ.

೪೬. ಈ ಪಟ್ಟಿಯಲ್ಲಿರುವ ವಿಷಯಗಳ ಪೈಕಿ ಯಾವುದೊಂದರ ಸಂಬಂಧದಲ್ಲಿನ ಕಾನೂನುಗಳ ವಿರುದ್ಧದ ಅಪರಾಧಗಳು.

೪೭. ಒಕ್ಕೂಟದ ಉದ್ದೇಶಗಳಿಗಾಗಿ ವಿಚಾರಣೆಗಳು, ಸಮೀಕ್ಷೆಗಳು ಮತ್ತು ಅಂಕಿ–ಸಂಖ್ಯೆ.

೪೮. ಒಕ್ಕೂಟದ ಸೇವೆಗಳು ಮತ್ತು ಒಕ್ಕೂಟ ಲೋಕಸೇವಾ ಆಯೋಗ.

೪೯. ಒಕ್ಕೂಟದ ಉದ್ಯೋಗಿಗಳಿಗೆ ಸಂಬಂಧಪಟ್ಟ ಕೈಗಾರಿಕಾ ವಿವಾದಗಳು.

೫೦. ಭಾರತೀಯ ರಿಸರ್ವ್‌ಬ್ಯಾಂಕ್.

೫೧. ಒಕ್ಕೂಟದ ಸ್ವತ್ತು ಮತ್ತು ಅದರಿಂದ ಬರುವ ರಾಜಸ್ವ, ಆದರೆ ಒಂದು ಘಟಕದಲ್ಲಿರುವ ಸ್ವತ್ತಿನ ಬಗ್ಗೆ ಒಕ್ಕೂಟದ ಕಾನೂನಿನಲ್ಲಿ ಅನ್ಯಥಾ ಉಪಬಂಧಿಸಿಲ್ಲದಿದ್ದರೆ ಅದು ಘಟಕದ ಕಾನೂನಿಗೆ ಒಳಪಡುತ್ತದೆ.

೫೨. ಒಕ್ಕೂಟದ ಸಾರ್ವಜನಿಕ ಋಣ.

೫೩. ಕರೆನ್ಸಿ, ವಿದೇಶಿ ವಿನಿಮಯ, ನಾಣ್ಯ ತಯಾರಿಕೆ ಮತ್ತು ಕಾನೂನು ಸಮ್ಮತ ಚಲಾವಣೆ ಹಣ.

೫೪. ಒಕ್ಕೂಟಕ್ಕೆ ಬಾಧೆಯುಂಟು ಮಾಡುವ, ಒಕ್ಕೂಟ ಪ್ರದೇಶದ ಯಾವುದೇ ಭಾಗದಲ್ಲಿನ ಗಂಭೀರ ಆರ್ಥಿಕ ತುರ್ತು ಸ್ಥಿತಿಯನ್ನು ನಿರ್ವಹಿಸಲು ಅಧಿಕಾರ.

೫೫. ವಿಮೆ.

೫೬. ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ನಿಯಮಗಳು ಸೇರಿದಂತೆ ಆದರೆ ಒಕ್ಕೂಟಕ್ಕೆ ಸೇರಿದ ಒಂದು ರಾಜ್ಯದ ಒಡೆತನದಲ್ಲಿರುವ ಅಥವಾ ಆದರೆ ನಿಯಂತ್ರಣಕ್ಕೊಳಪಟ್ಟ ಮತ್ತು ಆ ರಾಜ್ಯದೊಳಗೆ ಮಾತ್ರ ವ್ಯವಹಾರ ನಿರ್ವಹಿಸುವ ನಿಗಮಗಳು ಅಥವಾ ಸಹಕಾರ ಸಂಘಗಳನ್ನು ಹೊರತುಪಡಿಸಿದಂತೆ

ನಿಗಮಗಳು ಎಂದರೆ ವ್ಯಾಪಾರ ಹಾಗೂ ವ್ಯಾಪಾರ ನಿಗಮಗಳಾಗಿರಲಿ ಅಥವಾ ಇಲ್ಲದಿರಲಿ ಒಂದೇ ರಾಜ್ಯಕ್ಕೆ ಸೀಮಿತವಾಗಿರದ ಉದ್ದೇಶಗಳನ್ನುಳ್ಳ ನಿಗಮಗಳ ನಿಗಮನ, ನಿಯಂತ್ರಣ ಹಾಗೂ ಪರಿಸಮಾಪನ, ಆದರೆ ವಿಶ್ವವಿದ್ಯಾನಿಲಯಗಳು ಇದರಲ್ಲಿ ಸೇರುವುದಿಲ್ಲ.

೫೭. ಬ್ಯಾಂಕು ವ್ಯವಹಾರ.

೫೮. ಚೆಕ್‌ಗಳು, ವಿನಿಮಯ ಪತ್ರಗಳು, ಪ್ರಾಮಿಸರಿ ನೋಟ್‌ಗಳು ಮತ್ತು ಅಂಥವೇ ಇತರ ಲಿಖಿತಗಳು.

೫೯. ಪೇಟೆಂಟ್‌ಗಳು, ಗ್ರಂಥಸ್ವಾಮ್ಯ, ಆವಿಷ್ಕಾರಗಳು, ನಕ್ಷೆಗಳು, ವ್ಯಾಪಾರ ಚಿಹ್ನೆಗಳು ಮತ್ತು ವ್ಯಾಪಾರಿಸರಕು ಚಿಹ್ನೆಗಳು.

೬೦. ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು, ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು.

೬೧. ತೂಕ ಮತ್ತು ಅಳತೆ ಮಾಪಕಗಳ ನಿಗದಿ.

೬೨. ರಫ್ತಿಗಾಗಿ ಅಫೀಮಿನ ಸಾಗುವಳಿ, ತಯಾರಿಕೆ ಮತ್ತು ಮಾರಾಟ.

೬೩. ಸ್ವಾಧೀನ, ಸಂಗ್ರಹಣೆ ಮತ್ತು ಸಾಗಾಣಿಕೆಗೆ ಸಂಬಂಧಿಸಿದಂತೆ ಅಪಾಯಕರ ಸುಲಭ ದಹ್ಯವಾದವುಗಳೆಂದು ಒಕ್ಕೂಟ ಕಾನೂನು ಘೋಷಿಸಿದ ಪೆಟ್ರೋಲಿಯಂ ಮತ್ತು ಇತರ ದ್ರವಗಳು ಮತ್ತು ವಸ್ತುಗಳು.

೬೪. ಒಕ್ಕೂಟವು ಯಾವ ಕೈಗಾರಿಕೆಗಳನ್ನು ನಿಯಂತ್ರಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ವಿಹಿತವೆಂದು ಒಕ್ಕೂಟ ಕಾನೂನಿನ ಮೂಲಕ ಘೋಷಿಸಲಾಗುವುದೋ ಆ ಕೈಗಾರಿಕೆಗಳು.

೬೫. ಗಣಿ ಮತ್ತು ತೈಲಕ್ಷೇತ್ರಗಳಲ್ಲಿನ ದುಡಿಮೆ ಮತ್ತು ಸುರಕ್ಷೆಯ ವಿನಿಮಯ.

೬೬. ಗಣಿಗಳ ಮತ್ತು ತೈಲಕ್ಷೇತ್ರಗಳ ವಿನಿಮಯ ಮತ್ತು ಖನಿಜಗಳ ಅಭಿವೃದ್ಧಿಯು ಎಷ್ಟರಮಟ್ಟಿಗೆ ಒಕ್ಕೂಟದ ನಿಯಂತ್ರಣದಲ್ಲಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ ವಿಹಿತವೆಂದು ಒಕ್ಕೂಟ ಕಾನೂನಿನ ಮೂಲಕ ಘೋಷಿಸಲಾಗುವುದೋ ಅಕ್ಷರಮಟ್ಟಿಗೆ ಅಂಥ ವಿನಿಮಯ ಮತ್ತು ಅಭಿವೃದ್ಧಿ.

೬೭. ಗವರ್ನರ್‌ನ ಪ್ರಾಂತ್ಯ ಅಥವಾ ಚೀಫ್ ಕಮಿಷನರ್ ಪ್ರಾಂತ್ಯದ ಯಾವುದೇ ಭಾಗಕ್ಕೆ ಸೇರಿದ ಪೊಲೀಸ್ ದಳದ ಸದಸ್ಯರ ಅಧಿಕಾರ ಹಾಗೂ ಅಧಿಕಾರ ವ್ಯಾಪ್ತಿಯನ್ನು ಬೇರೆ ಗವರ್ನರ್‌ರ ಪ್ರಾಂತ್ಯ ಅಥವಾ ಚೀಫ್ ಕಮಿಷನರ್ ಪ್ರಾಂತ್ಯದ ಯಾವುದೇ ಪ್ರದೇಶಕ್ಕೆ ವಿಸ್ತರಿಸುವುದು. ಆದರೆ ಒಂದು ಪ್ರದೇಶದ ಪೊಲೀಸರು ಅಂಥ ಅಧಿಕಾರ ಮತ್ತು ಅಧಿಕಾರ ವ್ಯಾಪ್ತಿಯನ್ನು ಬೇರೆ ಕಡೆಯಲ್ಲಿ ಆ ಪ್ರಾಂತ್ಯದ ಸರ್ಕಾರದ, ಚೀಫ್ ಕಮಿಷನರ್‌ರ ಸಮ್ಮತಿಯಿಲ್ಲದೇ ಚಲಾಯಿಸುವುದಕ್ಕೆ ಅವಕಾಶವಿರುವಂತೆ ವಿಸ್ತರಿಸತಕ್ಕದ್ದಲ್ಲ.

೬೮. ಎಲ್ಲ ಒಕ್ಕೂಟ ಚುನಾವಣೆಗಳು ಮತ್ತು ಚುನಾವಣಾ ಆಯೋಗದಿಂದ ಎಲ್ಲ ಒಕ್ಕೂಟ ಮತ್ತು ಪ್ರಾಂತೀಯ ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣ.

೬೯. ಒಕ್ಕೂಟದ ಸಚಿವರ, ರಾಜ್ಯಗಳ ಪರಿಷತ್ತುಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಮತ್ತು ರಾಜ್ಯ ಸಭೆಯ ಸಭಾಪತಿಯ ಹಾಗೂ ಉಪಸಭಾಪತಿಯ ವೇತನಗಳು. ಒಕ್ಕೂಟ ಸಂಸತ್ತಿನ ಸದಸ್ಯರ ವೇತನ, ಭತ್ಯೆ ಹಾಗೂ ವಿಶೇಷಾಧಿಕಾರಗಳು.

೭೦. ಒಕ್ಕೂಟ ಸಂಸತ್ತಿನ ಸಮಿತಿಗಳ ಮುಂದೆ ಸಾಕ್ಷ್ಯ ನೀಡಲು ಮತ್ತು ದಾಖಲೆಗಳನ್ನು ಹಾಜರುಪಡಿಸಲು ವ್ಯಕ್ತಿಗಳ ಹಾಜರಾತಿಯನ್ನು ಜಾರಿಗೊಳಿಸುವುದು.

೭೧. ರಫ್ತು ಶುಲ್ಕ ಸೇರಿದಂತೆ ಸೀಮಾಸುಂಕಗಳು.

೭೨. (ಎ)ಮನುಷ್ಯರ ಸೇವನೆಗಾಗಿ ಮದ್ಯಸಾರಯುಕ್ತ ಮದ್ಯಗಳನ್ನು;

(ಬಿ) ಅಫೀಮು, ಭಾರತೀಯ ಗಾಂಜಾ ಮತ್ತು ಇತರ ನಿದ್ರಾಜನಕ ಔಷಧಿಗಳು ಮತ್ತು ನಿದ್ರಾಜನಕಗಳನ್ನು ಮತ್ತು ನಿದ್ರಾಜನಕವಲ್ಲದ ಔಷಧಿಗಳನ್ನು;

(ಸಿ) ಈ ನಮೂದಿನ (ಬಿ) ಉಪಕಂಡಿಕೆಯಲ್ಲಿ ನಮೂದಿಸಿದ ಮದ್ಯಸಾರ ಅಥವಾ ಯಾವುದೇ ದ್ರವ್ಯವನ್ನು ಒಳಗೊಂಡಿರುವ ಔಷಧೀಯ ಮತ್ತು ಪ್ರಸಾಧನ ಸಾಮಗ್ರಿಗಳನ್ನು – ಹೊರತುಪಡಿಸಿ ಭಾರತದಲ್ಲಿ ತಯಾರಾದ ಅಥವಾ ಉತ್ಪಾದಿಸಲಾದ ಹೊಗೆಸೊಪ್ಪು ಮತ್ತು ಇತರ ಸರಕುಗಳ ಮೇಲಿನ ಅಬಕಾರಿ ಸುಂಕಗಳು.

೭೩. ಕಾರ್ಪೋರೇಷನ್ ತೆರಿಗೆ.

೭೪. ರಾಜ್ಯ ಲಾಟರಿಗಳು.

೭೫. ಒಂದು ಘಟಕದಿಂದ ಬೇರೊಂದಕ್ಕೆ ವಲಸೆ ಹೋಗುವುದು.

೭೬. ಈ ಪಟ್ಟಿಯಲ್ಲಿರುವ ಯಾವುದೇ ವಿಷಯದ ಸಂಬಂಧದಲ್ಲಿ ಎಲ್ಲ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರಗಳು.

೭೭. ಕೃಷಿ ವರಮಾನವಲ್ಲದ ಬೇರೆ ವರಮಾನದ ಮೇಲೆ ತೆರಿಗೆ.

೭೮. ವ್ಯಕ್ತಿಗಳ ಮತ್ತು ಕಂಪನಿಗಳಿಗೆ ಸಂಬಂಧಿಸಿದ, ಕೃಷಿಭೂಮಿಯನ್ನು ಹೊರತುಪಡಿಸಿದ ಆಸ್ತಿಯ ಬಂಡವಾಳ ಮೌಲ್ಯದ ಮೇಲಿನ ತೆರಿಗೆಗಳು.

೭೯. ಕೃಷಿಭೂಮಿಯನ್ನು ಹೊರತುಪಡಿಸಿ ಇತರ ಸ್ವತ್ತಿನ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಸುಂಕಗಳು.

೮೦. ಕೃಷಿಭೂಮಿಯನ್ನು ಹೊರತುಪಡಿಸಿ ಇತರ ಸ್ವತ್ತಿಗೆ ಸಂಬಂಧಿಸಿದಂತೆ ಎಸ್ಟೇಟ್ ಸುಂಕ.

೮೧. ವಿನಿಮಯ ಪತ್ರಗಳು, ಚೆಕ್‌ಗಳು, ಪ್ರಾಮಿಸರಿ ನೋಟ್‌ಗಳು, ವಾಹನ ಪತ್ರಗಳು, ನಂಬಿಕೆ ಪತ್ರಗಳು, ವಿಮೆ ಪಾಲಿಸಿಗಳು, ಷೇರುಗಳ ವರ್ಗಾವಣೆ, ಡಿಬೆಂಚರುಗಳು, ಪ್ರಾಕ್ಸಿಗಳು ಮತ್ತು ಜಮೆಗಳಿಗೆ ಸಂಬಂಧಿಸಿದಂತೆ ಸ್ಟಾಂಪು ಶುಲ್ಕದ ದರಗಳು.

೮೨. ರೈಲು ಅಥವಾ ವಾಯು ಮಾರ್ಗವಾಗಿ ಸಾಗಣೆಯಾಗುವ ಸರಕುಗಳ ಅಥವಾ ಪ್ರಯಾಣಿಕರ ಮೇಲಿನ ಸೀಮಾ ತೆರಿಗೆಗಳು; ರೈಲ್ವೆ ಪ್ರಯಾಣ ದರಗಳು.

೮೩. ಪ್ರವಾಹ ನಿಯಂತ್ರಣ, ನೀರಾವರಿ, ನೌಕಾಯಾನ ಮತ್ತು ಜಲವಿದ್ಯುತ್ ಶಕ್ತಿ ಉದ್ದೇಶಗಳಿಗಾಗಿ ಅಂತರ್‌ಘಟಕ ಜಲಮಾರ್ಗಗಳ ಅಭಿವೃದ್ಧಿ.

೮೪. ಅಂತರ್‌ಘಟಕ ವ್ಯಾಪಾರ ಮತ್ತು ವಾಣಿಜ್ಯ.

೮೫. ರಾಜ್ಯಕ್ಷೇತ್ರೀಯ ಸಮುದ್ರದ ಆಚೆ ಮೀನು ಹಿಡಿಯುವುದು ಮತ್ತು ಮೀನುಗಾರಿಕೆ.

೮೬. ಒಕ್ಕೂಟದ ಏಜೆನ್ಸಿಗಳಿಂದ ಉಪ್ಪು ತಯಾರಿಕೆ ಮತ್ತು ಹಂಚಿಕೆ, ಇತರ ಏಜೆನ್ಸಿಗಳಿಂದಾಗುವ ಉಪ್ಪು ತಯಾರಿಕೆ ಹಾಗೂ ಹಂಚಿಕೆಯ ವಿನಿಮಯ ಹಾಗೂ ನಿಯಂತ್ರಣ.

ಟಿಪ್ಪಣಿ: ಉಪ್ಪಿನ ಮೇಲೆ ಯಾವುದೇ ಸುಂಕ ಅಥವಾ ತೆರಿಗೆ ವಿಧಿಸುವುದನ್ನು ನಿಷೇಧಿಸುವ ಪ್ರಕರಣವನ್ನು ಸಂವಿಧಾನದಲ್ಲಿಯೇ ಸೇರಿಸಬೇಕು.

೮೭. ಈ ಪಟ್ಟಿಯಲ್ಲಿನ ಯಾವುದೇ ವಿಷಯಕ್ಕೆ ಸಂಬಂಧಿಸಿದ ಶುಲ್ಕಗಳು; ಆದರೆ ಯಾವುದೇ ನ್ಯಾಯಾಲಯದಲ್ಲಿ ತೆಗೆದುಕೊಳ್ಳುವ ಶುಲ್ಕಗಳು ಸೇರುವುದಿಲ್ಲ.

**ಪಟ್ಟಿ–೨ ಪ್ರಾಂತೀಯ ವಿಧಾಯೀ ಪಟ್ಟಿ**

೧. ಸಾರ್ವಜನಿಕ ಸುವ್ಯವಸ್ಥೆ (ಆದರೆ ಸಿವಿಲ್ ಅಧಿಕಾರ ವರ್ಗದ ಸಹಾಯಕ್ಕಾಗಿ ನೌಕಾ, ಭೂ ಅಥವಾ ವಾಯುದಳದ ಬಳಕೆಯನ್ನು ಹೊರತುಪಡಿಸಿ.); ನ್ಯಾಯಾಡಳಿತ, ಸರ್ವೋಚ್ಚ ನ್ಯಾಯಾಲಯವನ್ನು ಹಾಗೂ ಅಲ್ಲಿನ ಶುಲ್ಕಗಳನ್ನು ಹೊರತುಪಡಿಸಿ ಎಲ್ಲ ನ್ಯಾಯಾಲಯಗಳ ರಚನೆ ಹಾಗೂ ಸಂಘಟನೆ,

ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಪ್ರತಿಬಂಧಕ ಸ್ಥಾನ ಬದ್ಧತೆ; ಪ್ರತಿಯೊಂದು ಸ್ಥಾನಬದ್ಧತೆಗೆ ಒಳಪಡಿಸಲಾದ ವ್ಯಕ್ತಿಗಳು.

೨. ಈ ಪಟ್ಟಿಯಲ್ಲಿರುವ ಯಾವುದೇ ವಿಷಯದ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಎಲ್ಲ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ ಹಾಗೂ ಅಧಿಕಾರಗಳು ಬಾಡಿಗೆ ಹಾಗೂ ರಾಜಸ್ವ ನ್ಯಾಯಾಲಯಗಳಲ್ಲಿನ ಪ್ರಕ್ರಿಯೆ.

೩. ರೈಲ್ವೆ ಹಾಗೂ ಗ್ರಾಮ ಪೋಲೀಸ್‌ರನ್ನು ಒಳಗೊಂಡ ಪೋಲೀಸ್.

೪. ಕಾರಾಗೃಹಗಳು. ಸುಧಾರಣಾಲಯಗಳು, ಬಾಲಾಪರಾಧಿ ಶಿಕ್ಷಣ ಸಂಸ್ಥೆಗಳು ಮತ್ತು ಅದೇ ಬಗೆಯ ಇತರ ಸಂಸ್ಥೆಗಳು ಮತ್ತು ಅಲ್ಲಿ ತಡೆಹಿಡಿದಿರಿಸಿರುವ ವ್ಯಕ್ತಿಗಳು ಕಾರಾಗೃಹಗಳ ಮತ್ತು ಇತರ ಸಂಸ್ಥೆಗಳ ಬಳಕೆಗಾಗಿ ಇತರ ಘಟಕಗಳೊಡನೆ ಏರ್ಪಡಿಸಿಕೊಳ್ಳುವ ವ್ಯವಸ್ಥೆಗಳು.

೫. ಪ್ರಾಂತ್ಯದ ಸಾರ್ವಜನಿಕ ಋಣ.

೬. ಪ್ರಾಂತೀಯ ಲೋಕಸೇವೆಗಳು ಮತ್ತು ಪ್ರಾಂತೀಯ ಲೋಕಸೇವಾ ಆಯೋಗಗಳು.

೭. ಪ್ರಾಂತ್ಯದಲ್ಲಿ ನಿಹಿತವಾಗಿರುವ ಅಥವಾ ಅದರ ಸ್ವಾಧೀನದಲ್ಲಿರುವ ಕಾಮಗಾರಿಗಳು, ಭೂಮಿಗಳು ಮತ್ತು ಕಟ್ಟಡಗಳು

೮. ಒಕ್ಕೂಟದ ಉದ್ದೇಶದ ಹೊರತು ಭೂಮಿಯ ಕಡ್ಡಾಯ ಆರ್ಜನೆ.

೯. ಪ್ರಾಂತವು ನಿಯಂತ್ರಿಸುವ ಅಥವಾ ಹಣಕಾಸು ಒದಗಿಸುವ ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು ಮತ್ತು ಇತರ ಅಂಥವೇ ಸಂಸ್ಥೆಗಳು.

೧೦. ಪಟ್ಟಿ–೧ರ ೬೮ನೆಯ ಕಂಡಿಕೆಗೆ ಒಳಪಟ್ಟು ಪ್ರಾಂತೀಯ ವಿಧಾನಮಂಡಲದ ಹಾಗೂ ಪ್ರಾಂತ್ಯದ ಗವರ್ನರ್ ಅವರ ಚುನಾವಣೆಗಳು.

೧೧. ಪ್ರಾಂತೀಯ ಸಚಿವರ, ವಿಧಾನ ಸಭೆಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ, ವಿಧಾನ ಪರಿಷತ್ತು ಇದ್ದರೆ ಅದರ ಸಭಾಪತಿ ಹಾಗೂ ಉಪಸಭಾಪತಿಗಳ ವೇತನಗಳು. ಪ್ರಾಂತೀಯ ವಿಧಾನಮಂಡಲದ ಸದಸ್ಯರ ವೇತನಗಳು, ಭತ್ಯೆಗಳು ಹಾಗೂ ವಿಶೇಷ ಹಕ್ಕುಗಳು. ಪ್ರಾಂತೀಯ ವಿಧಾನ ಮಂಡಲದ ಸಮಿತಿಗಳ ಮುಂದೆ ಸಾಕ್ಷ್ಯ ನೀಡುವ ಅಥವಾ ದಾಖಲೆಗಳನ್ನು ಹಾಜರುಪಡಿಸುವ ವ್ಯಕ್ತಿಗಳ ಹಾಜರಾತಿಯ ಜಾರಿ.

೧೨. ಸ್ಥಳೀಯ ಸರ್ಕಾರ ಎಂದರೆ ಪೌರ ನಿಗಮಗಳ ಅಭಿವೃದ್ಧಿ ವಿಶ್ವಸ್ಥ ಮಂಡಲಿಗಳ, ಜಿಲ್ಲಾ ಮಂಡಲಿಗಳ, ಗಣಿ ವಸತಿ ಪ್ರಾಧಿಕಾರಗಳ ಮತ್ತು ಸ್ಥಳೀಯ ಸ್ವಯಂ ಆಡಳಿತ ಅಥವಾ ಗ್ರಾಮ ಆಡಳಿತದ ಉದ್ದೇಶಕ್ಕಾಗಿ ಇತರ ಸ್ಥಳೀಯ ಪ್ರಾಧಿಕಾರಗಳ ರಚನೆ ಮತ್ತು ಅವುಗಳ ಅಧಿಕಾರ.

೧೩. ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ, ಆಸ್ಪತ್ರೆಗಳು ಮತ್ತು ಔಷಧಾಲಯಗಳು ಜನನ ಮತ್ತು ಮರಣಗಳ ನೋಂದಣಿ.

೧೪. ಭಾರತದಾಚೆಗಿನ ತೀರ್ಥಯಾತ್ರೆಯಲ್ಲದ ಬೇರೆ ತೀರ್ಥಯಾತ್ರೆಗಳು.

೧೫. ದಫನ್ ಸ್ಥಳಗಳು, ಸ್ಮಶಾನಗಳು.

೧೬. ಪಟ್ಟಿ–೧ರ ೨೮ನೆಯ ಕಂಡಿಕೆಯಲ್ಲಿ ನಿರ್ದಿಷ್ಟಪಡಿಸಿದವುಗಳಲ್ಲದ ವಿಶ್ವವಿದ್ಯಾನಿಲಯಗಳು ಸೇರಿದಂತೆ ಶಿಕ್ಷಣ.

೧೭. ಸಂಪರ್ಕ ಸಾಧನಗಳು ಎಂದರೆ ರಸ್ತೆಗಳು, ಸೇತುವೆಗಳು, ಹಾಯ್ಗಡಗಳು ಮತ್ತು ಪಟ್ಟಿ–೧ರಲ್ಲಿ ನಿರ್ದಿಷ್ಟಪಡಿಸಿರದ ಇತರ ಸಂಪರ್ಕ ಸಾಧನಗಳು. ಸಣ್ಣ ರೈಲು ಮಾರ್ಗಗಳ ಸಂಬಂಧದಲ್ಲಿ ಪಟ್ಟಿ–೧ರಲ್ಲಿನ ಉಪಬಂಧಗಳಿಗೆ ಒಳಪಟ್ಟು ಅಂಥ ರೈಲುಮಾರ್ಗಗಳು ಮುನಿಸಿಪಲ್ ಟ್ರಾಮ್‌ವೇಗಳು,

ರೋಪ್‌ವೇಗಳು. ಜಲಮಾರ್ಗಗಳಿಗೆ ಸಂಬಂಧಿಸಿದಂತೆ ಪಟ್ಟಿ–೧ ಮತ್ತು ಪಟ್ಟಿ–೨ರ ಉಪಬಂಧಗಳಿಗೆ ಒಳಪಟ್ಟು ಒಳನಾಡಿನ ಜಲಮಾರ್ಗಗಳು ಮತ್ತು ಅವುಗಳ ಮೇಲಿನ ಸಂಚಾರ. ಪ್ರಮುಖ ಬಂದರುಗಳಿಗೆ ಸಂಬಂಧಿಸಿದಂತೆ ಪಟ್ಟಿ–೧ರ ಉಪಬಂಧಗಳಿಗೆ ಒಳಪಟ್ಟು ಬಂದರುಗಳು ಯಂತ್ರಚಾಲಿತ ವಾಹನಗಳನ್ನು ಹೊರತುಪಡಿಸಿ ಇತರ ವಾಹನಗಳು.

೧೮. ನೀರು ಎಂದರೆ ನೀರು ಪೂರೈಕೆ, ನೀರಾವರಿ ಮತ್ತು ನಾಲೆಗಳು, ಕಾಲುವೆ ಮತ್ತು ಒಡ್ಡುಗಳು, ಜಲವಿದ್ಯುತ್.

೧೯. ಕೃಷಿ ಶಿಕ್ಷಣ ಮತ್ತು ಸಂಶೋಧನೆ ಕೀಟಗಳಿಂದ ರಕ್ಷಣೆ ಮತ್ತು ಸಸ್ಯರೋಗಗಳ ನಿವಾರಣೆ ಸೇರಿದಂತೆ ಕೃಷಿ. ಪಶುಸಂಪತ್ತಿನ ಸುಧಾರಣೆ, ಪಶುರೋಗಗಳ ನಿವಾರಣೆ, ಪಶುವೈದ್ಯಕೀಯ ತರಬೇತಿ ಮತ್ತು ವೃತ್ತಿ ದನದ ದೊಡ್ಡಿಗಳು ಪಶುಗಳ ಅತಿಕ್ರಮ ಪ್ರವೇಶ ತಡೆಗಟ್ಟುವುದು.

೨೦. ಭೂಮಿ ಎಂದರೆ, ಭೂಮಿಯಲ್ಲಿನ ಅಥವಾ ಅದರ ಮೇಲಿನ ಹಕ್ಕುಗಳು, ಭೂ ಒಡೆಯನ ಮತ್ತು ಗೇಣಿದಾರನ ಸಂಬಂಧವನ್ನೊಳಗೊಂಡು ಭೂ ಹಿಡುವಳಿಗಳು ಮತ್ತು ಗೇಣಿವಸೂಲಿ, ಕೃಷಿ ಭೂಮಿಯ ವರ್ಗಾವಣೆ, ಪರಭಾರೆ ಮತ್ತು ಸಂಪೂರ್ಣ ಬದಲಾವಣೆ, ಭೂ ಸುಧಾರಣೆ, ಕೃಷಿ ಸಾಲಗಳು, ಕಾಲೊನಿ ಸ್ಥಾಪನೆ, ಪ್ರತಿಪಾಲಿತರ ನ್ಯಾಯಾಲಯಗಳು, ಪೂರ್ವಾಧಿಯುಳ್ಳ ಮತ್ತು ಜಪ್ತಿಯಾದ ಎಸ್ಟೇಟುಗಳು, ನಿಕ್ಷೇಪನಿಧಿ.

೨೧. ಅರಣ್ಯಗಳು.

೨೨. ಒಕ್ಕೂಟ ನಿಯಂತ್ರಣದಡಿ ವಿನಿಮಯನ ಮತ್ತು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಪಟ್ಟಿ–೧ರ ಉಪಬಂಧಗಳಿಗೆ ಒಳಪಟ್ಟು ಗಣಿಗಳ ಹಾಗೂ ತೈಲಕ್ಷೇತ್ರಗಳ ವಿನಿಮಯನ ಮತ್ತು ಖನಿಜಗಳ ಅಭಿವೃದ್ಧಿ.

೨೩. ಮೀನುಗಾರಿಕೆ.

೨೪. ಕಾಡುಹಕ್ಕಿಗಳ ಮತ್ತು ವನ್ಯಪ್ರಾಣಿಗಳ ಸಂರಕ್ಷಣೆ.

೨೫. ಅನಿಲ ಮತ್ತು ಅನಿಲ ಕಾಮಗಾರಿಗಳು.

೨೬. ಪ್ರಾಂತ್ಯದೊಳಗೆ ವ್ಯಾಪಾರ ಮತ್ತು ವಾಣಿಜ್ಯ; ಮಾರುಕಟ್ಟೆಗಳು ಮತ್ತು ಸಂತೆಗಳು.

೨೭. ಲೇವಾದೇವಿ ಮತ್ತು ಲೇವಾದೇವಿಗಾರರು.

೨೮. ತಂಗುದಾಣಗಳು ಮತ್ತು ತಂಗುದಾಣಪಾಲಕರು.

೨೯. ಸರಕುಗಳ ಉತ್ಪಾದನೆ, ಸರಬರಾಜು ಹಾಗೂ ಹಂಚಿಕೆ, ಒಕ್ಕೂಟ ನಿಯಂತ್ರಣದಡಿ ಕೆಲವು ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಪಟ್ಟಿ–೧ರ ಉಪಬಂಧಗಳಿಗೆ ಒಳಪಟ್ಟು ಕೈಗಾರಿಕೆಗಳ ಅಭಿವೃದ್ಧಿ.

೩೦. ಆಹಾರಪದಾರ್ಥಗಳು ಮತ್ತು ಇತರ ಸರಕುಗಳ ಕಲಬೆರಕೆ.

೩೧. ಮಾಪಕಗಳ ನಿಗದಿ ಹೊರತುಪಡಿಸಿ ತೂಕ ಮತ್ತು ಅಳತೆಗಳು.

೩೨. ಮಾದಕ ಮದ್ಯಗಳು ಮತ್ತು ನಿದ್ರಾಜನಕ ಔಷಧಿಗಳು ಎಂದರೆ, ಅಫೀಮಿಗೆ ಸಂಬಂಧಿಸಿದಂತೆ ಪಟ್ಟಿ–೧ರ ಹಾಗೂ ವಿಷ ಹಾಗೂ ಅಪಾಯಕರ ಔಷಧಿಗಳಿಗೆ ಸಂಬಂಧಿಸಿದಂತೆ ಪಟ್ಟಿ–೩ರ ಉಪಬಂಧಗಳಿಗೆ ಒಳಪಟ್ಟು ಮಾದಕ ಮದ್ಯಗಳು, ಅಫೀಮು, ನಿದ್ರಾಜನಕ ಔಷಧಿಗಳ ತಯಾರಿಕೆ. ಉತ್ಪಾದನೆ, ಸ್ವಾಧೀನತೆ, ಸಾಗಣೆ, ಖರೀದಿ ಹಾಗೂ ಮಾರಾಟ.

೩೩. ಬಡವರಿಗೆ ಪರಿಹಾರ, ನಿರುದ್ಯೋಗ.

೩೪. ಪಟ್ಟಿ–೧ರಲ್ಲಿ ನಿರ್ದಿಷ್ಟಪಡಿಸಿರುವ ನಿಗಮಗಳನ್ನು ಹೊರತುಪಡಿಸಿ, ಇತರ ನಿಗಮಗಳ ಮತ್ತು ವಿಶ್ವವಿದ್ಯಾನಿಲಯಗಳ ನಿಗಮನ, ನಿಯಂತ್ರಣ ಮತ್ತು ಸಮಾಪನ, ಅನಿಗಮಿತ ವ್ಯಾಪಾರ, ಸಾಹಿತ್ಯಕ, ವೈಜ್ಞಾನಿಕ, ಧಾರ್ಮಿಕ ಸಂಸ್ಥೆಗಳು ಮತ್ತು ಇತರ ಸಂಘಸಂಸ್ಥೆಗಳು ಹಾಗೂ ಸಹಕಾರ ಸಂಘಗಳು.

೩೫. ಧರ್ಮಕಾರ್ಯಗಳು ಮತ್ತು ಧರ್ಮಸಂಸ್ಥೆಗಳು ಧರ್ಮಾದಾಯ ಮತ್ತು ಮತಸಂಬಂಧಿ ದತ್ತಿಗಳು.

೩೬. ರಂಗಮಂದಿರಗಳು ಮತ್ತು ನಾಟಕ ಪ್ರದರ್ಶನಗಳು ಮತ್ತು ಸಿನಿಮಾಗಳು ಆದರೆ ಇದರಲ್ಲಿ ಪ್ರದರ್ಶನಕ್ಕಾಗಿ ಸಿನಿಮಾಟೊಗ್ರಾಫ್ ಫಿಲ್ಮ್‌ಗಳ ಮಂಜೂರಾತಿ ಸೇರುವುದಿಲ್ಲ.

೩೭. ಬಾಜಿ ಕಟ್ಟುವುದು ಮತ್ತು ಜೂಜು.

೩೮. ಈ ಪಟ್ಟಿಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದ ಕಾನೂನಿನ ವಿರುದ್ಧದ ಅಪರಾಧಗಳು.

೩೯. ಈ ಪಟ್ಟಿಯಲ್ಲಿರುವ ಯಾವುದೇ ವಿಷಯದ ಉದ್ದೇಶಕ್ಕಾಗಿ ವಿಚಾರಣೆಗಳು ಹಾಗೂ ಅಂಕಿಅಂಶ.

೪೦. ಕಂದಾಯದ ನಿರ್ಧರಣೆ ಮತ್ತು ವಸೂಲಿ ಭೂದಾಖಲೆಗಳ ನಿರ್ವಹಣೆ, ಕಂದಾಯದ ಉದ್ದೇಶಗಳಿಗಾಗಿ ಭೂ ಮಾಪನದ ಮತ್ತು ಹಕ್ಕು ದಾಖಲೆ ಮತ್ತು ಕಂದಾಯದ ಪರಭಾರೆ ಸೇರಿದಂತೆ ಭೂಕಂದಾಯ.

೪೧. ಪ್ರಾಂತ್ಯದಲ್ಲಿ ತಯಾರಾದ ಅಥವಾ ಉತ್ಪಾದಿಸಲಾದ ಕೆಳಕಂಡ ಸರಕುಗಳ ಮೇಲಿನ ಉತ್ಪಾದನಾ ಸುಂಕಗಳು ಮತ್ತು ಒಕ್ಕೂಟದ ಬೇರೆಕಡೆಗಳಲ್ಲಿ ತಯಾರಾದ ಅಥವಾ ಉತ್ಪಾದಿಸಲಾದ ಅದೇ ಬಗೆಯ ಸರಕುಗಳ ಮೇಲೆ ಅದೇ ದರದಲ್ಲಿ ಅಥವಾ ಇನ್ನೂ ಕಡಿಮೆ ದರದಲ್ಲಿ ಪ್ರತಿಸುಂಕಗಳು.

(ಎ) ಮನುಷ್ಯರ ಸೇವನೆಗಾಗಿ ಮದ್ಯಸಾರ ಮುಕ್ತ ಮದ್ಯಗಳು;

(ಬಿ) ಅಫೀಮು, ಭಾರತೀಯ ಗಾಂಜಾ ಮತ್ತು ಇತರ ನಿದ್ರಾಜನಕ ಔಷಧಿಗಳು ಹಾಗೂ ನಿದ್ರಾಜನಕಗಳು; ನಿದ್ರಾಜನಕಗಳಲ್ಲದ ಔಷಧಿಗಳು;

(ಸಿ) ಆಲ್ಕೊಹಾಲ್ ಅಥವಾ ಈ ನಮೂದಿಸಿದ (ಬಿ) ಉಪಕಂಡಿಕೆಯಲ್ಲಿ ಸೇರಿಸಲಾದ ಯಾವುದೇ ವಸ್ತುವನ್ನು ಹೊಂದಿರುವ ಔಷಧೀಯ ಮತ್ತು ಪ್ರಸಾಧನ ಸಾಮಗ್ರಿಗಳು.

೪೨. ಕೃಷಿ ವರಮಾನದ ಮೇಲೆ ತೆರಿಗೆ.

೪೩. ಭೂಮಿಗಳು, ಕಟ್ಟಡಗಳು, ಮೇಲಿನ ತೆರಿಗೆಗಳು. ಬೆಂಕಿಗೂಡು ಮತ್ತು ವಾತಾಯನದ

೪೪. ಕೃಷಿಭೂಮಿಯ ಉತ್ತರಾಧಿಕಾರದ ಸಂಬಂಧದಲ್ಲಿ ಸುಂಕಗಳು.

೪೫. ಕೃಷಿಭೂಮಿಯ ಸಂಬಂಧದಲ್ಲಿ ಎಸ್ಟೇಟ್ ಸುಂಕ.

೪೬. ಖನಿಜ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಒಕ್ಕೂಟ ಸಂಸತ್ತಿನ ಯಾವುದೇ ಅಧಿನಿಯಮದ ಮೂಲಕ ವಿಧಿಸಲಾದ ಯಾವುದೇ ಪರಿಮಿತಿಗಳಿಗೆ ಒಳಪಟ್ಟು ಖನಿಜ ಹಕ್ಕುಗಳ ಮೇಲಿನ ತೆರಿಗೆಗಳು.

೪೭. ಕ್ಯಾಪಿಟೇಷನ್ ತೆರಿಗೆಗಳು.

೪೮. ವೃತ್ತಿಗಳು, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆಗಳು.

೪೯. ಪ್ರಾಣಿಗಳು ಮತ್ತು ದೋಣಿಗಳ ಮೇಲಿನ ತೆರಿಗೆಗಳು.

೫೦. ಸರಕುಗಳ ಮಾರಾಟ ಮತ್ತು ಜಾಹೀರಾತುಗಳ ಮೇಲಿನ ತೆರಿಗೆಗಳು.

೫೧. ರಸ್ತೆಗಳಲ್ಲಿ ಬಳಸಲು ಯೋಗ್ಯವಾಗಿರುವ ವಾಹನಗಳು ಯಂತ್ರಚಾಲಿತವಾಗಿರಲಿ ಅಥವಾ ಇಲ್ಲದಿರಲಿ, ಅವು ಮತು ಟ್ರಾಮ್‌ಕಾರ್‌ಗಳು ಸೇರಿದಂತೆ ವಾಹನಗಳ ಮೇಲಿನ ತೆರಿಗೆಗಳು.

೫೨. ವಿದ್ಯುಚ್ಛಕ್ತಿ ಬಳಕೆ ಅಥವಾ ಮಾರಾಟದ ಮೇಲಿನ ತೆರಿಗೆಗಳು.

೫೩. ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಯಾವುದೇ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲಿನ ತೆರಿಗೆಗಳು.

೫೪. ಮನರಂಜನೆ, ವಿನೋದ, ಬಾಜಿಕಟ್ಟುವುದು ಮತ್ತು ಜೂಜಿನ ಮೇಲಿನ ತೆರಿಗೆಗಳು ಸೇರಿದಂತೆ ವಿಲಾಸೀ ವಸ್ತುಗಳ ಮೇಲಿನ ತೆರಿಗೆಗಳು.

೫೫. ಸ್ಟ್ಯಾಂಪ್ ಸುಂಕ ದರಗಳಿಗೆ ಸಂಬಂಧಿಸಿದಂತೆ ಪಟ್ಟಿ–೧ರ ಉಪಬಂಧಗಳಲ್ಲಿ ನಿರ್ದಿಷ್ಟಪಡಿಸಿದವುಗಳಲ್ಲದ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಸ್ಟ್ಯಾಂಪ್ ಸುಂಕದ ದರಗಳು.

೫೬. ಒಳನಾಡು ಜಲಮಾರ್ಗಗಳ ಮೂಲಕ ಸಾಗಿಸುವ ಪ್ರಯಾಣಿಕರು ಹಾಗೂ ಸರಕುಗಳ ಮೇಲಿನ ತೆರಿಗೆಗಳು.

೫೭. ದಾರಿಸುಂಕಗಳು.

೫೮. ಯಾವುದೇ ನ್ಯಾಯಾಲಯದಲ್ಲಿ ತೆಗೆದುಕೊಳ್ಳುವ ಶುಲ್ಕಗಳನ್ನು ಹೊರತುಪಡಿಸಿ ಈ ಪಟ್ಟಿಯಲ್ಲಿನ ಯಾವುದೇ ಇತರ ವಿಷಯಗಳಿಗೆ ಸಂಬಂಧಿಸಿದ ಶುಲ್ಕಗಳು.

**ಪಟ್ಟಿ–೩. ಸಮವರ್ತಿ ವಿಧಾಯೀ ಪಟ್ಟಿ**

೧. ಈ ಸಂವಿಧಾನದ ಪ್ರಾರಂಭದ ದಿನಾಂಕದಂದು ಭಾರತದ ದಂಡ ಸಂಹಿತೆಯಲ್ಲಿ ಸೇರಿರುವ ಎಲ್ಲ ವಿಷಯಗಳನ್ನು ಒಳಗೊಂಡು, ಆದರೆ ಪಟ್ಟಿ–೧ ಅಥವಾ ಪಟ್ಟಿ–೨ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯದ ಬಗೆಗಿನ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳನ್ನು ಹೊರತುಪಡಿಸಿ ಮತ್ತು ಸಿವಿಲ್ ಅಧಿಕಾರ ವರ್ಗದ ಸಹಾಯಕ್ಕಾಗಿ ನೌಕಾ, ಭೂ ಮತ್ತು ವಾಯುದಳಗಳ ಉಳಿಕೆಯನ್ನು ಹೊರತುಪಡಿಸಿ ಕ್ರಿಮಿನಲ್ ಕಾನೂನು.

೨. ಈ ಸಂವಿಧಾನದ ಪ್ರಾರಂಭದಲ್ಲಿ ದಂಡ ಪ್ರಕ್ರಿಯೆ ಸಂಹಿತೆಯಲ್ಲಿ ಸೇರಿರುವ ಎಲ್ಲ ವಿಷಯಗಳನ್ನೊಳಗೊಂಡು ದಂಡ ಪ್ರಕ್ರಿಯೆ.

೩. ಬಂದಿಗಳನ್ನು ಹಾಗೂ ಆಪಾದಿತರನ್ನು ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ಸಾಗಿಸುವುದು.

೪. ಈ ಸಂವಿಧಾನದ ಪ್ರಾರಂಭದ ದಿನಾಂಕದಂದು ಕಾಲಪರಿಮಿತಿ ಕಾನೂನು ಸೇರಿದಂತೆ ಸಿವಿಲ್ ಪ್ರಕ್ರಿಯೆ ಸಂಹಿತೆಯಲ್ಲಿ ಸೇರಿದ ಎಲ್ಲ ವಿಷಯಗಳು ಗವರ್ನರ್ ಪ್ರಾಂತ್ಯದಲ್ಲಿ ಅಥವಾ ಚೀಫ್ ಕಮಿಷನರ್ ಪ್ರಾಂತದಲ್ಲಿ ತೆರಿಗೆ ಸಂಬಂಧದ ಎಲ್ಲ ಕ್ಲೇಮುಗಳ ವಸೂಲಿ; ಆ ಪ್ರಾಂತ್ಯದ ಆಚೆ ವಸೂಲಾಗಬೇಕಾದ ಭೂಕಂದಾಯದ ಬಾಕಿ ಮತ್ತು ಮೊತ್ತಗಳು ಸೇರಿದಂತೆ ಇತರ ಸಾರ್ವಜನಿಕ ಡಿಮ್ಯಾಂಡ್‌ಗಳು.

೫. ಸಾಕ್ಷ್ಯ ಮತ್ತು ಪ್ರಮಾಣ ವಚನಗಳು, ಕಾನೂನುಗಳಿಗೆ, ಸಾರ್ವಜನಿಕ ಕಾರ್ಯಗಳಿಗೆ, ದಾಖಲೆಗಳಿಗೆ, ನ್ಯಾಯಿಕ ವ್ಯವಹರಣೆಗಳಿಗೆ ಮಾನ್ಯತೆ.

೬. ವಿವಾಹ ಮತ್ತು ವಿವಾಹ ವಿಚ್ಛೇದನ, ಶಿಶುಗಳು ಮತ್ತು ಅಪ್ರಾಪ್ತ ವಯಸ್ಕರು, ದತ್ತು ಸ್ವೀಕಾರ.

೭. ಕೃಷಿಭೂಮಿಯನ್ನು ಹೊರತುಪಡಿಸಿದಂತೆ ಉಯಿಲುಗಳು, ಮರಣಶಾಸನ ಇಲ್ಲದಿರುವುದು ಮತ್ತು ಉತ್ತರಾಧಿಕಾರ.

೮. ಕೃಷಿಭೂಮಿಯಲ್ಲದ ಇತರ ಸ್ವತ್ತಿನ ವರ್ಗಾವಣೆ, ಪತ್ರಗಳ ಮತ್ತು ದಸ್ತಾವೇಜುಗಳ ನೋಂದಣಿ

೯. ನ್ಯಾಸ ಮತ್ತು ನ್ಯಾಸಧಾರಿಗಳು.

೧೦. ಪಾಲುಗಾರಿಕೆ, ಏಜೆನ್ಸಿ, ಸಾಗಣೆ ಕರಾರುಗಳು ಮತ್ತು ಇತರ ವಿಶೇಷ ರೀತಿಯ ಕರಾರುಗಳನ್ನೊಳಗೊಂಡು, ಆದರೆ ಕೃಷಿಭೂಮಿಗೆ ಸಂಬಂಧಿಸಿದ ಕರಾರುಗಳನ್ನು ಹೊರತುಪಡಿಸಿ, ಕರಾರುಗಳು.

೧೧. ಮಧ್ಯಸ್ಥಿಕೆ.

೧೨. ದಿವಾಳಿತನ ಮತ್ತು ದಿವಾಳಿ.

೧೩. ಅಡ್‌ಮಿನಿಸ್ಟ್ರೇಟರ್ಸ್ ಜನರಲ್ ಮತ್ತು ಅಫಿಷಿಯಲ್ ಟ್ರಸ್ಟಿಗಳು.

೧೪. ನ್ಯಾಯಿಕ ಸ್ಟ್ಯಾಂಪ್ ಮೂಲಕ ಸಂಗ್ರಹಿಸಲಾದ ಸುಂಕ ಅಥವಾ ಶುಲ್ಕ ಅಲ್ಲದ ಆದರೆ ಸ್ಟ್ಯಾಂಪ್ ಸುಂಕ ದರಗಳನ್ನು ಒಳಗೊಳ್ಳದ ಸ್ಟ್ಯಾಂಪ್ ಶುಲ್ಕಗಳು.

೧೫. ಪಟ್ಟಿ–೨ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯದ ಸಂಬಂಧದ ಕಾನೂನುಗಳಲ್ಲಿ ಸೇರಿರದ ಕ್ರಮಾರ್ಹ ದೋಷಗಳು.

೧೬. ಈ ಪಟ್ಟಿಯಲ್ಲಿರುವ ಯಾವುದೇ ವಿಷಯದ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಎಲ್ಲ ನ್ಯಾಯಾಲಯಗಳ ಅಧಿಕಾರವ್ಯಾಪ್ತಿ ಹಾಗೂ ಅಧಿಕಾರಗಳು.

೧೭. ಕಾನೂನು, ವೈದ್ಯಕೀಯ ಹಾಗೂ ಇತರ ವೃತ್ತಿಗಳು.

೧೮. ವೃತ್ತ ಪತ್ರಿಕೆಗಳು, ಪುಸ್ತಕಗಳು ಮತ್ತು ಮುದ್ರಣಾಲಯಗಳು.

೧೯. ಬುದ್ಧಿಭ್ರಮಣೆ ಮತ್ತು ಮನೋವೈಕಲ್ಯ. ಬುದ್ಧಿಭ್ರಮಣೆಯಾದವರನ್ನು ಮತ್ತ ಮನೋವಿಕಲರನ್ನು ಸೇರಿದಂತೆ.

೨೦. ವಿಷ ಹಾಗೂ ಅಪಾಯಕಾರಿ ಔಷಧಿಗಳು.

೨೧. ಯಂತ್ರಚಾಲಿತ ವಾಹನಗಳು.

೨೨. ಬಾಯ್ಲರುಗಳು.

೨೩. ಪ್ರಾಣಿ ಹಿಂಸೆ ಪ್ರತಿಬಂಧ.

೨೪. ಅಲೆಮಾರಿತನ; ಅಲೆಮಾರಿ ಮತ್ತು ವಲಸೆಹೋಗುವ ಬುಡಕಟ್ಟುಗಳು.

೨೫. ಕಾರ್ಖಾನೆಗಳು.

೨೬. ಕೆಲಸಕ್ಕೆ ಪೂರಕವಾದ ಪರಿಸ್ಥಿತಿ ಭವಿಷ್ಯ ನಿಧಿ, ನಿಯೋಜಕರ ಹೊಣೆಗಾರಿಕೆ, ಕೆಲಸಗಾರರ ನಷ್ಟಪರಿಹಾರ, ಆರೋಗ್ಯ ವಿಮೆ, ಅಶಕ್ತ ವೇತನ ಮತ್ತು ವೃದ್ಧಾಪ್ಯ ವೇತನ ಸೇರಿದಂತೆ ಕಾರ್ಮಿಕರ ಕಲ್ಯಾಣ.

೨೭. ನಿರುದ್ಯೋಗ ಹಾಗೂ ಸಾಮಾಜಿಕ ವಿಮೆ.

೨೮. ಕಾರ್ಮಿಕ ಸಂಘಗಳು. ಕೈಗಾರಿಕಾ ಮತ್ತು ಕಾರ್ಮಿಕ ವಿವಾದಗಳು.

೨೯. ಮನುಷ್ಯರನ್ನು, ಪ್ರಾಣಿಗಳನ್ನು ಅಥವಾ ಸಸ್ಯಗಳನ್ನು ಬಾಧಿಸುವ ಸೋಂಕು ಅಥವಾ ಅಂಟುರೋಗಗಳು ಅಥವಾ ಕೀಟಗಳು ಒಂದು ಘಟಕದಿಂದ ಇನ್ನೊಂದಕ್ಕೆ ಹರಡದಂತೆ ತಡೆಗಟ್ಟುವುದು.

೩೦. ವಿದ್ಯುಚ್ಛಕ್ತಿ.

೩೧. ಒಕ್ಕೂಟದ ಜಲಮಾರ್ಗಗಳಿಗೆ ಸಂಬಂಧಿಸಿದಂತೆ ಪಟ್ಟಿ–೧ರ ಉಪಬಂಧಗಳಿಗೆ ಒಳಪಟ್ಟು ಯಂತ್ರಚಾಲಿತ ನೌಕೆಗಳಿಗೆ ಸಂಬಂಧಿಸಿದಂತೆ ಒಳನಾಡು ಜಲಮಾರ್ಗಗಳ ಮೇಲೆ ಹಡಗು ಸಾಗಣೆ ಮತ್ತು ನೌಕಾಸಂಚಾರ ಮತ್ತು ಅಂಥ ಜಲಮಾರ್ಗಗಳ ಮೇಲಿನ ಮಾರ್ಗನಿಯಮ ಮತ್ತು ಒಳನಾಡು ಜಲಮಾರ್ಗಗಳ ಮೇಲೆ ಪ್ರಯಾಣಿಕರು ಮತ್ತು ಸರಕುಗಳ ಸಾಗಣೆ.

೩೨. ಪ್ರದರ್ಶನಕ್ಕಾಗಿ ಸಿಮಿಮಾಟೊಗ್ರಾಫ್ ಚಲನಚಿತ್ರಗಳ ಮಂಜೂರಾತಿ.

೩೩. ಒಕ್ಕೂಟ ಪ್ರಾಧಿಕಾರದಡಿ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಗಾದ ವ್ಯಕ್ತಿಗಳು.

೩೪. ಆರ್ಥಿಕ ಹಾಗೂ ಸಾಮಾಜಿಕ ಯೋಜನೆ.

೩೫. ಈ ಪಟ್ಟಿಯಲ್ಲಿರುವ ಯಾವುದೇ ವಿಷಯದ ಉದ್ದೇಶಕ್ಕಾಗಿ ವಿಚಾರಣೆಗಳು ಹಾಗೂ ಅಂಕಿ–ಅಂಶಗಳು.

೩೬. ಈ ಪಟ್ಟಿಯಲ್ಲಿರುವ ಯಾವುದೇ ವಿಷಯದ ಸಂಬಂಧದಲ್ಲಿ ಶುಲ್ಕಗಳು ಆದರೆ ಯಾವುದೇ ನ್ಯಾಯಾಲಯದಲ್ಲಿ ತೆಗೆದುಕೊಳ್ಳುವ ಶುಲ್ಕಗಳನ್ನು ಹೊರತುಪಡಿಸಿ.